ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 4 ಭಾನುವಾರ 2022 | ₹4

ಸಂಪುಟ: 43 | ಸಂಚಿಕೆ: 227 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 4 ಭಾನುವಾರ 2022

ಸಂಪುಟ: 43 | ಸಂಚಿಕೆ: 227 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬಹುರೂಪಿ ರಾಷ್ಟ್ರೀಯ ರಂಗೋತ್ಸವ
ಚಿತ್ರಕಲಾ ಶಿಬಿರಕ್ಕೆ ಚಾಲನೆ

●ಪ್ರತಿಯೊಬ್ಬರ ಅಭಿವ್ಯಕ್ತತೆ ಮತ್ತೊಬ್ಬರ ಹಿತಕ್ಕೆ ಧಕ್ಕೆ ಉಂಟು ಮಾಡಬಾರದು: ಡಿಸಿ ಡಾ.ರಾಜೇಂದ್ರ ●ಎಲ್ಲವನ್ನೂ ಗೌರವಿಸುವುದೇ ಸಮಾನತೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ





ಮೈಸೂರು, ಡಿ.3(ಎಂಟಿವೈ)–ಮೆಗಾ ಇವೆಂಟ್ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಕಾರ್ಯಕ್ರಮದ ಅಂಗವಾಗಿ ಶನಿವಾರ 'ಚಿತ್ರಕಲಾ ಶಿಬಿರ'ಕ್ಕೆ ಚಾಲನೆ ದೊರೆಯಿತು.

ರಂಗಾಯಣದ ಆವರಣದಲ್ಲಿರುವ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಚಿತ್ರಕಲಾ ಶಿಬಿರಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬ ಕಲಾವಿದ ಅಥವಾ ವಿಚಾರವಾದಿಗಳು ಅಭಿವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ನಮ್ಮ ನಂಬಿಕೆ, ಚಿಂತನೆಗಳ ಅಭಿವ್ಯಕ್ತತೆ ಇನ್ನೊಬ್ಬರ ಹಕ್ಕು, ನಂಬಿಕೆಗೆ ಘಾಸಿ ಮಾಡಬಾರದು. ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸುವ ಮುನ್ನ ಎಚ್ಚರಿಕೆ ಇರಬೇಕು. ಇನ್ನೊಬ್ಬರಿಗೆ ನೋವಾಗದಂತೆ ಅದನ್ನು ವ್ಯಕ್ತಪಡಿಸುವ ಸೂಕ್ಷ್ಮತೆ ಇರಬೇಕು. ಸಿಟ್ಟು ಬಂದಾಗ ಇತರರ ಭಾವನೆಗಳನ್ನು ಕೆರಳಿಸುವಂತೆ ವರ್ತಿಸಬಾರದು. ಬಹುತ್ವ ಹಾಗೂ ಉದಾರತೆಯನ್ನು ಗೌರವಿಸುವುದು ಈ ನೆಲದ ಗುಣ ಎಂದರು.

ಕಲಾವಿದರು ತಾವು ಮಾಡುವ ಕೆಲಸದಲ್ಲಿ ಶ್ರದ್ಧೆ ಇರಬೇಕು. ಹೊಸತನಕ್ಕೆ ತೆರೆದುಕೊಂಡಾಗ ಸವಾಲು ಎದುರಾಗುವುದು ಸಾಮಾನ್ಯ. ರಂಗಾಯಣ ಕ್ರಿಯಾಶೀಲ ವೇದಿಕೆಯಾಗಿದ್ದು, ಅದನ್ನು ಯುವ ಉತ್ಸಾಹಿಗಳು ಬಳಸಿಕೊಳ್ಳಬೇಕು. ರಂಗ ಕಲೆಯಲ್ಲಿ ತೊಡಗಿಸಿಕೊಂಡಿರುವವರು ಸಮಾಜದಲ್ಲಿ ದೊಡ್ಡ ವ್ಯಕ್ತಿಗಳಾಗುತ್ತಾರೆ. ರಂಗಭೂಮಿಗೆ ಎಲ್ಲ ಕಡೆಯಿಂದಲೂ ಜ್ಞಾನ–ವಿಚಾರಗಳು ಹರಿದು ಬರುತ್ತವೆ. ಬಹುರೂಪಿ ರಂಗೋತ್ಸವಕ್ಕೆ ದೇಶದ ವಿವಿಧೆಡೆಗಳಿಂದ ಕಲಾವಿದರು, ತಂಡಗಳು ಬರುತ್ತಿವೆ. ಎಲ್ಲರೊಂದಿಗೆ ಬೆರೆಯುವ ಅವಕಾಶ ಸಿಗುತ್ತಿದೆ ಎಂದರು.


ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಮಾತನಾಡಿ, ಎಲ್ಲವನ್ನು ಗೌರವಿಸುವುದೇ ಸಮಾನತೆಯಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಖ್ಯಾನ ಮಾಡುವವರು ಕೆಲವೊಂದನ್ನು ಮಾತ್ರ ಹೇಳಿ, ಇನ್ನೊಂದಷ್ಟನ್ನು ಹೇಳಬಾರದು ಎನ್ನುತ್ತಾರೆ. ಅದು ಕೂಡ ಅಭಿವ್ಯಕ್ತಿಗೆ ಧಕ್ಕೆ ತಂದಂತೆಯೇ ಆಗಿದೆ. ಅಭಿವ್ಯಕ್ತಿಯನ್ನು ಸಹಿಸದೇ ವಿರೋಧ ಮಾಡುವವರಿಗೆ ಸ್ವೀಕರಿಸುವ ಮನೋಭಾವವೇ ಇರುವುದಿಲ್ಲ. 'ಟಿಪ್ಪು ನಿಜ ಕನಸುಗಳು' ನಾಟಕ ನಿಲ್ಲಿಸಬೇಕೆಂದು ತಡೆಯಾಜ್ಞೆ ತರಲು ಮುಂದಾಗುವುದು, ನಮ್ಮ ಹಕ್ಕಿನ ಮೇಲಿನ ಹಲ್ಲೆ ನಡೆಸಿದಂತೆ. ನಿರ್ದಿಷ್ಟ ಧರ್ಮದ ಬಗ್ಗೆ ಮಾತ್ರ ಪ್ರಶ್ನಿಸಬೇಡಿ ಎನ್ನುವ ಜಾತ್ಯತೀತರು ನಮ್ಮಲ್ಲಿದ್ದಾರೆ. ಭಾರತ ಮಾತೆಗೆ ಗೌರವ ನೀಡದ ಗ್ಯಾಂಗ್ ಇಂದಿಗೂ ನಮ್ಮ ನಡುವೆಯೇ ಇದೆ ಎಂದರು.

ಈ ಹಿಂದೆ ಎಂ.ಎಫ್.ಹುಸೇನ್ ಅವರು ದೇವತೆಗಳ ಬೆತ್ತಲೆ ಚಿತ್ರ ಬಿಡಿಸಿ ಅಭಿವ್ಯಕ್ತಿ ಮೆರೆದಿದ್ದರು. ಆಗ ಅದನ್ನು ವಿರೋಧಿಸದೇ ಭಾರತೀಯರು ಸಹಿಸಿಕೊಂಡರು. ಆದರೆ, ಒಂದು ನಿರ್ದಿಷ್ಟ ಧರ್ಮದ ಮೇಲೆ ▶ 9ನೇ ಪುಟಕ್ಕೆ

ಅಂಗವಿಕಲರಿಗೆ ವಿಶೇಷ ವಿಮಾ ಯೋಜನೆ: ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ಸರ್ಕಾರದಿಂದಲೇ ಐದು ಲಕ್ಷದವರೆಗೆ ಚಿಕಿತ್ಸಾ ವೆಚ್ಚ ಭರಿಸುವ ಯೋಜನೆ ಜಾರಿ

●ವಿಶ್ವ ವಿಕಲಚೇತನ ದಿನಾಚರಣೆಯಲ್ಲಿ ಸಿಎಂ ಆಶ್ವಾಸನೆ ●ಸರ್ಕಾರ ನಿರ್ಮಿಸುವ ಮನೆಗಳಲ್ಲಿ ಶೇ.3 ಅಂಗವಿಕಲರಿಗೆ ಮೀಸಲು



ಬೆಂಗಳೂರು, ಡಿ. 3(ಕೆಎಂಶಿ)–ಅಂಗವಿಕಲರ ಆರೋಗ್ಯಕ್ಕಾಗಿ ವಿಶೇಷ ವಿಮಾ ಯೋಜನೆ ರೂಪಿಸಿ, 5 ಲಕ್ಷದವರೆಗಿನ ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸುವ ಯೋಜನೆ ಪ್ರಾರಂಭಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಅವರು ಇಂದು ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ವತಿಯಿಂದ ಆಯೋಜಿಸಿದ್ದ ವಿಶ್ವ ವಿಕಲಚೇತನರ ದಿನಾಚರಣೆ–2022 ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಕಲಚೇತನರು ಧೈರ್ಯದಿಂದ ಯಶಸ್ವಿಯಾಗಿ ಬದುಕು ನಡೆಸಲು ಸರ್ಕಾರ ಎಲ್ಲಾ ಸಹಕಾರವನ್ನು ನೀಡಲಿದೆ. ಸರ್ಕಾರ ನಿರ್ಮಿಸುವ ಮನೆಗಳಲ್ಲಿ ಅಂಗವಿಕಲರಿಗೆ ಶೇ.3ರಷ್ಟು ಮೀಸಲಾತಿಯನ್ನು ನೀಡಲಾಗುವುದು. ಬುದ್ಧಿಮಾಂದ್ಯ ಮಕ್ಕಳಿಗೆ ಶೆಲ್ಟರ್ಡ್ ವರ್ಕ್‌ಶಾಪ್ ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದರು. ಸರ್ಕಾರದ ವತಿಯಿಂದ ಅಂಗವಿಕಲರಿಗೆ ಪವರ್ಡ್ ಟ್ರೈಸೈಕಲ್ ನೀಡಲಾಗುತ್ತಿದೆ. ಈ ವರ್ಷ ಈ ಯೋಜನೆಗೆ 25 ಕೋಟಿ ರೂ.ಗಳನ್ನು ನೀಡಿ 2 ಸಾವಿರ ಟ್ರೈ ಸೈಕಲ್‌ಗಳನ್ನು ಮಾರ್ಚ್ 31ರೊಳಗೆ ನೀಡಲು ತೀರ್ಮಾನಿಸಿರುವುದಾಗಿ ತಿಳಿಸಿದರು. ವಸತಿ ಶಾಲೆಗಳಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ನೀಡಲಾಗುತ್ತಿದ್ದ 6800 ರೂ.ಗಳನ್ನು 10200 ರೂ.ಗಳಿಗೆ ಹೆಚ್ಚಿಸಲಾಗಿದೆ. ಬುದ್ಧಿಮಾಂದ್ಯ ಮಕ್ಕಳ



ವಸತಿರಹಿತ ಶಾಲೆಗಳಲ್ಲಿ ನೀಡಲಾಗುತ್ತಿದ್ದ 6000 ರೂ.ಗಳನ್ನು 9000 ರೂ.ಹೆಚ್ಚಿಸಿ ನೀಡಲಾಗುತ್ತಿದೆ.

ಅಂಧ, ಕಿವುಡ ಮಕ್ಕಳ ವಸತಿ ಶಾಲೆಗಳಲ್ಲಿರುವವರಿಗೆ 9300 ರೂ.ಗಳನ್ನು, ವಸತಿರಹಿತ ಶಾಲೆಗಳ ಅಂಧಕಿವುಡ ಮಕ್ಕಳಿಗೆ 7800 ರೂ.ಗಳನ್ನು ,ಹಗಲುಸೇವೆ ಯೋಗಕ್ಷೇಮ ಕೇಂದ್ರಗಳಿಗೆ 15000 ರೂ.ಗಳನ್ನು , ವೃದ್ಧಾಶ್ರಮ ಕೇಂದ್ರಗಳ ನಿರ್ವಹಣೆಗೆ 12 ಲಕ್ಷ ರೂ. ನೀಡಲಾಗುತ್ತಿದೆ. ಮುಖ್ಯಮಂತ್ರಿಯಾದ ತಕ್ಷಣ ವಿಕಲಚೇತನರ ಮಾಸಾಶನವನ್ನು ಹೆಚ್ಚಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಸವಲತ್ತುಗಳನ್ನು ಹೆಚ್ಚಿಸಲಾಗುವುದು. ಆಸಿಡ್ ದಾಳಿಯಿಂದ ಬಳಲುವ ಹೆಣ್ಣು ಮಕ್ಕಳಿಗೆ 3000 ರೂ. ದಿಂದ 10000 ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ. ವಿಕಲಚೇತನರ ವಿದ್ಯಾಭ್ಯಾಸಕ್ಕಾಗಿ ಮುಂದಿನ ಬಜೆಟ್‌ನಲ್ಲಿ ವಿಶೇಷ ಅನುದಾನವನ್ನು ಮೀಸಲಿರಿಸಲಾಗುವುದು ಎಂದರು. ದೇವರು ಸೃಷ್ಟಿ ಮಾಡುವಾಗ ಹಲವಾರು ಸವಾಲುಗಳನ್ನು ಮನುಷ್ಯನಿಗೆ ಇಟ್ಟಿರುತ್ತಾನೆ. ಎಲ್ಲ ಅಂಗ ಇದ್ದವರಿಗೂ ದೇವರು ಸವಾಲು ಮುಂದಿಟ್ಟಿರುತ್ತಾನೆ. ಅಂಗಾಂಗಳ ಕೊರತೆ ಇದೆಯೆಂಬ ಕೀಳರಿಮೆ ಬೇಡ. ವಿಕಲಚೇತನರು ವಿಶೇಷವಾದ ದೇವರ ಮಕ್ಕಳು. ಸವಾಲುಗಳನ್ನು ಎದುರಿಸುವ ವಿಶೇಷ ಶಕ್ತಿಯನ್ನು ಹಾಗೂ ಮನೋಸ್ಥೈರ್ಯವನ್ನು ದೇವರು ನಿಮಗೆ ನೀಡಿದ್ದಾನೆ. ನೀವು ಆತ್ಮವಿಶ್ವಾಸದಿಂದ ಇರಬೇಕು. ನಾವೂ ಇತರರಂತೆ ಬದುಕಿ ತೋರಿಸುತ್ತೇವೆ ಎಂಬ ಛಲ ಮತ್ತು ನಂಬಿಕೆ ಇರಬೇಕು. ನಿಮಗೆ ಅನುಕಂಪದ ಅವಶ್ಯಕತೆ ಇಲ್ಲ. ವಿಕಲಚೇತನರನ್ನು ಸಶಕ್ತಗೊಳಿಸುವ ಸಮಾಜದ ಅವಶ್ಯಕತೆ ಇದೆ. ಕೆಳಗೆ ಬೀಳುವ ವ್ಯಕ್ತಿಯನ್ನು ಮೇಲೆತ್ತುವುದು ಮಾನವ ಧರ್ಮ, ಅದನ್ನು ಮನುಷ್ಯರು ಮರೆಯದೇ ನೆರವು ನೀಡಬೇಕು. ಇದು ವಿಶ್ವ ಮಾನವ ಸಮಾಜ. ಒಬ್ಬರಿಗೊಬ್ಬರು ಕೈ ಹಿಡಿದು ನಡೆಯುವ ಮಾನವೀಯ ಗುಣವನ್ನು ಎಲ್ಲರೂ ಪಾಲಿಸಬೇಕು ಎಂದರು. ಎಲ್ಲ ಅಂಗಾಂಗಗಳು ಸರಿಯಿದ್ದವರಿಗೂ ಸಮಾಧಾನ ಇರುವುದಿಲ್ಲ. ಪರೋಪಕಾರದ ಗುಣವನ್ನು ಬೆಳೆಸಿಕೊಂಡರೆ ಮಾತ್ರ ಸಮಾಧಾನ ದೊರೆಯುತ್ತದೆ. ಸಶಕ್ತರಾಗಿರುವವರು ದಿವ್ಯಾಂಗ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ಸಹಾಯ ಮಾಡಬೇಕು. ರಾಜ್ಯದಲ್ಲಿ ಸುಮಾರು 40 ರಿಂದ 50 ಲಕ್ಷ ದಿವ್ಯಾಂಗ ಮಕ್ಕಳಿದ್ದು, ಅವರ ಬೆಳವಣಿಗೆಗೆ 7 ಕೋಟಿ ಕನ್ನಡಿಗರು ಸಹಾಯ ಮಾಡುವ ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕು. ದೇವರ ಮಕ್ಕಳಿಗೆ ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಕರೆ ನೀಡಿದರು.

ಚಿರತೆ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೂ 15 ಲಕ್ಷ ರೂ.ಪರಿಹಾರ

●ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ ●ಚಿರತೆ ಹಿಡಿದು ಕಾಡಿಗೆ ಬಿಡಲು ಸೂಚನೆ



ಬೆಂಗಳೂರು, ಡಿ.3(ಕೆಎಂಶಿ)–ಚಿರತೆ ದಾಳಿಯಿಂದ ಮೃತಪಟ್ಟ ಕುಟುಂಬದವರಿಗೆ 15 ಲಕ್ಷ ರೂ.ಗಳ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆನೆ ದಾಳಿಯಿಂದ ಮೃತಪಟ್ಟ ಕುಟುಂಬದವರಿಗೆ ನೀಡಿದಂತೆ ಚಿರತೆ ದಾಳಿಯಲ್ಲಿ ಮೃತಪಟ್ಟವರ ಕುಟುಂಬಕ್ಕೂ ಪರಿಹಾರ ಒದಗಿಸಲಾಗುವುದು ಎಂದರು. ಮೊದಲು ಅರಣ್ಯದಂಚಿನಲ್ಲಿ ▶ 9ನೇ ಪುಟಕ್ಕೆ

ವಿಶೇಷಚೇತನರ ನಾನಾ ಪ್ರತಿಭೆ ಪ್ರದರ್ಶನ

●ದಸರಾ ವಸ್ತುಪ್ರದರ್ಶನ ಆವರಣದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ
●ವಿವಿಧ ವೇಷ-ಭೂಷಣ ತೊಟ್ಟು, ಪರಿಸರ ಪ್ರೇಮ ಮೆರೆದು ಸಂಭ್ರಮಿಸಿದರು





ಮೈಸೂರು, ಡಿ.3(ಎಂಟಿವೈ)– ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಶನಿವಾರ ದೇವರ ಮಕ್ಕಳ ಸಂಭ್ರಮ ಮನೆ ಮಾಡಿತ್ತು. ವಿವಿಧೆಡೆಯಿಂದ ಆಗಮಿಸಿದ್ದ ವಿಶೇಷಚೇತನರು ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಿ ಎಲ್ಲರನ್ನು ನಿಬ್ಬೆರಗಾಗಿಸಿದರು. ಆ ಮೂಲಕ ನಾವು ಯಾರಿಗೂ ಕಡಿಮೆ ಇಲ್ಲ ಎಂಬ ಸಂದೇಶ ರವಾನಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ದಸರಾ ವಸ್ತು ಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಮಂಟಪದಲ್ಲಿ ಹಮ್ಮಿಕೊಂಡಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಮಕ್ಕಳ ಸಾಂಸ್ಕೃತಿಕ ಕಲೆಗಳ ಪ್ರದರ್ಶನ ಕಣ್ಮನ ಸೆಳೆಯಿತು. ನೃತ್ಯ ಸೇರಿದಂತೆ ವಿವಿಧ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ವಿಶೇಷ ಮಕ್ಕಳ ಸಂಭ್ರಮ ಮೇಳೈಸಿತ್ತು. ಕೆಲವು ಮಕ್ಕಳು ವ್ಹೀಲ್‌ಚೇರ್‌ನಲ್ಲಿಯೇ ಕುಳಿತು ಹಾಡಿಗೆ ಮೈ ಕೈ ಕುಣಿಸಿದರೆ, ಅವರಿಗೆ ಪಾಲಕರು ಮತ್ತು ಶಿಕ್ಷಕಿಯರು ನೆರವು ನೀಡಿದರು. ಪ್ರಕೃತಿ ಸೊಬಗನ್ನು ಅಭಿವ್ಯಕ್ತಿಗೊಳಿಸಲು ಮಕ್ಕಳು ವಿಭಿನ್ನ ವೇಷತೊಟ್ಟು ವೇದಿಕೆಗೆ ಆಗಮಿಸಿ, ಪರಿಸರ ಪ್ರೇಮ ಮೆರೆದರು. ಭರತನಾಟ್ಯ, ಫ್ಯೂಷನ್ ಸಂಗೀತಕ್ಕೆ ವಿಶೇಷ ಚಿಣ್ಣರು ಹೆಜ್ಜೆ ಹಾಕಿ ಗಮನ ಸೆಳೆದರು. ವಿವಿಧ ವಿಶೇಷ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಅಲ್ಲದೆ, ಈ ಮಕ್ಕಳು ನಾನಾ ವೇಷಭೂಷಣ ಧರಿಸಿ ಚಲನಚಿತ್ರ ಗೀತೆ, ಭಾವಗೀತೆ, ಹಿಂದಿ ಚಿತ್ರಗೀತೆಗಳಿಗೆ ನೃತ್ಯ ಪ್ರದರ್ಶಿಸಿದರು.

ಶೇ.5ರಷ್ಟು ಸಿಗುವ ಅನುದಾನ ಬಳಕೆ ಮಾಡಿಕೊಳ್ಳಿ: ಇದಕ್ಕೂ ಮುನ್ನ ಕಾರ್ಯಕ್ರಮದಲ್ಲಿ ಮಾತನಾಡಿದ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ವಿಕಲಚೇತನರಿಗೆ ಶೇ.5ರಷ್ಟು ಸಿಗುವಂತಹ ಯಾವುದೇ ರೀತಿಯ ಅನುದಾನವನ್ನು ಅವರ ಕೆಲಸಗಳಿಗಾಗಿಯೇ ಬಳಕೆ ಮಾಡಬೇಕು. ಎಲ್ಲಾ ▶ 9ನೇ ಪುಟಕ್ಕೆ

ಕರ್ನಾಟಕ ವಿಧಾನಸಭಾ ಚುನಾವಣೆ ಹಿನ್ನೆಲೆ

ನಾಳೆ ದೆಹಲಿಯಲ್ಲಿ ಗೃಹ ಸಚಿವ ಅಮಿತ್ ಷಾ ಮಹತ್ವದ ಸಭೆ

ಬೆಂಗಳೂರು, ಡಿ.3(ಕೆಎಂಶಿ)–ಕರ್ನಾಟಕ ವಿಧಾನಸಭೆ ಚುನಾವಣೆಗೆ ರೋಡ್ ಮ್ಯಾಪ್ ಸಿದ್ಧಪಡಿಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಡಿ.5ರಂದು ದೆಹಲಿಯಲ್ಲಿ ಮಹತ್ವದ ಸಭೆ ಕರೆದಿದ್ದಾರೆ.

ಗುಜರಾತ್ ವಿಧಾನಸಭೆಗೆ ಕೊನೆಯ ಹಂತದ ಮತದಾನ ಮುಗಿಯುತ್ತಿದ್ದಂತೆ ಕರ್ನಾಟಕದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲು ಚುನಾವಣಾ ತಂತ್ರಗಾರಿಕೆಗಾಗಿ ಎರಡು ದಿನ ಸಭೆ ನಡೆಸಲಿದ್ದಾರೆ. ಅಮಿತ್ ಷಾ ಕರೆದಿರುವ ಸಭೆಗೆ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕರ್ನಾಟಕದ ಚುನಾವಣೆ ಉಸ್ತುವಾರಿ ಹೊಣೆ ಹೊತ್ತಿರುವ ಕೇಂದ್ರ ಸಚಿವ ಪಿಯೂಷ್ ಗೋಯಲ್ ಹಾಗೂ ಧರ್ಮೇಂದ್ರ ಪ್ರಧಾನ್ ಭಾಗವಹಿಸಲಿದ್ದಾರೆ. ಈ ಸಭೆಗೆ ರಾಜ್ಯದಿಂದ ಮುಖ್ಯಮಂತ್ರಿ ಹಾಗೂ ರಾಜ್ಯಾಧ್ಯಕ್ಷರಿಗೆ ಕೊನೆ ಹಂತದಲ್ಲಿ ಆಹ್ವಾನ ಬರುವ ನಿರೀಕ್ಷೆ ಇದೆ. ಕರ್ನಾಟಕದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಬಿಜೆಪಿ ರಾಷ್ಟ್ರನಾಯಕರು ಪಣ ತೊಟ್ಟಿದ್ದಾರೆ. ಆದರೆ, ಇಲ್ಲಿನ ಪ್ರತಿಪಕ್ಷ ಕಾಂಗ್ರೆಸ್‌ನ ಆರೋಪಗಳು, ಸರ್ಕಾರಕ್ಕಿರುವ ವಿರೋಧಿ ಅಲೆಯ ನಡುವೆಯೂ ಮತ್ತೆ ಅಧಿಕಾರಕ್ಕೆ ತರಲೇಬೇಕೆಂಬ ಉದ್ದೇಶದಿಂದ ಚುನಾವಣಾ ರೋಡ್ ಮ್ಯಾಪನ್ನು ಅಂದು ಅಮಿತ್ ಷಾ ಸಿದ್ಧಪಡಿಸಲಿದ್ದಾರೆ.



ರಾಜ್ಯ ವಿಧಾನಸಭೆಗೆ 2023ರ ಏಪ್ರಿಲ್, ಮೇನಲ್ಲಿ ಚುನಾವಣೆ ಜರುಗಲಿದ್ದು, ಈಗಾಗಲೇ ಮೂರು ಸಮೀಕ್ಷಾ ವರದಿಗಳನ್ನು ವರಿಷ್ಠರು ತರಿಸಿಕೊಂಡಿದ್ದಾರೆ. ಸಮೀಕ್ಷಾ ವರದಿಗಳ ಪ್ರಕಾರ ಕರ್ನಾಟಕದ ಬಿಜೆಪಿಗೆ ಅಂತಹ ಜನಬಲವಿಲ್ಲ ಎಂಬುದು ಸ್ಪಷ್ಟವಾಗಿದೆ.

ಕಾಂಗ್ರೆಸ್‌ನ ಅಪಪ್ರಚಾರದ ನಡುವೆ ಪಕ್ಷವನ್ನು ಬಹುಮತದಿಂದ ಅಧಿಕಾರಕ್ಕೆ ತರಬೇಕು. ರಾಜ್ಯದ ನಾಯಕರನ್ನು ಮುಂದಿಟ್ಟುಕೊಂಡು ಹೋದರೆ,ಬಿಜೆಪಿ ಕನಸು ನನಸಾಗುವುದಿಲ್ಲ. ಪಕ್ಷ ಮೂರು ಬಾರಿ ಅಧಿಕಾರಕ್ಕೆ ▶ 9ನೇ ಪುಟಕ್ಕೆ

ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಶ್ರೇಷ್ಠತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಿರಿ

ಉತ್ತಮ ಆಡಳಿತ ಮಾಸಾಚರಣೆ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಲಹೆ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಉತ್ತಮ ಆಡಳಿತ ಮಾಸಾಚರಣೆ ಕಾರ್ಯಕ್ರಮವನ್ನು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಉದ್ಘಾಟಿಸಿದರು. (ಎಡದಿಂದ) ಚಾಣಕ್ಯ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಯಶವಂತ್ ಡೊಂಗ್ರೆ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್.ಹೆಗ್ಡೆ, ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ಹಲಸೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ. ಹೆಚ್.ರಾಜಶೇಖರ್, ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಪಿ.ಜ್ಞಾನಪ್ರಕಾಶ್, ಶಾಸಕ ಎಲ್.ನಾಗೇಂದ್ರ ಹಾಗೂ ಕುಲಸಚಿವೆ ವಿ.ಆರ್.ಶೈಲಜಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.3(ಆರ್‌ಕೆ)–ಮೈಸೂರು ವಿಶ್ವವಿದ್ಯಾನಿಲಯದ ಶ್ರೇಷ್ಠತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಂತೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ಕ್ರಾಫರ್ಡ್ ಭವನದಲ್ಲಿ 'ಉನ್ನತ ಶಿಕ್ಷಣದಲ್ಲಿ ಸುಶಾಸನ: ಪರಿಕಲ್ಪನೆ ಮತ್ತು ಅನುಷ್ಠಾನ' (Good Governance in Higher Education: Concept and Implimentation) ವಿಷಯ ಕುರಿತ ಉತ್ತಮ ಆಡಳಿತ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ರಾಜ–ಮಹಾರಾಜರು ಸ್ಥಾಪಿಸಿದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯವು ತನ್ನ ಗುಣಮಟ್ಟದಿಂದಾಗಿ ಇನ್‌ಸ್ಟಿಟ್ಯೂಷನ್ ಆಫ್ ಎಕ್ಸಲೆನ್ಸ್ ಆಗಿದೆ. ಅದನ್ನು ಅಲ್ಲಿಗೇ ಸೀಮಿತ ಮಾಡಿರುವುದು ವಿಷಾದನೀಯ. ಸಂಶೋಧನೆ, ಶೈಕ್ಷಣಿಕ ಸಾಧನೆಗಳ ಮೂಲಕ ಇದನ್ನು ಇನ್‌ಸ್ಟಿಟ್ಯೂಷನ್ ಆಫ್ ಎಮಿನೆನ್ಸ್ ಖ್ಯಾತಿಗೆ ಕೊಂಡೊಯ್ಯಬೇಕಾಗಿದೆ ಎಂದು ಅವರು ತಿಳಿಸಿದರು.

ಉತ್ತಮ ಆಡಳಿತ (ಸುಶಾಸನ) ಒಂದು ದಿನಕ್ಕೆ ಸೀಮಿತವಾಗದೇ ನಿರಂತರವಾಗಿ ನಡೆಯಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಅಳವಡಿಸಿ ಆಡಳಿತದಲ್ಲಿ ಪಾರದರ್ಶಕತೆ, ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದಲೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದು ಉನ್ನತ ಶಿಕ್ಷಣದಲ್ಲಿ ಸುಧಾರಣೆ ತರುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎಂದು ಸಚಿವರು ನುಡಿದರು. ಸ್ವಾರ್ಥ, ಪ್ರತಿಷ್ಠೆ ಬಿಟ್ಟು ಸಂಸ್ಥೆಯ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಮೂಲಕ ಸಮಾಜದ ಭವಿಷ್ಯ ರೂಪಿಸುವ ಜವಾಬ್ದಾರಿ ನಮ್ಮದಾಗಿದೆ. ಸಾಮಾಜಿಕ ನ್ಯಾಯ, ತುಳಿತಕ್ಕೊಳಗಾದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಶಿಕ್ಷಣವನ್ನು ಎಲ್ಲ ವರ್ಗದವರಿಗೂ ತಲುಪಿಸುವ ಸಲುವಾಗಿ ಒಡೆಯರ್ ಸ್ಥಾಪಿಸಿದ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಆರಂಭಿಸಿದ ಮಾನಸ ಗಂಗೋತ್ರಿಯಲ್ಲಿ ಜ್ಞಾನ ನಿರಂತರವಾಗಿ ಹರಿಯುತ್ತಿರಬೇಕು ಎಂದು ಅಶ್ವತ್ಥನಾರಾಯಣ ಅವರು ಇದೇ ಸಂದರ್ಭ ನುಡಿದರು. ಸರ್ವಪಲ್ಲಿ ರಾಧಾಕೃಷ್ಣ, ಸರ್ ಎಂ.ವಿಶ್ವೇಶ್ವರಯ್ಯರಂತಹ ಮಹಾಪುರುಷರು ಹಾಕಿಕೊಟ್ಟ ತಳಹದಿಯಿಂದಾಗಿ ವಿಶ್ವವಿದ್ಯಾನಿಲಯವು ಶ್ರೇಷ್ಠ ಸಂಸ್ಥೆಯಾಗಿದ್ದು, ನ್ಯಾಕ್ ಮಾನ್ಯತೆ ಪಡೆದ ಮೊದಲ ವಿಶ್ವವಿದ್ಯಾನಿಲಯ ಎಂಬ ಖ್ಯಾತಿ ಗಳಿಸಿದೆ. ಅದು ಗುಣಮಟ್ಟದಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಎಮಿನೆನ್ಸ್ ಆಗಬೇಕು. ಅದಕ್ಕಾಗಿ ಸರ್ಕಾರ ಡಿಜಿಟಲೈಸ್ ಮಾಡಿ ಉನ್ನತ ಶಿಕ್ಷಣ ಸರ್ವರಿಗೂ ತಲುಪಿಸಲು ಸುಧಾರಣೆ ತರುತ್ತಿದೆ. ಸ್ಪರ್ಧೆ ಮತ್ತು ಸವಾಲಿನ ಮಧ್ಯೆ ಬದುಕಬೇಕಾಗಿರುವುದರಿಂದ ಗುಣಮಟ್ಟದ ▶ 9ನೇ ಪುಟಕ್ಕೆ

ಕಾಂಗ್ರೆಸ್‌ನವರು ಅಧಿಕಾರಕ್ಕೆ ಬರೋಲ್ಲ

ಮೈಸೂರು, ಡಿ.3(ಆರ್‌ಕೆ)–ಕಾಂಗ್ರೆಸ್‌ನವರು ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರೋದಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಭವಿಷ್ಯ ನುಡಿದಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಅಧಿಕಾರಕ್ಕೆ ಬರುತ್ತೇವೆಂದು ಕನಸು ಕಾಣುತ್ತಿರುವ ಕಾಂಗ್ರೆಸ್‌ನವರು ತಾವೇ ಕಿತ್ತಾಡುತ್ತಿದ್ದಾರೆ. ಅವರು ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರೋದಿಲ್ಲ. 2023ರ ಚುನಾವಣೆಯಲ್ಲೂ ಬಿಜೆಪಿ ಸರ್ಕಾರ ಬರುತ್ತದೆ ಎಂದರು.

ರೌಡಿ ಶೀಟರ್‌ಗಳನ್ನು ಬಿಜೆಪಿಗೆ ಸೇರಿಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಮಾಡುತ್ತಿರುವ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಈಗ ಆ ವಿಚಾರ ಏಕೆ? ಬೇರೆ ವಿಷಯವಿದ್ದರೆ ಕೇಳಿ. ಕಾಂಗ್ರೆಸ್‌ನವರು ಹತಾಶ ಮನೋಭಾವನೆಯಿಂದ ಆಧಾರರಹಿತ ಆರೋಪ ಮಾಡುವುದನ್ನು ಬಿಟ್ಟರೆ ಬೇರೆ ಕೆಲಸವಿಲ್ಲ ಎಂದರು.

ಸಿದ್ದರಾಮಯ್ಯರನ್ನು ಸಿದ್ರಾಮುಲ್ಲಾ ಖಾನ್ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿಕೆ ಮುಂದಿಟ್ಟು ಚಿಕ್ಕಮಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಬಗ್ಗೆ ಪ್ರತಿಕ್ರಿಯಿಸಿದ ಡಾ. ಅಶ್ವತ್ಥನಾರಾಯಣ, ಸಿದ್ದರಾಮಯ್ಯನವರ ಮನಸ್ಥಿತಿ ಏನೆಂಬುದು ಜಗತ್ತಿಗೇ ಗೊತ್ತು. ಅವರು ತಮ್ಮ ಹೆಸರನ್ನು ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಆತ : ಯಾಕೆ ಬೇಜಾರಾಗಿದ್ದೀಯಾ?
ಈತ : ಹೆಂಡತಿ ಮಕ್ಕಳಿಗೆ ರಜೆ ಇತ್ತು. ತವರಿಗೆ ಹೋಗಿ ಬರ್ತೀನಿ ಅಂದ್ಲು. ಬೇಸರಗೊಂಡವರ ಹಾಗೆ ನಟಿಸಿದೆ. ಅವಳು ಹೋಗುವುದನ್ನೇ ಕ್ಯಾನ್ಸಲ್ ಮಾಡಿಬಿಡಬೇಕಾ!

ಮೈಸೂರು ಮಿತ್ರ

ಭಾನುವಾರ, 4 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಿರಸ್ಕರಿಸಬಾರದ ಒಂದು ಸುಖವಿದೆ; ಅದೇ ಇನ್ನೊಬ್ಬರಿಗಾಗಿ ಬದುಕು ಸವೆಸುವುದು. –ಲಿಯೋ ಟಾಲ್‌ಸ್ಟಾಯ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೇ ಇರನು ವಿರೋಧವೇಕೆ?

ನಿಮ್ಮ ಪತ್ರಗಳು

ರಿಂಗ್ ರಸ್ತೆ ನಿವಾಸಿಗಳಿಗೆ ಬಸ್ ಸೌಲಭ್ಯ ಒದಗಿಸುವಂತೆ ಮನವಿ

ಮಾನ್ಯರೆ,

ರಿಂಗ್ ರಸ್ತೆಯ ನಿವಾಸಿಗಳಿಗೆ ಬಸ್ ಸೌಕರ್ಯವಿಲ್ಲದೆ ತೊಂದರೆಯಾಗಿದೆ. ಸಿಟಿ ಬಸ್ ನಿಲ್ದಾಣದಿಂದ ಹಾರ್ಡಿಂಜ್ ಸರ್ಕಲ್, ನಜರ್‌ಬಾದ್, ಮಿಲ್ಕ್ ಡೈರಿ, ನ್ಯೂ ಡಿಸಿ ಆಫೀಸ್, ಎಂಆರ್‌ಸಿ ಕಣ್ಣಿನ ಆಸ್ಪತ್ರೆ, ಟೆರೇಷಿಯನ್ ಕಾಲೇಜು, ದೇವೇಗೌಡ ಸರ್ಕಲ್, ಮಾನಸಿನಗರ, ವಿಟಿಯು ಕಾಲೇಜು, ಸಾತಗಳ್ಳಿ ಬಸ್ ನಿಲ್ದಾಣ, ನಾರಾಯಣ ಹೃದ್ರೋಗ ಆಸ್ಪತ್ರೆ, ನಾಯ್ಡುನಗರ ಬಸ್ ನಿಲ್ದಾಣ, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಶಿವರಾತ್ರೀಶ್ವರನಗರ, ಬನ್ನಿಮಂಟಪ, ಹೈವೇ ಸರ್ಕಲ್, ಆರ್‌ಎಂಸಿ, ಕೆ.ಆರ್. ಆಸ್ಪತ್ರೆ ಮಾರ್ಗ ನಗರ ಬಸ್ ನಿಲ್ದಾಣಕ್ಕೆ ಒಂದು ಬಸ್ ಅನ್ನು ಹಾಗೂ ಸಿಬಿಎಸ್‌ನಿಂದ ಗ್ರಾಮಾಂತರ ಬಸ್ ನಿಲ್ದಾಣ, ಕೆ.ಆರ್. ಆಸ್ಪತ್ರೆ, ಆರ್‌ಎಂಸಿ, ಹೈವೇ ಸರ್ಕಲ್, ಬನ್ನಿಮಂಟಪ, ಶಿವರಾತ್ರೀಶ್ವರನಗರ, ಮಣಿಪಾಲ್ ಆಸ್ಪತ್ರೆ, ಆರ್‌ಟಿಓ ಕಚೇರಿ, ನಾಯ್ಡುನಗರ ಜಂಕ್ಷನ್, ರಾಜೀವ್‌ನಗರ ಜಂಕ್ಷನ್, ಸಾತಗಳ್ಳಿ ಬಸ್ ನಿಲ್ದಾಣ, ವಿಟಿಯು ಕಾಲೇಜು, ಮಾನಸೀನಗರ, ದೇವೇಗೌಡ ಸರ್ಕಲ್ ಟೆರೇಷಿಯನ್ ಕಾಲೇಜು, ನ್ಯೂ ಡಿಸಿ ಆಫೀಸ್, ಎಂಆರ್‌ಸಿ ಕಣ್ಣಿನ ಆಸ್ಪತ್ರೆ, ಮಿಲ್ಕ್ ಡೈರಿ, ನಜರ್‌ಬಾದ್, ಹಾರ್ಡಿಂಜ್ ಸರ್ಕಲ್ ಮಾರ್ಗವಾಗಿ ಸಿಬಿಎಸ್ ತಲುಪುವಂತೆ ಬಸ್‌ಗಳ ಸೇವೆಯನ್ನು ಕಲ್ಪಿಸುವಂತೆ ಸಂಸದರಾದ ಪ್ರತಾಪ್ ಸಿಂಹ, ಶಾಸಕರು, ಅಧಿಕಾರಿಗಳಲ್ಲಿ ಮನವಿ.

–ಎನ್.ಆರ್. ವಿಜಯಕುಮಾರ್, ಮಾನಸೀನಗರ, ಮೈಸೂರು.

ಇಂತಹವರ ಮಾತಿಗೆ ಮಹತ್ವ ನೀಡಬಾರದು

ಮಾನ್ಯರೆ,

ಇತ್ತೀಚೆಗೆ ಸಿದ್ದರಾಮಯ್ಯನವರ 75 ವರ್ಷದ ಕಾರ್ಯಕ್ರಮದಲ್ಲಿ ಕೆಲವು ಅವಿವೇಕಿ ಚಿಂತಕರು ಸಾರ್ವಜನಿಕ ಜೀವನದಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದು ನಾಚಿಕೆಗೇಡಿನ ಸಂಗತಿ. ತಾವು ಪ್ರಗತಿಪರ ಚಿಂತಕರು, ಬುದ್ಧಿಜೀವಿ ಮತ್ತು ಓಲೈಕೆ ರಾಜಕಾರಣ ಮಾಡಿಕೊಂಡು, ರಾಜಕೀಯದ ನೆರಳಲ್ಲಿ ಬದುಕು ಕಾಣಲು ಪ್ರಯತ್ನ ಪಡುವ ಕ್ರಿಮಿಗಳು. ಇಂತಹ ವ್ಯಕ್ತಿಗಳ ಮಾತಿಗೆ ಬೆಲೆ ಕೊಡದೇ ಅಲಕ್ಷಿಸುವುದೇ ಒಳ್ಳೆಯದು. ಕಾರಣವಿಲ್ಲದೆ ಯಾವುದೇ ಧರ್ಮ, ಜಾತಿ, ಸಮಾಜವನ್ನು ಟೀಕೆ ಮಾಡುವುದು, ಅಪಹಾಸ್ಯ ಮಾಡುವುದು, ದೂಷಣೆ ಮಾಡುವುದು ಮತ್ತು ನಿಂದನೆ ಇತ್ಯಾದಿಗಳು ಅವಿವೇಕಿಗಳ ಲಕ್ಷಣ.

–ಸುಬ್ರಮಣ್ಯ ಭಟ್, ಮೇಟಗಳ್ಳಿ ಬಡಾವಣೆ, ಮೈಸೂರು.

ನೂತನ ಸಂಸತ್ ಭವನಕ್ಕೆ 'ಡಾ. ಬಿ.ಆರ್. ಅಂಬೇಡ್ಕರ್ ಸಂಸತ್ ಭವನ' ಎಂದು ಹೆಸರಿಡುವಂತೆ ಮನವಿ

ಮಾನ್ಯರೆ,

ದೆಹಲಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಂಸತ್ ಭವನ 2023ರಲ್ಲಿ ಪೂರ್ಣಗೊಂಡು ಲೋಕಾರ್ಪಣೆ ಆಗುತ್ತಿರುವುದು ಭಾರತೀಯರಾದ ನಾವು ಹೆಮ್ಮೆ ಪಡುವ ಸಂಗತಿ. ಈ ಸಂಸತ್ ಭವನ ಭಾರತದ ಸಂವಿಧಾನದ ದೇಗುಲವಾಗಿದ್ದು, ಪ್ರಜೆಗಳ ಹಿತಾಸಕ್ತಿ, ಅಭಿವೃದ್ಧಿಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಸ್ಥಳವಾಗಿರುತ್ತದೆ. ಭಾರತೀಯರ ಭದ್ರಬುನಾದಿಯಾಗಿ ಸಾಮಾಜಿಕ ನ್ಯಾಯ, ಸಮಾನತೆ ತರುವ ನಿಟ್ಟಿನಲ್ಲಿ ತಮ್ಮ ಜೀವಮಾನದುದ್ದಕ್ಕೂ ಶ್ರಮಿಸಿದ ಮಹಾನ್ ಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರಿಡುವುದು ಅತೀ ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹೊಸದೆಹಲಿಯ ಸೆಂಟ್ರಲ್ ವಿಸ್ತಾರ್ ಪ್ರದೇಶದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ನೂತನ ಸಂಸತ್ ಭವನಕ್ಕೆ 'ಡಾ. ಬಿ.ಆರ್. ಅಂಬೇಡ್ಕರ್ ಸಂಸತ್ ಭವನ' ಎಂದು ನಾಮಕರಣ ಮಾಡುವಂತೆ ಮನವಿ.

–ಎಸ್. ಶಿವಪ್ಪ, ಸಾಮಾಜಿಕ ಚಿಂತಕ, ಮೈಸೂರು.

ಮೈಸೂರು–ಶಿವಮೊಗ್ಗ ರೈಲು ಎಂದಿನಂತೆ ರಾತ್ರಿ 10.30ಕ್ಕೆ ಹೊರಡುವಂತೆ ಕ್ರಮ ವಹಿಸಲು ಮನವಿ

ಮಾನ್ಯರೆ,

ಹಲವಾರು ವರ್ಷಗಳಿಂದ ಮೈಸೂರು–ಶಿವಮೊಗ್ಗ ರೈಲು ರಾತ್ರಿ 10.30ಕ್ಕೆ ಹೊರಟು ಬೆಳಗ್ಗೆ 5 ಗಂಟೆಗೆ ಶಿವಮೊಗ್ಗ ತಲುಪುತ್ತಿತ್ತು. ಆದರೆ ಈಗ ರಾತ್ರಿ 7.30ಕ್ಕೆ ಹೊರಡುತ್ತಿದೆ. ಹಾಗಾಗಿ ಪ್ರಯಾಣದ ಅವಧಿ 10 ಗಂಟೆಗೂ ಹೆಚ್ಚಾಗುತ್ತಿದೆ. ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಮಾನ್ಯ ಸಂಸದರಾದ ಪ್ರತಾಪ್ ಸಿಂಹ ಅವರು ಈ ಬಗ್ಗೆ ಗಮನಹರಿಸಿ ಹಿಂದೆ ಇದ್ದ ಹಾಗೆ ಶಿವಮೊಗ್ಗ ರೈಲು ರಾತ್ರಿ 10.30ಕ್ಕೆ ಹೊರಡುವಂತೆ ಕ್ರಮ ವಹಿಸಬೇಕೆಂದು ಮನವಿ.

–ಪಾರ್ವತಮ್ಮ, ಕುವೆಂಪುನಗರ, ಮೈಸೂರು.

ಕೋಣಂದೂರು ಮತ್ತು ನಾನು

ಮಾನ್ಯರೆ,

'ಶಾಂತವೇರಿ ಗೋಪಾಲಗೌಡ ಶತಮಾನೋತ್ಸವ' (ನ. 24)ದಲ್ಲಿ ಅವರ ಶಿಷ್ಯರಾದ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತ, 'ಕನ್ನಡ ಯುವಜನ ಸಭಾ ಸ್ಥಾಪನೆ ಬಗೆಗೆ ಪ್ರಸ್ತಾಪಿಸಿದ್ದಾರೆ. ಆರಂಭದಲ್ಲಿ ನಾನೂ 'ಸಭಾ'ದಲ್ಲಿದ್ದೆ!

ಅದು ಅರವತ್ತರ ದಶಕದ ಕಡೆಯ ಭಾಗ. ನಾನೂ ಲಿಂಗಪ್ಪನವರೂ ಸಾಕಷ್ಟು ಕಾಲ 'ರೂಂ ಮೇಟ್ಸ್' ಆಗಿದ್ದೆವು. ಸ್ವಾರಸ್ಯವೆಂದರೆ, ನಾನು ಬೆಳಗ್ಗೆ ಎದ್ದು ಕಾಲೇಜಿಗೆ ಹೊರಡುವಾಗ ಅವರಿನ್ನೂ ಮಲಗಿರುತ್ತಿದ್ದರು. ಅವರು ತಮ್ಮ 'ರಾಜಕೀಯ' ಚಟುವಟಿಕೆಗಳನ್ನು ಮುಗಿಸಿಕೊಂಡು ಬರುವ ಹೊತ್ತಿಗೆ ನಾನು ಮಲಗಿರುತ್ತಿದ್ದೆ.

ರಾಜಪ್ರಭುತ್ವ ದ್ವೇಷ ಲಿಂಗಪ್ಪನವರಿಗೆ ಗೋಪಾಲಗೌಡರಿಂದ ಬಳುವಳಿಯಾಗಿ ಬಂದಿತ್ತು. ಅವರು ಮಹಾರಾಜರನ್ನೇ 'ಮಹಿಷಾಸುರ' ಎಂದು ಕರೆಯುತ್ತಿದ್ದರು. ಆಗ ರಾಜ್ಯಪಾಲರಾಗಿದ್ದ ಜಯಚಾಮರಾಜ ಒಡೆಯರ್ ಭಾಷಣದ ಪ್ರತಿಯನ್ನು ವಿಧಾನಸಭೆಯಲ್ಲಿ 'ಶಾಂತ'ವೇರಿಯವರು ಒಮ್ಮೆ ನೆಲಕ್ಕೆ ಹಾಕಿ ತುಳಿದದ್ದು ದೊಡ್ಡ ಸುದ್ದಿಯಾಗಿತ್ತು! (ಅಂದ ಹಾಗೆ, ಅವರು ರಕ್ತದ ಏರೊತ್ತಡದಿಂದ ಬಳಲುತ್ತಿದ್ದರು).

ಕೋಣಂದೂರು ಒಮ್ಮೆ ಶಾಸನಸಭಾ ಸದಸ್ಯರಾಗಿ, ಆಮೇಲೆ ರಾಜಕೀಯದಿಂದ ನಿವೃತ್ತರಾದದ್ದು ಅಚ್ಚರಿಯ ಸಂಗತಿ. ಅಂಥಹವರು ಮೈಸೂರಿನಲ್ಲಿ ಸನ್ಮಾನಗೊಂಡದ್ದು ಸಂತೋಷದ ವಿಷಯ.

ಶ್ಲಾಘ್ಯ : ಅಖಿಲ ಕರ್ನಾಟಕ ಲೇಖಕ–ಪ್ರಕಾಶಕರ ಸಂಘದ ಉದ್ಘಾಟನೆಯ ಸಂದರ್ಭದಲ್ಲಿ (ನ. 25) ಮಾತನಾಡುತ್ತ, ಶಾಸಕ ಸಿ.ಎನ್. ಮಂಜೇಗೌಡರು ನನಗೆ ಪಂಪ ಪ್ರಶಸ್ತಿ ಬರಬೇಕೆಂದು ಹೇಳಿದರು. ಅವರಿಗೆ ನಾನು ಕೃತಜ್ಞ. ಕಲೆ–ಸಾಹಿತ್ಯದ ಬಗೆಗೆ ಅವರಿಗಿರುವ ಕಾಳಜಿ ಶ್ಲಾಘ್ಯ.

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದುರುಪಯೋಗದ ಅಧಿಕಾರ ನಮಗಿಲ್ಲ!!

ನಮಗೆಲ್ಲರಿಗೂ ಹಕ್ಕಿನ ಬಗ್ಗೆ ಬಹಳವಾಗಿ ಗೊತ್ತು ಅಥವಾ ಹಾಗೆ ಗೊತ್ತು ಎಂದು ಭಾವಿಸಿಕೊಂಡಿರುತ್ತೇವೆ. ಇದರ ಆಧಾರದ ಮೇಲೆಯೇ ನಮ್ಮಲ್ಲಿ ಜಗಳಗಳು, ಕಲಹಗಳು ಜಾಸ್ತಿ. ಅದು ನನ್ನ ಹಕ್ಕು, ಅದನ್ನು ಪ್ರಶ್ನಿಸಲು ನೀನ್ಯಾರು? ಎಂದೇ ನಮ್ಮ ಕದನಗಳು ಆರಂಭವಾಗುತ್ತವೆ. ಆದರೆ ಅದು ನಿಜವಾಗಿಯೂ ನಮ್ಮ ಹಕ್ಕೇ? ಹಾಗೆಂದು ಎಲ್ಲಿ ಹೇಳಲಾಗಿದೆ? ಎಂದು ಪ್ರಶ್ನಿಸಿದರೆ, ಅಂತಹವರಿಗೆ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ.

ಒಂದು ರೀತಿ ಸ್ವೇಚ್ಛಾಚಾರವೇ ನಮ್ಮ ಹಕ್ಕು ಎಂಬಂತಾಗಿದೆ. ನಾನು ಏನು ಬೇಕಾದರೂ ಮಾಡಬಹುದು, ಅದು ನನ್ನ ಹಕ್ಕು ಎಂಬ ಭಾವನೆ ಬಹುಜನರಲ್ಲಿದೆ. ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ಚಲಾಯಿಸುವವರನ್ನು ಪ್ರಶ್ನಿಸಿ ನೋಡಿ, ಅದು ನನ್ನಿಷ್ಟ, ಅದು ನನ್ನ ಹಕ್ಕು, ಅದನ್ನು ಕೇಳಲು ನೀನ್ಯಾರು? ಎಂದು ಪ್ರಶ್ನೆ ಮಾಡಿದವನೇ ಅಪರಾಧಿ ಎಂಬಂತೆ ಕೂಗಾಡುತ್ತಾರೆ. ನೀವು ಸಭ್ಯಸ್ಥರಾದರೆ, ಈ ಉಸಾಬರಿ ನನಗೇಕೆ? ಎಂದು ಮೌನ ವಹಿಸಬೇಕಾಗುತ್ತದೆ. ಅಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದು ಬೇಸರದ ಸಂಗತಿ.

ಹಕ್ಕು ಎಂಬುದು ಏಕಾಂಗಿಯಲ್ಲ. ಅದರೊಡನೆ ಕರ್ತವ್ಯ ಎಂಬುದೂ ಸೇರಿದೆ. ಆದರೆ ಹಕ್ಕಿನ ಬಗ್ಗೆ ಮಾತನಾಡುವವರು ಕರ್ತವ್ಯದ ಬಗ್ಗೆ ಚಕಾರ ಎತ್ತಲ್ಲ. ವಿಧಾನಸಭೆ, ಲೋಕಸಭೆಗಳಲ್ಲಿ ಧರಣಿ ಮಾಡುವುದು, ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವುದನ್ನು ವಿರೋಧ ಪಕ್ಷಗಳು ಹಕ್ಕು ತಮ್ಮ ಎಂದೇ ಪ್ರತಿಪಾದಿಸುತ್ತವೆ. ಸರಿಯೇ!! ಆಡಳಿತ ಪಕ್ಷ ತಪ್ಪು ಮಾಡಿದಾಗ ಅದನ್ನು ವಿರೋಧ ಪಕ್ಷ ಟೀಕಿಸಬೇಕು. ಆದರೆ ದಿನಗಟ್ಟಲೆ ಧರಣಿ ಮಾಡುವುದು, ಕಾರ್ಯಕಲಾಪ ಬಹಿಷ್ಕರಿಸುವುದು ಎಷ್ಟರ ಮಟ್ಟಿಗೆ ಸರಿ? ಕಲಾಪದ ನಂತರ ಧರಣಿ ಮಾಡಬಹುದು, ಆದರೆ ಕಲಾಪ ನಡೆಯುವಾಗ ಅದನ್ನು ಬಹಿಷ್ಕರಿಸುವುದು ಎಷ್ಟು ಸರಿ?

ಸದನ ನಡೆಯುವುದೇ ಅಪರೂಪವಾಗುತ್ತಿರುವಾಗ ಅದನ್ನು ಸದುಪಯೋಗಪಡಿಸಿಕೊಳ್ಳದೇ ಇರುವುದು, ಅದಕ್ಕೆ ಅಡ್ಡಿಪಡಿಸುವುದು ಕರ್ತವ್ಯವಾಗುವುದಿಲ್ಲ. ವಿರೋಧಿಸುವುದು ಹಕ್ಕಾದರೂ, ಸದನ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ಕರ್ತವ್ಯವಾಗಿರುತ್ತದೆ. ನಮ್ಮನ್ನು ದಾರಿ ತಪ್ಪಿಸುವುದು ಇಲ್ಲಿಂದಲೇ ಆರಂಭವಾಗುತ್ತದೆ.

ವಿರೋಧಿಸುವುದಕ್ಕೆ ನಮ್ಮದೇ ಆದ ವಿಧಾನಗಳಿರುತ್ತವೆ. ಅದನ್ನು ಬಳಸಬಹುದು. ಆದರೆ ವಿರೋಧಿಸುವುದು ಹಕ್ಕು ಎಂದಾದಾಗ, ಸದನ ನಡೆಯುವಂತೆ ಸಹಕರಿಸುವುದು ಕರ್ತವ್ಯ ಎಂಬ ಭಾವನೆ ಬರಬೇಕಲ್ಲವೇ? ಜನರಿಗೆ ಆದರ್ಶವಾಗಬೇಕಾದ ಜಾಗದಲ್ಲೇ ದಾರಿ ತಪ್ಪಿದರೆ ಜನರಿಗೆ ತಿಳುವಳಿಕೆ ನೀಡುವವರ್ಯಾರು?

ಇಲ್ಲೂ ಅಷ್ಟೇ. ಹಕ್ಕಿನ ಬಗ್ಗೆ ಮಾತನಾಡುವುದಾಗುತ್ತದೆಯೇ ವಿನಃ, ಕರ್ತವ್ಯದ ಬಗ್ಗೆ ಮಾತನಾಡುವುದಿಲ್ಲ. ಇದನ್ನೇ ಸಾಮಾನ್ಯ ಜನರೂ ಅನುಕರಿಸುತ್ತಾರೆ. ಅವರು ತಪ್ಪು ಮಾಡಿದಾಗ ಪ್ರಶ್ನಿಸಿದರೆ ಅದು ನನ್ನ ಹಕ್ಕು ಎಂದು ಹೇಳುವರೇ ವಿನಃ, ತಪ್ಪು ಹೇಗೆ ಹಕ್ಕಾಗುತ್ತದೆ? ಎಂಬ ಬಗ್ಗೆ ಯಾರೂ ವಿವೇಚಿಸುವುದಿಲ್ಲ. ರಸ್ತೆಗಳಲ್ಲಿ ನಡೆಯುವ ಅಪಘಾತಗಳ ಸಂದರ್ಭದಲ್ಲಿ ಇದನ್ನು ನಾವು ವಿಶೇಷವಾಗಿ ನೋಡಬಹುದು. ನಮ್ಮಲ್ಲಿ ಅಪಘಾತಗಳಾದಾಗ ದೊಡ್ಡ ವಾಹನದವರದ್ದೇ ತಪ್ಪು ಎಂದು ವಾದಿಸುವ ಪರಿಪಾಠ ಕಾಣುತ್ತೇವೆ. ನಡೆಯುವವನು ಹಾಗೂ ಸೈಕಲ್ ಸವಾರನ ನಡುವೆ ಅಪಘಾತವಾದಾಗ, ತಪ್ಪು ಸೈಕಲ್ ಸವಾರನದ್ದೇ ಎಂಬ ತೀರ್ಮಾನವನ್ನು ಅಲ್ಲಿ ಸೇರುವ ಜನರೇ ನೀಡಿಬಿಡುತ್ತಾರೆ. ಹಾಗೆಯೇ ಸೈಕಲ್ ಮತ್ತು ಮೋಟಾರ್ ಸೈಕಲ್ ನಡುವಿನ ಅಪಘಾತದಲ್ಲಿ ತಪ್ಪು ಮೋಟಾರ್ ಸೈಕಲ್ಲಿನವನದ್ದು, ಮೋಟಾರ್ ಸೈಕಲ್ ಹಾಗೂ ಕಾರಿನ ನಡುವೆ ಅಪಘಾತವಾದಾಗ ತಪ್ಪು ಕಾರಿನವನದ್ದು, ಕಾರು ಹಾಗೂ ಬಸ್ಸು, ಲಾರಿಯ ನಡುವೆ ಅಪಘಾತವಾದಾಗ ತಪ್ಪು ಲಾರಿ, ಬಸ್ಸಿನವರದ್ದು ಎಂಬ ವಾದ ಕೇಳುತ್ತೇವೆ. ಅಲ್ಲಿ ಸೇರುವ ಜನರು ತಾವು ಘಟನೆಯನ್ನು ಕಣ್ಣಾರೆ ಕಂಡಂತೆ ತೀರ್ಪು ನೀಡುತ್ತಾರೆ. ದೊಡ್ಡ ವಾಹನದವನನ್ನು ತಪ್ಪಿತಸ್ಥ ಎಂದು ಹೇಳಿದರೆ ಅವರಿಂದ ಪರಿಹಾರವಾಗಿ ಏನಾದರೂ ಹಣ ವಸೂಲಾಗುತ್ತದೆ ಎಂಬ ಭಾವನೆ. ಇಲ್ಲಿ ಸರಿ ಯಾರದ್ದು? ತಪ್ಪು ಯಾರದ್ದು? ಎಂದು ವಿವೇಚಿಸುವುದಕ್ಕೆ ಹೋಗುವುದಿಲ್ಲ. ಅಲ್ಲೆಲ್ಲಾ ಹಕ್ಕಿನ ಮಾತು ಬಹಳವಾಗಿ ಕೇಳಿಬರುತ್ತದೆ. ಆದರೆ ಸಂಚಾರ ನಿಯಮ ಪಾಲಿಸಬೇಕಾದದ್ದು ಕರ್ತವ್ಯ, ಅದರಲ್ಲಿ ಯಾರದ್ದು ತಪ್ಪು? ಎಂಬುದರ ವಿವೇಚನೆ ನಡೆಯುವುದಿಲ್ಲ. ಕರ್ತವ್ಯ ಎಂಬುದು ನಮಗೆ ಗೊತ್ತೇ ಇಲ್ಲ ಎಂಬಂತೆ ಹಕ್ಕಿನ ವಾದ ನಡೆಯುತ್ತದೆ. ಇದು ಹಾಗೆಯೇ ಮುಂದುವರೆಯುತ್ತಿರುವುದು ಸರಿಯಲ್ಲ. ಆದರೆ ತಿದ್ದಬೇಕಾದವರು ಯಾರು ಎಂಬುದೇ ಪ್ರಶ್ನೆಯಾಗುಳಿಯುತ್ತದೆ.

> ❝ ನಾವು ಸೇವಿಸಿದಂತಹ ಊಟವು ಜೀರ್ಣವಾಗದಿದ್ದರೆ ಮತ್ತೆ ಊಟ ಮಾಡುವುದು ವಿಷವನ್ನು ತೆಗೆದುಕೊಳ್ಳುವುದಕ್ಕೆ ಸಮಾನವಾಗಿರುತ್ತದೆ ಎಂದು ಹೇಳುತ್ತದೆ. ಹಣ, ಎಂದಿಗೂ ಆರೋಗ್ಯ ತಂದು ಕೊಡುವುದಿಲ್ಲ. ಬದಲಿಗೆ ಆರೋಗ್ಯ ಕಸಿಯುತ್ತದೆ ಅಷ್ಟೇ. ಅದನ್ನು ಸರಿಪಡಿಸಿಕೊಳ್ಳಲು ಮತ್ತೆ ಹಣ ವ್ಯಯಮಾಡಬೇಕಾಗುತ್ತದೆ. ಅತಿಯಾಗಿ ಸೇವಿಸುವುದು ಯಾವುದಾದರೂ ಸರಿ, ಅದು ರುಚಿಯಾಗಿದ್ದರೂ ಆರೋಗ್ಯಕ್ಕೆ ಒಳ್ಳೆಯದಲ್ಲ. ಇದು ಆಹಾರದ ಬಗ್ಗೆ ಮಾತ್ರವಲ್ಲ, ಎಲ್ಲದಕ್ಕೂ ಅನ್ವಯಿಸುತ್ತದೆ.

ನಾವು ಗಳಿಸಬೇಕು ಎಂಬುದು ನಮ್ಮ ಹಕ್ಕು, ಅದು ತಪ್ಪಲ್ಲ. ಆದರೆ ನಾನು ಗಳಿಸಿದ್ದನ್ನು ಹೇಗೆ ಖರ್ಚುಮಾಡಬೇಕು ಎಂಬುದು ಕರ್ತವ್ಯವಾಗುತ್ತದೆ. ಗಳಿಸುವಾಗ ನನ್ನ ಶ್ರಮ ಬೇಕಾಗುತ್ತದೆ ಎಂಬುದು ಸರಿ. ಆದರೆ ಅದನ್ನು ಖರ್ಚುಮಾಡುವಾಗ ವಿವೇಚನೆ ಬೇಕಾಗುತ್ತದೆ. ಏಕೆಂದರೆ ನಾವು ಈ ಸಮಾಜದಲ್ಲಿ ಜೀವಿಸುತ್ತಿದ್ದೇವೆ. ನಾವು ಮಾಡುವ ಖರ್ಚು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾದ್ದು ಕರ್ತವ್ಯವಲ್ಲವೇ. ಅದು ಸಮಾಜದ ಹಿತಕ್ಕೆ ವಿರುದ್ಧವಾಗಿಯೂ ಇರಬಾರದು. ನಾವು ಮದುವೆ ಮನೆಗಳಲ್ಲಿನ ಆರ್ಭಟ ಕಾಣುತ್ತೇವೆ. ಮದುವೆ ಎಂಬುದು ಇಂದು ಆರ್ಭಟದ ಕುರುಹಾಗಿದೆ. ಈ ಹಿಂದೆ ಮದುವೆ ನಾಲ್ಕಾರು ದಿನಗಳ ಸಂಭ್ರಮವಾಗಿತ್ತು. ಅಷ್ಟೂ ದಿನವೂ ಶಾಸ್ತ್ರದ ಹೆಸರಿನಲ್ಲಿ ಒಂದಷ್ಟು ಕಾರ್ಯಕ್ರಮ ನಡೆಯುತ್ತಿದ್ದವು. ಇದರ ಉದ್ದೇಶ ಗಂಡು ಹಾಗೂ ಹೆಣ್ಣಿನ ಮನೆಯವರನ್ನು ಒಂದು ಮಾಡುವುದಾಗಿತ್ತು. ಪರಸ್ಪರ ಅಪರಿಚಿತರಾದವರ ನಡುವೆ ಮುಂದೆ ಸುದೀರ್ಘ ಸಂಬಂಧ ಉಂಟಾಗಬೇಕೆಂಬ ಕಾರಣದಿಂದ ಮದುವೆಗಳು ಸಂಪ್ರದಾಯಬದ್ಧವಾಗಿ ನಡೆದು ಎರಡೂ ಮನೆಯವರು ಅರ್ಥ ಮಾಡಿಕೊಳ್ಳುವ ಸಾಧನವಾಗುತ್ತಿತ್ತು. ಅಲ್ಲಿ ಶಾಸ್ತ್ರದ ಕುರುಹು ಇರುವುದರಿಂದ ಸ್ವೇಚ್ಛಾಚಾರಕ್ಕೆ ಅವಕಾಶ ಇರುತ್ತಿರಲಿಲ್ಲ. ಆದರೆ ಇಂದು ಧಾವಂತದ ಯುಗ. ಮದುವೆ ಮಾಡಬೇಕು, ಮಾಡಬೇಕು ಅಷ್ಟೇ!! ಅದಕ್ಕೆ ಶಾಸ್ತ್ರದ ಹಿನ್ನೆಲೆಯೇ ಬೇಕಾಗಿಲ್ಲ. ಲಗ್ನಕ್ಕೆ ಮುಂಚಿತವಾಗಿ ನಡೆಸುವ ಆರತಕ್ಷತೆಯೇ ಶಾಸ್ತ್ರದ ರೀತಿಯಲ್ಲ. ಆದರೆ ಜನರನ್ನು ಕರೆಯಬೇಕು, ತಮ್ಮ ವೈಭವದ ಪ್ರದರ್ಶನವಾಗಬೇಕು, ಬಗೆಬಗೆಯ ಭಕ್ಷ್ಯ ಬೋಜ್ಯಗಳ ಮಾಡಿಸಿ ಭೂರಿ ಭೋಜನ ಮಾಡಿಸಿ ನಾವು ಯಾರಿಗೂ ಕಮ್ಮಿ ಇಲ್ಲ ಎಂದು ತೋರ್ಪಡಿಸಿಕೊಳ್ಳಬೇಕು ಎಂಬಷ್ಟರ ಮಟ್ಟಕ್ಕೆ ಇವತ್ತು ಮದುವೆಗಳು ನಡೆಯುತ್ತವೆ. ಇಲ್ಲಿ ಹಕ್ಕು ಮದುವೆ ಮಾಡುವುದೇ ಆದರೂ, ಈ ರೀತಿಯ ದುಂದುವೆಚ್ಚ ಹಕ್ಕು ಎನಿಸಿಕೊಳ್ಳಬಾರದು. ಮದುವೆ ಎಂದರೆ ದುಂದುವೆಚ್ಚ ಎಂಬಂತಾಗಿರುವುದು ಕರ್ತವ್ಯದ ಉಲ್ಲಂಘನೆಯಂತೆ ಕಂಡುಬರುತ್ತದೆ. ಮದುವೆಗೆ ಬರುವವರೂ ಶೋಕಿಗಾಗಿ ಒಂದಷ್ಟು ತಿಂದಂತೆ ಮಾಡಿ ಆಹಾರ ಪದಾರ್ಥ ಪೋಲಾಗುವಂತೆ ಮಾಡುತ್ತಾರೆ. ಮದುವೆ ಮನೆಯ ಹಿಂದೆ ಇವರು ಚೆಲ್ಲುವ ಆಹಾರಕ್ಕಾಗಿ ಒಂದಷ್ಟು ಜನ ಕಾದು ಕುಳಿತಿರುತ್ತಾರೆ, ಅವರ ಮುಂದೆ ಇವರು ತಿಂದುಬಿಟ್ಟ ಆಹಾರ ಹಾಕಲಾಗುತ್ತದೆ. ಈ ರೀತಿ ಚೆಲ್ಲುವುದು ನಮ್ಮ ಹಕ್ಕು ಹೇಗಾಗುತ್ತದೆ? ನಾನೇ ಹಣ ಸಂಪಾದಿಸಿ ಖರ್ಚು ಮಾಡಿರಬಹುದಾದರೂ ಆಹಾರ ಪೋಲಾಗುವುದನ್ನು ಹಕ್ಕು ಎಂದು ಭಾವಿಸಬಹುದೇ? ಎಂಬುದನ್ನು ವಿವೇಚಿಸಬೇಕು. ನಾವು ಹಾಗೆ ಚೆಲ್ಲಿದ ಆಹಾರವನ್ನು ಒಂದಷ್ಟು ಬಡವರು ಸಂಗ್ರಹಿಸಿ ತಿನ್ನಬಹುದು, ನಿಜ. ಆದರೆ ಅದನ್ನು ಎಷ್ಟು ದಿನದವರೆಗೆ ಇಟ್ಟುಕೊಂಡು ತಿನ್ನಲು ಸಾಧ್ಯ? ಕೊನೆಗೆ ಆಹಾರವೆಲ್ಲಾ ಮಣ್ಣು ಪಾಲಾದಂತೆ. ಹಣ ಎಲ್ಲವನ್ನೂ ತಂದುಕೊಡುವುದಿಲ್ಲ. ಹಣ ಇದೆ ಎಂದು ವಿವೇಚನೆ ಇಲ್ಲದೆ ಖರ್ಚು ಮಾಡುವುದನ್ನು ದುರುಪಯೋಗ ಎಂದೇ ಪರಿಗಣಿಸಬೇಕಾಗುತ್ತದೆ. ಈ ಸಮಾಜದಿಂದ ಸಂಪಾದಿಸಿದ ಹಣ ಸಮಾಜದ ಹಿತಕ್ಕೆ ವಿನಿಯೋಗವಾಗಬೇಕು ಎಂಬುದು ಕರ್ತವ್ಯವಾಗುತ್ತದೆ. ನಾವು ನಿತ್ಯ ಆಹಾರ ಸೇವನೆಯನ್ನು ನಮ್ಮ ಆರೋಗ್ಯದ ದೃಷ್ಟಿಯಿಂದ ಮಾಡಬೇಕೇ ವಿನಃ, ನನ್ನಲ್ಲಿ ಹಣವಿದೆ ಎಂದು ಬೇಕಾದ್ದನ್ನೆಲ್ಲಾ ತಿನ್ನಲಾಗುವುದಿಲ್ಲ, ನನ್ನಲ್ಲಿ ಹಣವಿದೆ ಎಂದು ಮೂರು ಜನ ತಿನ್ನುವಷ್ಟನ್ನು ಒಬ್ಬನೇ ತಿನ್ನಲಾಗುವುದಿಲ್ಲ. ಒಂದು ಸತ್ಯವಾಕ್ಯವೂ ಇದೆ. ಅದೇನೆಂದರೆ, ನಾವು ಸೇವಿಸಿದಂತಹ ಊಟವು ಜೀರ್ಣವಾಗದಿದ್ದರೆ ಮತ್ತೆ ಊಟ ಮಾಡುವುದು ವಿಷವನ್ನು ತೆಗೆದುಕೊಳ್ಳುವುದಕ್ಕೆ ಸಮಾನವಾಗಿರುತ್ತದೆ ಎಂದು ಹೇಳುತ್ತದೆ. ಹಣ, ಎಂದಿಗೂ ಆರೋಗ್ಯ ತಂದುಕೊಡುವುದಿಲ್ಲ. ಬದಲಿಗೆ ಆರೋಗ್ಯ ಕಸಿಯುತ್ತದೆ ಅಷ್ಟೇ. ಅದನ್ನು ಸರಿಪಡಿಸಿಕೊಳ್ಳಲು ಮತ್ತೆ ಹಣ ವ್ಯಯಮಾಡಬೇಕಾಗುತ್ತದೆ. ಅತಿಯಾಗಿ ಸೇವಿಸುವುದು ಯಾವುದಾದರೂ ಸರಿ, ಅದು ರುಚಿಯಾಗಿದ್ದರೂ ಆರೋಗ್ಯಕ್ಕೆ ಒಳ್ಳೆಯದಲ್ಲ. ಇದು ಆಹಾರದ ಬಗ್ಗೆ ಮಾತ್ರವಲ್ಲ, ಎಲ್ಲದಕ್ಕೂ ಅನ್ವಯಿಸುತ್ತದೆ.

ಒಬ್ಬ ಶ್ರೀಮಂತ ಹಾಗೂ ಒಬ್ಬ ಬಡವ. ಶ್ರೀಮಂತನಿಗೆ ಖಾಯಿಲೆಗಳು ಜಾಸ್ತಿ. ಅವನದ್ದು ವೈಭವೋಪೇತವಾದ ಮನೆ, ನೂರಾರು ಕೋಟಿ ಬೆಲೆಬಾಳುವಂತಹದ್ದು, ಅವನಿಗೆ ಊಟ ತಿಂಡಿ ಮಾಡಿ ಬಡಿಸಲೇ ಹತ್ತಾರು ನೌಕರರಿರುತ್ತಾರೆ. ಆದರೆ ಶ್ರೀಮಂತನ ಊಟ ಹೇಗಿರುತ್ತದೆ? ಅದಕ್ಕೆ ಉಪ್ಪಿಲ್ಲ, ಖಾರವಿಲ್ಲ, ಸಿಹಿ ಇಲ್ಲ. ಕೇವಲ ಒಂದಷ್ಟು ಹಸಿ ತರಕಾರಿಗಳು, ಉಪ್ಪಿಲ್ಲದ ಪದಾರ್ಥಗಳು ಜೊತೆಗೆ ಒಂದಷ್ಟು ಮಾತ್ರೆ. ಅದೇ ಶ್ರೀಮಂತನ ಮನೆಯ ಮುಂದೆ ಜೋಪಡಿಯಲ್ಲಿರುವವನು ತನಗೆ ಬೇಕಾದ್ದನ್ನು, ಉಪ್ಪು, ಖಾರ ಇರುವಂತಹುದನ್ನು ತಿನ್ನುತ್ತಾನೆ. ಹಾಗಾದರೆ ಇಲ್ಲಿ ಶ್ರೀಮಂತ ಯಾರು ಎಂದು ಪ್ರಶ್ನಿಸಬೇಕಾಗುತ್ತದೆ. ಹಣವಿದೆ ಎಂದು ಬೇಕಾದ್ದನ್ನೆಲ್ಲಾ ತಿನ್ನಲಾಗುವುದಿಲ್ಲ. ಬಡವನಲ್ಲಿ ಹಣ ಮಾತ್ರ ಇಲ್ಲ, ಉಳಿದೆಲ್ಲದರಲ್ಲೂ ಅವನು ಶ್ರೀಮಂತನೇ.

ಇತ್ತೀಚೆಗೆ ನಮ್ಮಲ್ಲಿ ಸುಸ್ಥಿರತೆ ಬಗ್ಗೆ ಬಹಳ ಚರ್ಚೆಗಳಾಗುತ್ತವೆ. ಇದುವರೆಗೆ ನಾವು ಪರಿಸರ ಹಾಳು ಮಾಡಿದರೆ ನಮ್ಮ ಊರಿಗೆ ಅಥವಾ ನಮ್ಮ ಜಿಲ್ಲೆಗೆ ಮಾತ್ರ ತೊಂದರೆಯಾಗುತ್ತಿತ್ತು. ಆದರೆ ಈಗ ಅದರ ವ್ಯಾಪ್ತಿ ಮೀರಿದೆ. ನಾವು ಪ್ರಕೃತಿಯ ಮೇಲೆ ನಡೆಸುವ ದೌರ್ಜನ್ಯ ಇಡೀ ದೇಶದ ಮೇಲೆ, ಅಷ್ಟೇ ಏಕೆ ಇಡೀ ವಿಶ್ವದ ಮೇಲೆ ಪ್ರಭಾವ ಬೀರುತ್ತದೆ. ಒಂದು ದೇಶದಲ್ಲಿ ಅತಿಯಾಗಿ ಹೊರಸೂಸುವ ಇಂಗಾಲದ ಡಯಾಕ್ಸೈಡ್ ಭೂಮಿಯ ಮೇಲಿನ ಓಝೋನ್ ಪದರವನ್ನು ನಾಶ ಮಾಡುತ್ತದೆ. ಅದರಿಂದ ಇಡೀ ವಿಶ್ವ ತೊಂದರೆ ಅನುಭವಿಸುವಂತಾಗುತ್ತಿದೆ. ಇತ್ತೀಚೆಗೆ ಯಾವಾಗಲೆಂದರೆ ಆವಾಗ ಬೀಳುತ್ತಿರುವ ಮಳೆ, ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿರುವ ಉಷ್ಣತೆ, ಕಲುಷಿತಗೊಳ್ಳುತ್ತಿರುವ ನೀರು ಇದೆಲ್ಲವೂ ನಾವು ಪ್ರಕೃತಿಯನ್ನು ದುರುಪಯೋಗಪಡಿಸಿಕೊಂಡಿದ್ದರ ಫಲ. ನನ್ನಲ್ಲಿ ಹಣವಿದೆ ಎಂದು ಪ್ರಕೃತಿಯ ಮೇಲೆ ಆಕ್ರಮಣ ಮಾಡಲಾಗುವುದಿಲ್ಲ. ಪ್ರಕೃತಿಯ ಒಡಲು ಬಗೆದು ನಾನು ಶ್ರೀಮಂತನಾಗುವುದೂ ನನ್ನ ಹಕ್ಕಾಗುವುದಿಲ್ಲ. ಈ ಬಗ್ಗೆ ಅರಿವು ಮೂಡಬೇಕಾಗಿದೆ. ಪ್ರಕೃತಿಯನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ನನಗೆ ಬೇಕಾದ್ದಕ್ಕಿಂತ ಹೆಚ್ಚಿರುವುದು, ಅದು ಯಾವುದೇ ಆಗಿರಲಿ, ಅದನ್ನು ದುರುಪಯೋಗ ಎಂದೇ ಪರಿಗಣಿಸುವ ಮನೋಭಾವ ನಮ್ಮದಾಗಬೇಕು. ಹೆಚ್ಚಾದರೆ ಅಮೃತವೂ ವಿಷವಾಗುತ್ತದೆ ಎಂಬಂತೆ ಅಗತ್ಯಕ್ಕಿಂತ ಹೆಚ್ಚು ಕೂಡಿಡುವುದು ಅಪರಾಧ ಎನಿಸಬೇಕು. ಅಲ್ಲದೆ ನಮ್ಮ ಅಗತ್ಯಕ್ಕಿಂತ ಹೆಚ್ಚಿನದನ್ನು ನಮ್ಮದಾಗಿಸಿಕೊಂಡಾಗ ಅದನ್ನು ದುರುಪಯೋಗ ಎಂದೇ ಪರಿಗಣಿಸಬೇಕು. ನನ್ನಲ್ಲಿ ಹಣವಿದೆ ಎಂದು ಮುಂದಿನ ಮೂರ್‍ನಾಲ್ಕು ವರ್ಷಕ್ಕೆ ಆಗುವ ಆಹಾರವನ್ನು ಸಂಗ್ರಹಿಸಿಡಲಾಗದು. ಅದು ಕೊಳೆಯುತ್ತದೆ. ಹೆಚ್ಚಿನ ಹಣದ ಸಂಗ್ರಹ ಮನೆಯ ಮಕ್ಕಳನ್ನು ದಾರಿ ತಪ್ಪಿಸುತ್ತದೆ. ದುರುಪಯೋಗದ ವಿಶ್ಲೇಷಣೆ ಬಹು ಮುಖ್ಯವಾಗಿ ಚರ್ಚೆಯಾಗಬೇಕಾಗಿದೆ.

ಆಡಳಿತಾತ್ಮಕ ನ್ಯಾಯಮೂರ್ತಿ ದಿನೇಶ್‌ಕುಮಾರ್ ಅವರಿಗೆ ಸನ್ಮಾನ



ಶನಿವಾರ ಮೈಸೂರಿಗೆ ಭೇಟಿ ನೀಡಿದ ಬೆಂಗಳೂರಿನ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ದಿನೇಶ್‌ಕುಮಾರ್ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಹಾರ ಹಾಕಿ, ಫಲ ತಾಂಬೂಲ, ನೆನಪಿನ ಫಲಕ ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಇನ್ನಿತರೆ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಎವಿಆರ್ ಪಕ್ಷ ಸ್ಪರ್ಧೆ

ಮೈಸೂರು,ಡಿ.3(ಪಿಎಂ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಅಭಿವೃದ್ಧಿ ವಂಚಿತರ ರಾಜಕೀಯ ಪಕ್ಷ (ಎವಿಆರ್) 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ವಾಲ್ಮೀಕಿ ನಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೂವರೆ ವರ್ಷದಿಂದ ರಾಜ್ಯಾದ್ಯಂತ ಸಂಘಟನೆ ಮಾಡಿದ್ದು, ಈಗಾಗಲೇ ಪಕ್ಷದ ಕಾರ್ಯಕರ್ತರು ಮನೆ ಮನೆಗೆ ಪಕ್ಷದ ಪ್ರಣಾಳಿಕೆ ತಲುಪಿಸುತ್ತಿದ್ದಾರೆ. ನಮ್ಮ ಪಕ್ಷದಿಂದ ಸ್ಪರ್ಧೆ ಮಾಡಲಿಚ್ಛಿಸುವ ಆಕಾಂಕ್ಷಿಗಳು ಮೊ.ಸಂ. 99728 32410 ಅನ್ನು ಸಂಪರ್ಕಿಸಬಹುದು ಎಂದರು. ಪಕ್ಷದ ಮುಖಂಡರಾದ ವಿ.ವೆಂಕಟೇಶ್, ಮರಿಸ್ವಾಮಿ ನಾಯಕ, ಕೃಷ್ಣ ನಾಯಕ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಲಕ್ಕಿ ಡಿಪ್ ಕೂಪನ್ ಕಳಿಸಿ 3.50 ಲಕ್ಷ ವಂಚನೆ

ಗುಂಡ್ಲುಪೇಟೆ, ಡಿ.3–ಅಂಚೆ ಮೂಲಕ ಲಕ್ಕಿ ಡಿಪ್ ಕೂಪನ್ ಕಳುಹಿಸಿದ 'ದೆಹಲಿ ಮೂಲದ ಕಂಪೆನಿಯೊಂದು ವ್ಯಕ್ತಿಯೊಬ್ಬರಿಗೆ ಆನ್‌ಲೈನ್ ಮೂಲಕ 3.50 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಗುಂಡ್ಲುಪೇಟೆ ತಾಲೂಕು ಹೊನ್ನೇಗೌಡನಹಳ್ಳಿ ನಿವಾಸಿ ಪರಶಿವಪ್ಪ(37) ವಂಚನೆಗೊಳಗಾದವರಾಗಿದ್ದು, ಇವರ ವಿಳಾಸಕ್ಕೆ ದೆಹಲಿ ಮೂಲದ ಆನ್‌ಲೈನ್ ಶಾಪಿಂಗ್ ಕಂಪೆನಿಯೊಂದರಿಂದ ಲಕ್ಕಿ ಕೂಪನ್ ಅನ್ನು ಅಂಚೆ ಮೂಲಕ ರವಾನಿಸಲಾಗಿದೆ. ನಂತರ ಅವರ ಬ್ಯಾಂಕ್ ಖಾತೆ ವಿವರ, ಆಧಾರ್, ಪಾನ್ ಕಾರ್ಡ್ ಮತ್ತಿತರ ದಾಖಲೆಗಳನ್ನು ವಾಟ್ಸಾಪ್ ಮೂಲಕ ತರಿಸಿಕೊಂಡ ವಂಚಕರು ವಿವಿಧ ಶುಲ್ಕಗಳೆಂದು 3,50,400 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಚಾಮರಾಜನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನನ್ನ ಮುಂದೆ ಸಿದ್ದರಾಮಯ್ಯ ಗೋಮಾಂಸ ತಿಂದರೆ ಜೈಲಿಗೆ ಕಳಿಸ್ತೇನೆ!

ಮಾಜಿ ಸಿಎಂಗೆ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಖಡಕ್ ಎಚ್ಚರಿಕೆ

ಬೆಂಗಳೂರು: ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಅವರು ಮಾಜಿ ಸಿಎಂ, ಹಾಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಗೋಮಾಂಸದ ವಿಚಾರಕ್ಕೆ ವಿಧಾನಸೌಧದಲ್ಲಿಂದು ಸಿದ್ದರಾಮಯ್ಯ ಅವರಿಗೆ ಪ್ರಭು ಚವ್ಹಾಣ್ ಸವಾಲು ಹಾಕಿದರು. ನನ್ನ ಮುಂದೆ ಹಂದಿ ಮಾಂಸ ತಿಂತೀನಿ, ಹಸು ಮಾಂಸ ತಿನ್ನುತ್ತೇನೆ ಅಂತೀರಲ್ಲಾ ನಿಮಗೆ ತಾಕತ್ ಇದ್ರೆ ನನ್ನ ಎದುರುಗಡೆ ಗೋಮಾಂಸ ತಿನ್ನಿ, ನಿಮ್ಮನ್ನು ಜೈಲು ಒಳಗಡೆ ಹಾಕಿಸ್ತೀನಿ ಎಂದು ಸಚಿವರು ಎಚ್ಚರಿಸಿದ್ದಾರೆ. ಇದೇ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರಿಗೂ ಗೋಮಾಂಸದ ವಿಚಾರಕ್ಕೆ ಸಚಿವ ಪ್ರಭು ಚವ್ಹಾಣ್ ಎಚ್ಚರಿಕೆ ನೀಡಿದ್ದಾರೆ.

ಪ್ರಾರಂಭದಿಂದಲೂ ಗೋಹತ್ಯೆ ನಿಷೇಧದ ಬಗ್ಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ಷೇಪ ಎತ್ತುತ್ತಿದ್ದಾರೆ. ಮುಸ್ಲಿಮರಷ್ಟೇ ಅಲ್ಲ ಕ್ರಿಶ್ಚಿಯನ್ ಹಾಗೂ ಹಿಂದೂಗಳೂ ಗೋಮಾಂಸ ತಿನ್ನುತ್ತಾರೆ ಎಂದು ಹೇಳಿದ್ದರು. ಅಲ್ಲದೇ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗೋಹತ್ಯೆ ನಿಷೇಧವನ್ನು ವಾಪಸ್ ಪಡೆಯುವುದಾಗಿಯೂ ಸಿದ್ದರಾಮಯ್ಯ ಈ ಹಿಂದೆ ಹೇಳಿದ್ದರು.

ಪಶುಸಂಗೋಪನಾ ಸಚಿವರು ಗರಂ: ಇಂದು ಬೆಂಗಳೂರಿನ ವಿಕಾಸಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್, ತಮ್ಮ ಸರ್ಕಾರ ಬಂದರೆ ಗೋಹತ್ಯೆ ನಿಷೇಧ ಕಾಯ್ದೆ ತೆಗೆದು ಹಾಕುವ ಸಿದ್ದರಾಮಯ್ಯ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ನೀನು ಯಾರಪ್ಪಾ ಗೋ ಹತ್ಯೆ ನಿಷೇಧ ಕಾಯ್ದೆ ರದ್ದು ಪಡಿಸುತ್ತೇನೆ ಅನ್ನೋಕೆ ಅಂತ ಏಕ ವಚನದಲ್ಲೇ ಪ್ರಶ್ನಿಸಿದರು.

ಒಳಗೆ ಹಾಕಿಸುತ್ತೇನೆ: ನನ್ನ ಮುಂದೆ ಹಂದಿ ತಿಂತೀನಿ, ಹಸು ಮಾಂಸ ತಿನ್ನುತ್ತೇನೆ ಅಂತೀರಲ್ಲಾ, ನಿಮಗೆ ತಾಕತ್ ಇದ್ರೆ ನನ್ನ ಎದುರುಗಡೆ ಗೋಮಾಂಸ ತಿನ್ನಿ ನೋಡೋಣ, ನಿಮ್ಮನ್ನು ಜೈಲಿನ ಒಳಗಡೆ ಹಾಕಿಸ್ತೀನಿ ಎಂದು ಸಿದ್ದರಾಮಯ್ಯಗೆ ಸಚಿವ ಪ್ರಭು ಚವ್ಹಾಣ್ ಎಚ್ಚರಿಕೆ ನೀಡಿದರು.

ಜೆಡಿಎಸ್ ಮಾತಿನಿಂದ ಕಾಂಗ್ರೆಸ್ ವಿಚಲಿತ: ಜೆಡಿಎಸ್ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವುದಾಗಿ ಆ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಇದರಿಂದ ಕಾಂಗ್ರೆಸ್ ನಾಯಕರು ವಿಚಲಿತರಾಗಿದ್ದಾರೆ ಎಂದು ಪ್ರಭು ಚವ್ಹಾಣ್ ಹೇಳಿದರು. ಇದೇ ಕಾರಣದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗೋಹತ್ಯೆ ನಿಷೇಧ ಕಾಯ್ದೆಯ ತಿದ್ದುಪಡಿ ವಾಪಸ್ ಪಡೆಯುವುದಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ತಿದ್ದುಪಡಿ ವಾಪಸ್ ಪಡೆಯಲು ಇವರು ಯಾರು ಎಂದು ಸಚಿವರು ಖಾರವಾಗಿ ಪ್ರಶ್ನಿಸಿದರು.

ವ್ಯಂಗ್ಯವಾಡಿದ್ದ ಪ್ರಿಯಾಂಕ್ ಖರ್ಗೆ: ಇನ್ನು ಗೋ ಹತ್ಯೆ ನಿಷೇಧದ ಕಾಂಗ್ರೆಸ್‌ನ ಮತ್ತೋರ್ವ ನಾಯಕ ಪ್ರಿಯಾಂಕ್ ಖರ್ಗೆ ಕಳೆದ ಕೆಲದಿನಗಳ ಹಿಂದಷ್ಟೇ ವ್ಯಂಗ್ಯವಾಡಿದ್ದರು. ಈ ಕಾಯ್ದೆಯಿಂದ ರಾಜ್ಯಕ್ಕೆ ರೈತರಿಗೆ, ಕಾರ್ಮಿಕರಿಗೆ, ಕೈಗಾರಿಕೆಗಳಿಗೆ ಎಷ್ಟು ಲಾಭವಾಯಿತು ಎಂದು ಯಾರಾದರೂ ಪರಿಶೀಲನೆ ಮಾಡಿದ್ದಾರಾ. ಸಿಎಂ ಹಾಗೂ ಪಶು ಸಂಗೋಪನಾ ಸಚಿವರು ಇದನ್ನು ಕ್ರಾಂತಿಕಾರಿ ಕಾಯ್ದೆ ಗುಜರಾತ್ ಮಾಡೆಲ್ ಎಂದರು. ಆದರೆ ಈ ಕಾನೂನು ಯಾವ ದುಸ್ಥಿತಿಯಲ್ಲಿ ಇದೆ ಎಂಬ ಕನಿಷ್ಠ ಪ್ರಜ್ಞೆ ಇವರಿಗೆ ಇದೆಯೆ, ಈ ಕಾನೂನು ರೈತರು, ಚರ್ಮ ಉದ್ಯಮ ಕಾರ್ಮಿಕರು, ರಾಜ್ಯದ ಆರ್ಥಿಕ ಪರಿಸ್ಥಿತಿಗೆ ದೊಡ್ಡ ಪೆಟ್ಟು ಬಿದ್ದಿದೆ ಎಂದು ಆರೋಪಿಸಿದ್ದರು.



ಗೋಹತ್ಯೆಗೆ 2ರಿಂದ 7 ವರ್ಷ ಜೈಲು

ಬೆಂಗಳೂರು: ಗೋಹತ್ಯೆ ಆರೋಪಿಗಳಿಗೆ 2ರಿಂದ 7 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ.ಯಿಂದ 10 ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ ಎಂದು ಸಚಿವ ಪ್ರಭು ಚೌಹಾಣ್ ಹೇಳಿದ್ದಾರೆ. ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾಯಿದೆ ಜಾರಿಗೆ ಬಂದ ಮೇಲೆ ಗೋವುಗಳ ಹತ್ಯೆ ಸಂಖ್ಯೆ ಇಳಿಕೆಯಾಗುತ್ತಿದೆ. ಕಾನೂನು ಉಲ್ಲಂಘಿಸಿ ಗೋಹತ್ಯೆ ಎಸಗುವ ಆರೋಪಿಗಳಿಗೆ 50 ಸಾವಿರ ರೂ.ಯಿಂದ 10 ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ 1964ರಿಂದಲೇ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದಿತ್ತು, ಆಗ ಗೋಹತ್ಯೆಗೆ 1 ಸಾವಿರ ದಂಡ, 6 ತಿಂಗಳು ಜೈಲು ಶಿಕ್ಷೆ ಇತ್ತು. ಈಗ ಕಾಯ್ದೆ ತಿದ್ದುಪಡಿ ಮಾಡಿದ್ದೇವೆ ಎಂದು ವಿವರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯುವ ಸಮೂಹ ಕಾರ್ಯಾಗಾರ 'ಅನ್‌ಲೀಷ್ ಇನೋವೇಷನ್ ಲ್ಯಾಬ್ ಇಂಡಿಯಾ'ಕ್ಕೆ ಚಾಲನೆ

● ವಂದೇ ಮಾತರಂ ನೃತ್ಯ ವೈಭವದ ಮೂಲಕ ಸಚಿವ ಡಾ.ಅಶ್ವಥ್ ನಾರಾಯಣ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟನೆ ● ಪ್ರತಿಭಾನ್ವಿತ ಯುವ ಸಮೂಹ, ಸುಸ್ಥಿರ ಅಭಿವೃದ್ಧಿ ಸಂಬಂಧ ವಿಚಾರ ವಿನಿಮಯ





ಮೈಸೂರು, ಡಿ.3(ಎಂಕೆ)– ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ 8 ದಿನಗಳ ಕಾಲ ನಡೆಯುವ 4ನೇ 'ಅನ್‌ಲೀಷ್ ಇನೋವೇಷನ್ ಲ್ಯಾಬ್ ಇಂಡಿಯಾ–2022' ಯುವ ಸಮೂಹ ಕಾರ್ಯಾಗಾರಕ್ಕೆ ಶನಿವಾರ ಭವ್ಯ ಚಾಲನೆ ದೊರೆಯಿತು.

ವಿವಿಧತೆಯಲ್ಲಿ ಏಕತೆ ಸಾರುವ 'ವಂದೇ ಮಾತರಂ' ನೃತ್ಯ ವೈಭವದ ಮೆರಗಿನೊಂದಿಗೆ ವರ್ಣಮಯ ಚಾಲನೆ ಪಡೆದ 'ಅನ್‌ಲೀಶ್' ಬೃಹತ್ ಸಮಾರಂಭವನ್ನು ಉನ್ನತ ಶಿಕ್ಷಣ ಎಲೆಕ್ಟ್ರಾನಿಕ್ಸ್ ಹಾಗೂ ಐಟಿ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಬಳಿಕ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ ಮಾತನಾಡಿ, ಭಾರತ ದೇಶದ ಸಂಸ್ಕೃತಿಯಲ್ಲಿಯೇ ಸುಸ್ಥಿರತೆ ಇದೆ. ಕರ್ನಾಟಕ ಸಂಶೋಧನೆಗಳಿಗೆ ಪ್ರೇರಣೆ ನೀಡುವ ಭೂಮಿಯಾಗಿದ್ದು, ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದು ಹೇಳಿದರು.

ಪ್ರಸ್ತುತ ವಿಶ್ವದಲ್ಲಿ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಆಯೋಜಿಸಲಾಗುತ್ತಿರುವ 'ಅನ್‌ಲೀಷ್' ವೇದಿಕೆಯಲ್ಲಿ ಭಾಗವಹಿಸುವ ಪ್ರತಿಭಾನ್ವಿತ ಯುವ ಸಮೂಹ, ಸುಸ್ಥಿರ ಅಭಿವೃದ್ಧಿ ಕುರಿತಾದ ಪ್ರಮುಖ ವಿಚಾರಗಳ ಕುರಿತು ಚರ್ಚಿಸುವುದರ ಜೊತೆಗೆ ಸೂಕ್ತ ಸಲಹೆಗಳನ್ನು ಕಂಡುಕೊಳ್ಳಲಾಗುತ್ತದೆ ಎಂದರು.

135 ಕೋಟಿಗೂ ಹೆಚ್ಚಿನ ಜನಸಂಖ್ಯೆಯುಳ್ಳ ಭಾರತದಲ್ಲಿ ಆರೋಗ್ಯ ರಕ್ಷಣೆ, ನವೀಕರಿಸಬಹುದಾದ ಇಂಧನ, ಶುದ್ಧ ನೀರು, ಶಿಕ್ಷಣ ಸೇರಿದಂತೆ ಎಲ್ಲಾ ಸಂಭಾವ್ಯ ಕ್ಷೇತ್ರಗಳಲ್ಲಿ ಸುಸ್ಥಿರತೆಯನ್ನು ಸಾಧಿಸುವುದು ಸರ್ಕಾರದ ಉದ್ದೇಶವಾಗಿದೆ. ಆದರೆ ಎಲ್ಲಾ ಕ್ಷೇತ್ರದಲ್ಲಿಯೂ ಗುಣಾತ್ಮಕ ಅಭಿವೃದ್ಧಿ ಸಾಧಿಸುವುದು ಸವಾಲಿನ ಕೆಲಸವಾಗಿದ್ದು. ಯುವ ಸಮೂಹದ ಪಾಲ್ಗೊಳ್ಳುವಿಕೆ ಅತ್ಯಂತ ಅವಶ್ಯವಾಗಿದೆ ಎಂದು ಅವರು ವಿವರಿಸಿದರು.

ಅಭಿವೃದ್ಧಿ ಸಂಬಂಧ ಸರಕಾರ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಸುಸ್ಥಿರತೆಗೆ ಗಮನ ನೀಡಲಾಗುತ್ತಿದೆ. ಇತ್ತೀಚೆಗೆ ಮುಕ್ತಾಯಗೊಂಡ ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಸಹ ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ವ್ಯಾಪಕವಾಗಿ ಚರ್ಚಿಸಲಾಯಿತು. ಗ್ರ್ಯಾಂಡ್ ಚಾಲೆಂಜಸ್ ಈವೆಂಟ್ ನಂತಹ ಸರ್ಕಾರಿ ಕಾರ್ಯಕ್ರಮಗಳಲ್ಲಿ ಸಹ, ಸುಸ್ಥಿರತೆಗೆ ಸಂಬಂಧಿಸಿದ ವಿಷಯಗಳು ಗಮನ ಸೆಳೆಯುತ್ತಿವೆ ಎಂದು ತಿಳಿಸಿದರು.

ದೇಶದ ಜನ–ಜೀವನ ವಿಧಾನ ಮತ್ತು ಸಂಸ್ಕೃತಿ, ಸರಳತೆಯೂ ಸುಸ್ಥಿರತೆಯನ್ನು ಪ್ರತಿನಿಧಿಸುತ್ತದೆ. ಆದಾಗ್ಯೂ, ವಸಾಹತುಶಾಹಿಯ ಪ್ರಭಾವ ನಮ್ಮ ಜೀವನ ವಿಧಾನದ ಮೇಲೆ ದುಷ್ಪರಿಣಾಮಗಳನ್ನು ಬೀರಿದ್ದು, ಸುಸ್ಥಿರತೆಗೆ ಹಾನಿಯುಂಟು ಮಾಡಿದೆ. ಆದರೀಗ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ನಾವು ಸುಸ್ಥಿರತೆಯನ್ನು ಮರುಶೋಧಿಸಬೇಕು ಎಂದು ಕರೆ ನೀಡಿದರು.

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನಮ್ಮ ನಾಳೆಗಳನ್ನು ಉತ್ತಮವಾಗಿಸಿಕೊಳ್ಳಲು ಸುಸ್ಥಿರ ಅಭಿವೃದ್ಧಿ ಸಾಧಿಸುವುದು ಮುಖ್ಯವಾಗಿದೆ. ಆನ್‌ಲೈನ್ ಬಳಕೆ ಹೆಚ್ಚಾಗುತ್ತಿದ್ದು, ಸೈಬರ್ ಅಪರಾಧಗಳ ಬಗ್ಗೆಯೂ ಯುವಕರು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರಲ್ಲದೆ ದೇಶ–ವಿದೇಶಗಳಿಂದ ಭಾಗವಹಿಸಿರುವ ಯುವಕ–ಯುವತಿಯರಿಗೆ ಒಮ್ಮೆ ಮೈಸೂರು ಅರಮನೆ ವೀಕ್ಷಣೆ ಮಾಡಿ, ಮೈಸೂರು ಸಂಸ್ಥಾನದ ವೈಭವ ಅರಿಯುವಂತೆ ಆಹ್ವಾನ ನೀಡಿದರು.

ನಂತರ ನೊಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಸ್ ಸತ್ಯಾರ್ಥಿ ವಿಶೇಷ ಉಪನ್ಯಾಸ ನೀಡಿದರು. ಎಲೆಕ್ಟ್ರಾನಿಕ್ಸ್, ಐಟಿ–ಬಿಟಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ, 'ಅನ್‌ಲೀಷ್–2022' ಮುಖ್ಯಸ್ಥ ಪ್ರೊ.ಫ್ಲೇಮಿಂಗ್, ಇನ್ಫೋಸಿಸ್‌ನ ಹಿರಿಯ ಉಪಾಧ್ಯಕ್ಷ ತಿರುಮಲ ಆರೋಹಿ, ಅಟಲ್ ಇನ್ನೋವೇಷನ್ ಮಿಷನ್ ನಿರ್ದೇಶಕ ಡಾ.ಚಿಂತನ್ ವೈಷ್ಣವ್ ಮತ್ತಿತರರು ಉಪಸ್ಥಿತರಿದ್ದರು.

4ನೇ 'ಅನ್‌ಲೀಷ್ ಸಮಾವೇಶ'...

2017ರಿಂದ ಆರಂಭವಾದ 'ಅನ್‌ಲೀಷ್' ಸಮಾವೇಶದ ಮೂರು ಆವೃತ್ತಿಗಳು ಡೆನ್ಮಾರ್ಕ್, ಸಿಂಗಪೂರ್ ಹಾಗೂ ಚೀನಾದಲ್ಲಿ ನಡೆದಿದ್ದು, 4ನೇ ಸಮಾವೇಶ ದೇಶದಲ್ಲಿಯೇ ಪ್ರತಿಷ್ಠಿತ ಸಂಸ್ಥೆಯಾದ ಇನ್ಫೋಸಿಸ್ ಮೈಸೂರು ಕ್ಯಾಂಪಸ್‌ನಲ್ಲಿ ಆಯೋಜನೆಗೊಂಡಿದೆ.

ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧ್ಯವಾಗಿಸಲು ವಿಶ್ವದ ವಿವಿಧ ಭಾಗಗಳಿಂದ ಪ್ರತಿಭಾನ್ವಿತ ಯುವಕ–ಯುವತಿಯರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. 'ಅನ್‌ಲೀಷ್' ಸಮಾವೇಶ ಸುಸ್ಥಿರ ಅಭಿವೃದ್ಧಿಯ ಬ್ರ್ಯಾಂಡ್ ಎಂದೇ ಗುರ್ತಿಸಿಕೊಂಡಿದ್ದು, 167 ದೇಶಗಳಿಂದ ಸಾವಿರಾರು ಯುವಜನರು ಭಾಗವಹಿಸಿ ಕುಡಿಯುವ ನೀರು, ಪರಿಸರ ಮಾಲಿನ್ಯ ನಿಯಂತ್ರಣ, ಶಿಕ್ಷಣ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಾಗಬೇಕಾದ ಗುಣಾತ್ಮಕ ಅಭಿವೃದ್ಧಿ ಕುರಿತು ಚರ್ಚಿಸಿ, ಪರಿಹಾರಗಳಿಗೆ ಸಲಹೆಗಳನ್ನು ನೀಡುವುದಾಗಿದೆ.

ಉದ್ಯಮಿ ಅಪಹರಣ ಯತ್ನ: ಐವರ ಬಂಧನ

● ಬಂಧಿತರಲ್ಲಿ ಉದ್ಯಮಿಯ ಪೆಟ್ರೋಲ್ ಬಂಕ್ ಲಾರಿ ಡ್ರೈವರ್ ಸೇರಿದ್ದಾನೆ ● ಬಂಧಿತರಿಂದ ಹುಂಡೈ ಕಾರು, ದ್ವಿಚಕ್ರವಾಹನ, ಮೊಬೈಲ್ ವಶ



ಮೈಸೂರು, ಡಿ.3– ಉದ್ಯಮಿಯನ್ನು ಅಪಹರಿಸಲು ಯತ್ನಿಸಿದ ಐವರ ತಂಡವನ್ನು ಬಂಧಿಸಿರುವ ಮೈಸೂರಿನ ನರಸಿಂಹರಾಜ ಠಾಣೆ ಪೊಲೀಸರು ಹುಂಡೈ ಕಾರು, ದ್ವಿಚಕ್ರವಾಹನ ಹಾಗೂ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಟಿ.ನರಸೀಪುರ ಪಟ್ಟಣದ ದಳವಾಯಿ ಅಗ್ರಹಾರದಲ್ಲಿ ವಾಸಿಸುತ್ತಿರುವ ಸಿ.ಎಂ. ಪ್ರಕಾಶ್(47) ಅವರನ್ನು ನ.24 ರಂದು ರಾತ್ರಿ ಅಪಹರಿಸಲು ಯತ್ನಿಸಿದ್ದ ಅವರ ಲಾರಿ ಚಾಲಕ ಸೇರಿದಂತೆ ಐವರು ಬಂಧನಕ್ಕೊಳಗಾಗಿದ್ದಾರೆ.

ವಿವರ: ಟಿ.ನರಸಿಪುರದಲ್ಲಿ ಪೆಟ್ರೋಲ್ ಬಂಕ್ ಹಾಗೂ ಇತರೆ ಉದ್ಯಮಗಳನ್ನು ನಡೆಸುತ್ತಿರುವ ಸಿ.ಎಂ. ಪ್ರಕಾಶ್ ಅವರ ತಂದೆ ನ.17 ರಂದು ನಿಧನರಾಗಿದ್ದರು. ಆರಾಧನೆ ಸಲುವಾಗಿ ಬಟ್ಟೆ ಖರೀದಿಸಲು ಪ್ರಕಾಶ್ ಅವರ ಪತ್ನಿ ಎಂ.ಸವಿತಾ ಮತ್ತು ಸಹೋದರಿ ಮಂಜುಳಾ ಅವರು ಇನ್ನೋವಾ ಕಾರಿನಲ್ಲಿ ಚಾಲಕ ಮಹದೇವಸ್ವಾಮಿ ಅವರೊಂದಿಗೆ ಮೈಸೂರಿಗೆ ನ.24ರ ಸಂಜೆ ಆಗಮಿಸಿದ್ದರು.

ಅಂದು ಕಾರ್ಯನಿಮಿತ್ತ ಮದ್ದೂರಿಗೆ ತೆರಳಿದ್ದ ಪ್ರಕಾಶ್ ಅವರು ಪತ್ನಿಗೆ ಕರೆ ಮಾಡಿದ್ದು, ಅವರು ಮೈಸೂರಿನಲ್ಲೇ ಇರುವ ವಿಚಾರ ತಿಳಿದು ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಟಿ.ನರಸೀಪುರ ರಸ್ತೆ ಕಡೆಗೆ ಹೋಗುವ ರಿಂಗ್‌ರಸ್ತೆಯಲ್ಲಿ ಕಾರನ್ನು ನಿಲ್ಲಿಸಿಕೊಳ್ಳುವಂತೆ ತಿಳಿಸಿದ್ದಾರೆ. ರಾತ್ರಿ 10.50ರ ಸುಮಾರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಣಿಪಾಲ್ ಆಸ್ಪತ್ರೆ ಎದುರು ಇಳಿದ ಪ್ರಕಾಶ್ ರಸ್ತೆ ಕ್ರಾಸ್ ಮಾಡುತ್ತಿದ್ದ ವೇಳೆ ಅಪರಿಚಿತ ವ್ಯಕ್ತಿಯೋರ್ವ ಅವರ ಭುಜದ ಮೇಲೆ ಕೈ ಇಟ್ಟು ಪ್ರಕಾಶ್ ಅಣ್ಣ ಎಂದು ಕರೆದಿದ್ದಲ್ಲದೆ. ಅವರನ್ನು ತಬ್ಬಿ ಹಿಡಿದು ಅಲ್ಲೇ ನಿಂತಿದ್ದ ಬಿಳಿ ಬಣ್ಣದ ಕಾರಿನೊಳಗೆ ನೂಕಲು ಪ್ರಯತ್ನಿಸಿದ್ದಾನೆ. ಈ ವೇಳೆ ಕೊಸರಾಡಿದ ಪ್ರಕಾಶ್ ಕೂಗಿಕೊಂಡಾಗ ಅವರ ಕೂಗಾಟ ಕೇಳಿ ಪತ್ನಿ ಹಾಗೂ ಚಾಲಕ ಮಹದೇವಸ್ವಾಮಿ ಅತ್ತ ಓಡಿಬರುತ್ತಿದ್ದ ವೇಳೆ ಪ್ರಕಾಶ್ ಅವರ ಬಳಿ ಇದ್ದ ಕಾಲೇಜ್ ಬ್ಯಾಗ್ ಕೆಳಗೆ ಬಿದ್ದಿದೆ, ಅದನ್ನು ಅಪರಿಚಿತ ವ್ಯಕ್ತಿ ತೆಗೆದುಕೊಂಡು ಕಾರು ಹತ್ತಿದ್ದಾನೆ ಆ ಕಾರಿನಲ್ಲಿ ಇನ್ನೂ ಮೂವರಿದ್ದರು. ಪ್ರಕಾಶ್ ಅವರ ಪತ್ನಿ ಹಾಗೂ ಕಾರು ಚಾಲಕ ಓಡಿ ಬರುವುದನ್ನು ಕಂಡು ಅಪಹರಣಕಾರರು ರಾಂಗ್ ರೂಟ್‌ನಲ್ಲೇ ಟಿ.ನರಸೀಪುರದ ಕಡೆ ಕಾರನ್ನು ಚಲಾಯಿಸಿಕೊಂಡು ಪರಾರಿಯಾಗಿದ್ದಾರೆ.

ಒಂದೆಡೆ ತಮ್ಮ ತಂದೆಯ ಆರಾಧನ ಕಾರ್ಯದ ಸಿದ್ಧತೆಯಲ್ಲಿ ತೊಡಗಿದ್ದ ಪ್ರಕಾಶ್, ಯಾರು ತನ್ನ ಮೇಲೆ ದಾಳಿ ನಡೆಸಿರಬಹುದು ಎಂಬುದರ ಬಗ್ಗೆ ಸ್ವಲ್ಪವು ಯೋಚಿಸಿರಲಿಲ್ಲ. ಆದರೆ, ಮೇಲೆ ನ.27ರಂದು ಮಧ್ಯಾಹ್ನ 9380946720 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ "ಪ್ರಕಾಶ್ ಅಣ್ಣ ಮೊನ್ನೆ ರಾತ್ರಿ ಬಿದ್ದ ಬ್ಯಾಗ್ ತೆಗೆದುಕೊಂಡು ಹೋದೆವಲ್ಲ. ನೀವು ಹೆದರಿಕೊಂಡ್ರ" ಎಂದು ಹೇಳಿ ಕರೆ ಕಟ್ ಮಾಡಿದ್ದಾನೆ. ತಕ್ಷಣವೇ ಮೈಸೂರಿಗೆ ಆಗಮಿಸಿದ ಪ್ರಕಾಶ್ ಎನ್.ಆರ್. ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಿಸಿದ್ದರು.

ತನಿಖೆ ನಡೆಸಿದ ಎನ್.ಆರ್.ಠಾಣೆ ಇನ್‌ಪೆಕ್ಟರ್ ಅಜರುದ್ದೀನ್ ನೇತೃತ್ವದ ತಂಡ ಡಿ.1 ರಂದು ಐವರು ಆರೋಪಿಗಳನ್ನು ಬಂಧಿಸಿದೆ. ಇವರಲ್ಲಿ ಪ್ರಕಾಶ್ ಅವರ ಪೆಟ್ರೋಲ್ ಬಂಕ್‌ನಲ್ಲಿ ಲಾರಿ ಚಾಲಕನಾಗಿದ್ದ ನಂಜುಂಡಸ್ವಾಮಿ ಎಂಬಾತನೂ ಸೇರಿದ್ದಾನೆ. ಪ್ರಕಾಶ್ ಅವರನ್ನು ಅಪಹರಿಸಿದರೆ, ಲಕ್ಷಾಂತರ ರೂ. ಒತ್ತೆ ಹಣ ವಸೂಲಿ ಮಾಡಬಹುದು ಎಂಬ ಉದ್ದೇಶದಿಂದ ನಂಜುಂಡಸ್ವಾಮಿ ಯೋಜನೆ ಮೇರೆಗೆ ಪ್ರಕಾಶ್ ಅವರನ್ನು ಅಪಹರಿಸುವ ಪ್ರಯತ್ನ ನಡೆದಿದೆ ಎನ್ನಲಾಗಿದೆ.

ನ.24 ರಂದು ಪ್ರಕಾಶ್ ಮದ್ದೂರಿಗೆ ತೆರಳಿರುವುದು ಹಾಗೂ ಅಂದು ರಾತ್ರಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಪ್ರಕಾಶ್ ಅವರಿಗಾಗಿ ಅವರ ಪತ್ನಿ ಕಾಯುತ್ತಿರುವ ಮಾಹಿತಿ ಕಲೆಹಾಕಿದ್ದ ನಂಜುಂಡಸ್ವಾಮಿ ಯೋಜನೆ ರೂಪಿಸಿ ಪ್ರಕಾಶ್ ಅವರನ್ನು ಅಪಹರಿಸಲು ಯತ್ನಿಸಿದ್ದನಾದರೂ ಸಕಾಲದಲ್ಲಿ ಅವರ ಪತ್ನಿ ಮತ್ತು ಕಾರು ಚಾಲಕ ಆಗಮಿಸಿದ್ದರಿಂದ ಅಪಹರಣ ವಿಫಲವಾಗಿದೆ ಎಂದು ತಿಳಿದು ಬಂದಿದೆ.

ಚೀನಾ ಲಾಕ್‌ಡೌನ್ ವಿರೋಧಿಸಿ ಟಿಬೆಟಿಯನ್‌ರ ಪ್ರತಿಭಟನೆ




ಮೈಸೂರು,ಡಿ.3(ಪಿಎಂ)– ಚೀನಾ ಮತ್ತು ಟಿಬೆಟ್‌ನಲ್ಲಿ ಅಲ್ಲಿನ ಕಮ್ಯೂನಿಸ್ಟ್ ಸರ್ಕಾರ ಕೋವಿಡ್ ಹಿನ್ನೆಲೆಯಲ್ಲಿ ವಿಧಿಸಿರುವ ಕಠಿಣ ಲಾಕ್‌ಡೌನ್ ತೆರವಿಗೆ ಅಲ್ಲಿನ ಸಾರ್ವಜನಿಕರು ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಿ ಮೈಸೂರಿನಲ್ಲಿ ಶನಿವಾರ ಟಿಬೆಟ್ ಯುವ ಜನತೆಯಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ವಿರುದ್ಧ ಟಿಬೆಟ್ ಯುವ ಜನರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಕಚೇರಿಯಿಂದ ಆರಂಭಿಸಿದ ಪ್ರತಿಭಟನಾ ಮೆರವಣಿಗೆಯು ಪುರಭವನದವರೆಗೆ ನಡೆಯಿತು. ಅಲ್ಲದೆ, ಟಿಬೆಟ್‌ಗೆ ಚೀನಾ ಸರ್ಕಾರ ಸ್ವಾತಂತ್ರ್ಯ ನೀಡಬೇಕೆಂದೂ ಆಗ್ರಹಿಸಲಾಯಿತು. ರಿಜಿನಲ್ ಟಿಬೆಟಿಯನ್ ಯೂತ್ ಕಾಂಗ್ರೆಸ್‌ನ ಹುಣಸೂರು ಮತ್ತು ಬೈಲುಕುಪ್ಪೆ ಘಟಕಗಳ ವತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಭಗವದ್ಗೀತೆಯ ಮಹಾಭಾರತದ ಭಾಗವಾಗಿ ನೋಡುವ ಬದಲು ಸ್ವತಂತ್ರ ಗ್ರಂಥವಾಗಿ ನೋಡುವುದು ಉತ್ತಮ

ಹಿರಿಯ ಸಾಹಿತಿ ಅನಂತರಾಮು ಅಭಿಮತ



ಮೈಸೂರು, ಡಿ.3(ಎಸ್‌ಪಿಎನ್)– ಓದುಗರು, ಮಹಾಭಾರತದಲ್ಲಿ ಒಂದು ಭಾಗವಾಗಿ ಭಗವದ್ಗೀತೆ ನೋಡುವ ಬದಲು, ಭಗವದ್ಗೀತೆಯನ್ನು ಒಂದು ಸ್ವತಂತ್ರ ಗ್ರಂಥವಾಗಿ ನೋಡುವುದು ಉತ್ತಮ ಎಂದು ಹಿರಿಯ ಸಾಹಿತಿ ಡಾ.ಕೆ.ಅನಂತರಾಮು ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿಯಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯ ಮೈಸೂರು ಉಪವಲಯದ ವತಿಯಿಂದ 'ಗೀತಾ ಜಯಂತಿ' ಅಂಗವಾಗಿ ಏರ್ಪಡಿಸಿದ್ದ 'ಇಂದಿನ ಸಮಾಜಕ್ಕೆ ಭಗ ವದ್ಗೀತೆಯ ಪ್ರಸ್ತುತತೆ' ಕುರಿತು ಅವರು ಮಾತನಾಡಿದರು.

ಯುದ್ಧಭೂಮಿಯಲ್ಲಿ ಅರ್ಜುನ ವಿಮುಖನಾಗುವ ಯೋಚನೆಯಲ್ಲಿರುತ್ತಾನೆ. ಇದನ್ನು ಕಂಡ ಶ್ರೀ ಕೃಷ್ಣ, ಅರ್ಜುನನಿಗೆ ಯುದ್ಧನೀತಿಯನ್ನು ಬೋಧಿಸಿದ ಸಂದರ್ಭ. ಶ್ರೀಕೃಷ್ಣ ಮತ್ತು ಅರ್ಜುನನ ನಡುವೆ ನಡೆದ ಸಂಭಾಷಣೆ ರೂಪವೇ ಭಗವದ್ಗೀತೆ. ಯುದ್ಧಭೂಮಿಯಲ್ಲಿ ಅರ್ಜುನ ತನ್ನ ದಾಯಾದಿಗಳನ್ನೇ ಮುಖಾಮುಖಿಯಾಗಿ ಏಕೆ ಕೊಲ್ಲಬೇಕು?. ಅಣ್ಣ–ತಮ್ಮಂದಿರ ವಿರುದ್ಧ ನಾನೇಕೆ ಯುದ್ಧ ಮಾಡಬೇಕು ಎಂಬ ದ್ವಂದ್ವದಲ್ಲಿದ್ದು, ಸನ್ನಿವೇಶವನ್ನು ಭಾವನಾತ್ಮಕವಾಗಿ ಪರಿಗಣಿಸುತ್ತಾನೆ. ಆಗ ಅರ್ಜುನನಿಗೆ ಶ್ರೀಕೃಷ್ಣ ಧೈರ್ಯ ತುಂಬಿ, ನೀನು ಕ್ಷತ್ರಿಯನ ರೀತಿ ಯೋಚನೆ ಮಾಡಬೇಕು ಎಂದು ಬೋಧನೆ ಮಾಡಿದ ಸಂದರ್ಭವನ್ನು ವಿವರಿಸಿದರು.

ಅಣ್ಣ–ತಮ್ಮ ಎಂಬ ಸಂಬಂಧಗಳ ಬಗ್ಗೆ ಯೋಚಿಸಲು ಯುದ್ಧಭೂಮಿ ಸೂಕ್ತವಲ್ಲ. ಯುದ್ಧವನ್ನು ಯುದ್ಧವಾಗಿಯೇ ಸ್ವೀಕರಿಸಬೇಕು. ಎದುರಿಗೆ ಶತ್ರು ಪಡೆ ನೋಡಿ, ವೀರ ಯೋಧನೊಬ್ಬ ಅಧೀರನಾಗಿ ಯೋಚಿಸುವುದು ವೀರ ಕ್ಷತ್ರಿಯನ ಲಕ್ಷಣವಲ್ಲ ಎಂಬ ಧೈರ್ಯದ ಮಾತುಗಳನ್ನಾಡಿ, ಅರ್ಜುನನ್ನು ಯುದ್ಧಕ್ಕೆ ಸನ್ನದ್ಧ ಮಾಡಿದ ಸಂದರ್ಭವನ್ನು ಭಗವದ್ಗೀತೆಯಲ್ಲಿ ವ್ಯಾಸರು ಅದ್ಭುತವಾಗಿ ಚಿತ್ರಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಒಬ್ಬ ವ್ಯಕ್ತಿ ಲೌಕಿಕ ಮತ್ತು ಅಲೌಕಿಕ ಜಗತ್ತು ಕುರಿತು ಯೋಚಿಸುವುದು ಹೀಗೆ. ಲೌಕಿಕ ಬದುಕಿನಲ್ಲಿರುವ ವ್ಯಕ್ತಿ, ಸಾಲ ತೀರಿಸುವುದು ಹೇಗೆ?. ನಾಳೆಯ ಜೀವನ ಹೇಗೆ?. ಮುಂದಿನ ಅಧಿಕಾರವನ್ನು ಪಡೆಯುವುದು ಹೇಗೆ ಎಂಬಿತ್ಯಾದಿ ಪ್ರಶ್ನೆಗಳನ್ನು ಮನಸ್ಸಿನಲ್ಲಿ ಹುಟ್ಟುಹಾಕಿ, ದಿನನಿತ್ಯ ಒತ್ತಡದಲ್ಲಿ ಬದುಕು ಕಟ್ಟಿಕೊಂಡಿರುವುದೇ ಲೌಕಿಕ ಜಗತ್ತು. ಆದರೆ, ಅಲೌಕಿಕ ಬದುಕಿನಲ್ಲಿರುವ ವ್ಯಕ್ತಿ, ಅರ್ಥ, ಕಾಮ ಮತ್ತು ಮೋಕ್ಷ ಬದುಕಿನ ನಾಲ್ಕು ಹಂತಗಳನ್ನು ದಾಟಿ ಮೋಕ್ಷ ಪಡೆಯುವುದೇ ಅಲೌಕಿಕ ಜಗತ್ತು. ಲೌಕಿಕ ಹಾಗೂ ಅಲೌಕಿಕ ಜಗತ್ತಿನ ವ್ಯತ್ಯಾಸವನ್ನು ತೋರಿಸುವ ಅಂಶಗಳು ಭಗವದ್ಗೀತೆಯಲ್ಲಿ ಅಡಕವಾಗಿವೆ ಎಂದರು.

ಹತ್ತು ಸಾವಿರ ವರ್ಷಗಳ ಹಿಂದೆಯೇ ಭೂಮಿ ಮೇಲೆ ನಡೆಯಬಹುದಾದ ಎಲ್ಲಾ ಘಟನೆಗಳು ಮಹಾಭಾರತದ ಪಾತ್ರಗಳಲ್ಲಿ ಅಡಕವಾಗಿದೆ. ಇಲ್ಲಿನ ಒಂದೊಂದು ಪಾತ್ರವೂ ಇಂದಿನ ಸನ್ನಿವೇಶಕ್ಕೆ ಹೋಲುತ್ತದೆ. ಹಾಗಾಗಿ ಹತ್ತು ಸಾವಿರ ವರ್ಷದ ಅಂದಿನ ತತ್ವಗಳು ಇಂದಿಗೂ ಪ್ರಸ್ತುತ. ವಿಜ್ಞಾನದ ಸಂಶೋಧನೆಗಳು ದಿನದಿಂದ ದಿನಕ್ಕೆ ಸ್ವರೂಪ ಬದಲಾವಣೆಗೊಳ್ಳಬಹುದು. ಆದರೆ, ತತ್ವಗಳು ಸಾವಿರಾರು ವರ್ಷಗಳ ಹಿಂದೆ ಹೇಗಿದ್ದವು ಅದೇ ರೀತಿ ಮುಂದೆಯೂ ಇರುತ್ತವೆ ಎಂದು ಉದಾಹರಣೆ ಸಮೇತ ವಿವರಿಸಿದರು.

ಈ ವೇಳೆ ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಮಹಿಪಾಲಾನಂದಜೀ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ಸೇರಿದಂತೆ ಇನ್ನಿತರರಿದ್ದರು.

'ಟಿಪ್ಪು ನಿಜಕನಸುಗಳು' ನಾಟಕಕ್ಕೆ ಭಾರೀ ಡಿಮ್ಯಾಂಡ್

ಕಿಕ್ಕಿರಿದ ರಂಗಪ್ರೇಮಿಗಳ ನಡುವೆ ನಾಟಕ ಪ್ರದರ್ಶನ



ಮೈಸೂರು, ಡಿ.3(ಎಂಕೆ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ಮುಂದುವರೆದಿದ್ದು, ಶನಿವಾರ 8ನೇ ಪ್ರದರ್ಶನ ಕಂಡಿತು.

ಕಲಾಮಂದಿರದಲ್ಲಾದ ಯಶಸ್ವಿ ಪ್ರದರ್ಶನದ ನಂತರ ರಂಗಾಯಣ ಭೂಮಿಗೀತ ವೇದಿಕೆಯಲ್ಲಿ ನಾಟಕ ಪ್ರದರ್ಶನ ಮುಂದುವರೆದಿದ್ದು, ನಾಟಕ ವೀಕ್ಷಣೆಗೆ ಜನಸಾಗರವೇ ಹರಿದು ಬರುತ್ತಿದೆ. ಸುಮಾರು 220 ಆಸನಗಳ ವ್ಯವಸ್ಥೆ ಇರುವ ಭೂಮಿ ಗೀತದಲ್ಲಿ ಕುಳಿತುಕೊಳ್ಳಲು ಆಸನ ವಿಲ್ಲದೆ ಹಲವು ಮಂದಿ ನಿಂತು ಕೊಂಡು, ಕೆಲವರು ನೆಲದ ಮೇಲೆಯೇ ಕುಳಿತು ನಾಟಕ ನೋಡುತ್ತಿದ್ದಾರೆ.

ಅಡ್ಡಂಡ ಕಾರ್ಯಪ್ಪರ ಚುರುಕುತನ: ಭಾರೀ ಜನಬೆಂಬಲದೊಂದಿಗೆ ಪ್ರದರ್ಶನಗೊಳ್ಳುತ್ತಿರುವ ತಮ್ಮ ನಿರ್ದೇಶನದ ನಾಟಕದಿಂದಾಗಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ಉತ್ಸಾಹ ಹೆಚ್ಚಾದಂತಿದೆ. ನಾಟಕ ಪ್ರದರ್ಶನಕ್ಕೆ ಇನ್ನೂ ಒಂದು ಗಂಟೆ ಬಾಕಿ ಇರುವಂತೆಯೇ ರಂಗಾಯಣದ ಮುಂದೆ ನಿಂತು ಆಗಮಿಸುವ ರಂಗ ಪ್ರೇಕ್ಷಕರನ್ನು ಸ್ವಾಗತಿಸುವ ಅವರು, ನಾಟಕ ಆರಂಭಕ್ಕೂ ಮುನ್ನವೇ ಬನ್ನಿ ಎಂದು ಸ್ವಾಗತಿಸುತ್ತಿದ್ದಾರೆ. **ಕಿರಿಕಿರಿಗೆ ಅವಕಾಶವೇ ಇಲ್ಲ:** 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ಸೂಕ್ತ ಪೊಲೀಸ್ ಭದ್ರತೆ ನೀಡುವ ಮೂಲಕ ಕಿರಿಕಿರಿಗೆ ಅವಕಾಶವೇ ಇಲ್ಲದಂತಾಗಿದೆ. ನಾಟಕ ಮೊದಲ ಪ್ರದರ್ಶನ (ನ.20)ದಿಂದಲೂ ಇಲ್ಲಿವರೆಗೂ ಭದ್ರತೆ ಹಾಗೂ ತಪಾಸಣೆ ಯೊಂದಿಗೆ ನಾಟಕ ವೀಕ್ಷಣೆಗೆ ಅನುವು ಮಾಡಿಕೊಡಲಾಗುತ್ತಿದೆ.

ಅವರೇ ಮುಂದುವರೆಯಬೇಕು...!

ಮೈಸೂರು ರಂಗಾಯಣ ನಿರ್ದೇಶಕರಾದ ಅಡ್ಡಂಡ ಸಿ.ಕಾರ್ಯಪ್ಪ ಅವರ ಅಧಿಕಾರಾವಧಿ ಡಿಸೆಂಬರ್ ಅಂತ್ಯಕ್ಕೆ ಕೊನೆಗೊಳ್ಳಲಿದ್ದು, ಮತ್ತೆ ಅವರೇ ಮುಂದುವರೆಯಬೇಕು ಎಂಬ ಮಾತುಗಳು ಕೇಳಿಬರುತ್ತಿವೆ.

ಅಡ್ಡಂಡ ಕಾರ್ಯಪ್ಪ ಅವರು, ರಂಗಾಯಣ ನಿರ್ದೇಶಕರಾದ ಬಳಿಕ ರಂಗಾಯಣದ ವಾತಾವರಣವೇ ಬದಲಾಗಿದೆ. ಕಣ್ಮನ ಸೆಳೆಯುವ ವನರಂಗ ಸೃಷ್ಟಿಯಾಗಿದೆ. ಕೊರೊನಾ ಸಂದರ್ಭದಲ್ಲಿಯೂ ಪರ್ವ ಸೇರಿದಂತೆ ಹಲವು ವಿಭಿನ್ನ ನಾಟಕಗಳ ಪ್ರಯೋಗ ನಡೆದಿದೆ. ರಂಗತರಬೇತಿ ಶಿಬಿರಗಳಲ್ಲಿ ನೂರಾರು ಶಿಬಿರಾರ್ಥಿಗಳು ಭಾಗವಹಿಸಿ, ರಂಗಭೂಮಿ ಕಲಾವಿದರಾಗಿ ರೂಪುಗೊಂಡಿದ್ದಾರೆ. ಒಂದೇ ವರ್ಷದಲ್ಲಿ 2ನೇ ಬಾರಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಯಶಸ್ವಿಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಅವರೇ ರಂಗಾಯಣ ನಿರ್ದೇಶಕರಾಗಿ ಮುಂದುವರೆಯಬೇಕು ಎಂಬ ಮಾತುಗಳು ಕೇಳಿಬರುತ್ತಿವೆ.

ರೌಡಿಶೀಟರ್ ವಿನೂತನ ಪ್ರತಿಭಟನೆ: ಬಿಜೆಪಿ ಲೇವಡಿ

ಮೈಸೂರು, ಡಿ.3(ಪಿಎಂ)– 'ರೌಡಿಗಳೊಂದಿಗೆ ಬಿಜೆಪಿಯದು ಬಿಡಿಸಲಾಗದ ಬಾಂಧವ್ಯ' ಎಂಬ ಕಾಂಗ್ರೆಸ್ ಟೀಕೆ ನಡುವೆ ಬಿಜೆಪಿಗೆ ಮುಜುಗರ ಆಗುವಂತೆ ರೌಡಿಶೀಟರ್ ಒಬ್ಬ ವಿನೂತನ ರೀತಿ ಪ್ರತಿಭಟನೆ ನಡೆಸಿದ್ದಾನೆ.

ಮೈಸೂರಿನ ನ್ಯಾಯಾಲಯ ಎದುರಿನ ಗಾಂಧಿ ಪುತ್ಥಳಿ ಎದುರು ಶನಿವಾರ ದಿಢೀರ್ ಪ್ರತ್ಯಕ್ಷನಾದ ರೌಡಿಶೀಟರ್ ಮಂಜು ಅಲಿಯಾಸ್ ಪಾನಿಪುರಿ ಮಂಜ, 'ಬಿಜೆಪಿಗರೇ ನಾನೂ ರೌಡಿಶೀಟರ್, ನನಗೂ ನಿಮ್ಮ ಪಕ್ಷದಲ್ಲಿ ಸ್ಥಾನ ಕೊಡುವಿರಾ?' ಎಂಬ ಘೋಷವಾಕ್ಯದ ಫಲಕ ಹಿಡಿದು ಪ್ರತಿಭಟನೆ ನಡೆಸಿದ್ದಾನೆ. ವಿಷಯ ತಿಳಿದು ಲಕ್ಷ್ಮೀಪುರಂ ಪೊಲೀಸರು ಕೂಡಲೇ ಆತನನ್ನು ವಶಕ್ಕೆ ಪಡೆದರು. ಅಲ್ಲದೆ, ಈತ ಉದಯಗಿರಿ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಆಗಿರುವ ಹಿನ್ನೆಲೆಯಲ್ಲಿ ಸದರಿ ಠಾಣೆಯ ವಶಕ್ಕೆ ಒಪ್ಪಿಸಲಾಯಿತು.



ಬಳಿಕ ಈತನ ಪೂರ್ವಪರ ವಿಚಾರಣೆ ನಡೆಸಿದ ಉದಯಗಿರಿ ಪೊಲೀಸರು, ಮುಜಾಗೃತ ಕ್ರಮಕ್ಕೆ ಸಂಬಂಧಿಸಿದಂತೆ ನೋಟಿಸ್ ನೀಡಿದ್ದರೂ ಗೈರು ಹಾಜರಿದ್ದ ಹಿನ್ನೆಲೆಯಲ್ಲಿ ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಮೈಸೂರಲ್ಲಿ ಕೊರೊನಾ ಲಸಿಕಾ ಅಭಿಯಾನಕ್ಕೆ ಜನವರಿಗೆ 2 ವರ್ಷ

ಇದುವರೆಗೂ 62 ಲಕ್ಷಕ್ಕೂ ಅಧಿಕ ಮಂದಿಗೆ ಯಶಸ್ವಿ ಲಸಿಕೆ

ಮೈಸೂರು, ಡಿ.3(ಜಿಎ)–ಮೈಸೂರಿಗೆ ಕೊರೊನಾ ಲಸಿಕೆ ತಲುಪಿ ಮುಂದಿನ ತಿಂಗಳಿಗೆ ಎರಡು ವರ್ಷ ಪೂರೈಸುತ್ತಿದ್ದು, ವಿವಿಧ ವಯೋಮಾನದ 62 ಲಕ್ಷಕ್ಕೂ ಅಧಿಕ ಮಂದಿ ಕೊರೊನಾ ಲಸಿಕೆ ಪಡೆದುಕೊಂಡಿದ್ದಾರೆ.

ಸಾಂಕ್ರಾಮಿಕ ರೋಗ ಕೊರೊನಾದಿಂದ ಮುಕ್ತಾಗಲು ಪ್ರಪಂಚದಾದ್ಯಂತ ಲಸಿಕೆಗಾಗಿ ಕಾಯುತ್ತಿದ್ದರು. 2021 ಜನವರಿ 14ರಂದು ಕಂಟೈನರ್ ಮೂಲಕ ಮೈಸೂರು ನಗರಕ್ಕೆ ಲಸಿಕೆ ತಲುಪಿತ್ತು. ಜ.16 ರಿಂದ ಲಸಿಕೆಯನ್ನು ಮೊದಲು ಕೊರೊನಾ ವಾರಿಯರ್ಸ್‌ಗೆ ನೀಡಲು ಆರಂಭಿಸಿದ್ದರು. ಅಂದಿನಿಂದ ಇಂದಿನವರೆಗೂ(ಡಿ.2) ಮೈಸೂರು ಜಿಲ್ಲೆಯಾದ್ಯಂತ ಮೊದಲ ಡೋಸ್, ಎರಡನೇ ಡೋಸ್ ಹಾಗೂ ಬೂಸ್ಟರ್ ಡೋಸ್ ಸೇರಿದಂತೆ 61,98,434 ಮಂದಿ ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ.

2019ರಲ್ಲಿ ಚೈನಾದಿಂದ ಆರಂಭದ ಕೊರೊನಾ ಎಂಬ ಮಹಾಮಾರಿ ಎಲ್ಲಾ ದೇಶಗಳಿಗೂ ವ್ಯಾಪಿಸಿ, ಕೋಟ್ಯಂತರ ಮಂದಿ ಉಸಿರಾಟ ಸಮಸ್ಯೆ, ತಲೆನೋವು, ಶೀತ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಯಿಂದ ಜೀವ ಕಳೆದುಕೊಂಡರು. ಈ ಸಾಂಕ್ರಾಮಿಕ ರೋಗಕ್ಕೆ ಲಸಿಕೆಯನ್ನು ಕಂಡು ಹಿಡಿಯಲು ವಿಶ್ವದ ಎಲ್ಲಾ ದೇಶಗಳ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿಸಿಕೊಂಡರು. ಆದರೆ, ಭಾರತದ ಪುಣೆ ಮೂಲದ ಸಂಸ್ಥೆಯೊಂದು ಕೊರೊನಾಗೆ ಮೊದಲು ಲಸಿಕೆ ಕಂಡು ಹಿಡಿಯಿತು.

ಕೇಂದ್ರ ಸರ್ಕಾರವು ಮೊದಲು ಕೊರೊನಾ ವಾರಿಯರ್ಸ್‌ಗಳಾದ ವೈದ್ಯರು ಸೇರಿದಂತೆ ವೈದ್ಯಕೀಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಪೊಲೀಸರು ಹಾಗೂ ಮಾಧ್ಯಮದವರಿಗೆ ನೀಡಲು ನಿರ್ಧರಿಸಿತ್ತು. ಅದರಂತೆ ದೇಶದಾದ್ಯಂತ ಜನವರಿ 16, 2021 ರಂದು, ಭಾರತವು ತನ್ನ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 3006 ಲಸಿಕಾ ಕೇಂದ್ರಗಳಲ್ಲಿ ವಿಶ್ವದ ಅತಿದೊಡ್ಡ ಕೋವಿಡ್–19 ವ್ಯಾಕ್ಸಿನೇಷನ್ ಡ್ರೈವ್ ನಡೆಸಲಾಯಿತು. ಅದರಂತೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಕೆ.ಆರ್. ಆಸ್ಪತ್ರೆ ಆಂಬುಲೆನ್ಸ್ ಚಾಲಕ ಯು.ಸಂದೇಶ್ ಮತ್ತು ಜೆಎಸ್‌ಎಸ್ ಆಸ್ಪತ್ರೆಯ ಸಿಬ್ಬಂದಿ ಜಯಲಕ್ಷ್ಮಿ ಅವರು ಮೈಸೂರು ನಗರದಲ್ಲಿ ಮೊಟ್ಟ ಮೊದಲು ಕೋವಿಶೀಲ್ಡ್ ಲಸಿಕೆಯನ್ನು ಸ್ವೀಕರಿಸಿದರು.



ಟ್ರಾಮಾ ಕೇರ್ ಸೆಂಟರ್‌ನಲ್ಲಿ 2021ರ ಜ.16 ರಂದು ಕೆ.ಆರ್. ಆಸ್ಪತ್ರೆ ಆಂಬುಲೆನ್ಸ್ ಚಾಲಕ ಯು.ಸಂದೇಶ್ ಮೈಸೂರು ನಗರದಲ್ಲಿ ಮೊಟ್ಟ ಮೊದಲು ಕೋವಿಶೀಲ್ಡ್ ಲಸಿಕೆಯನ್ನು ಸ್ವೀಕರಿಸಿದ ಸಂದರ್ಭ

ಅಂದು ಆರಂಭವಾದ ಕೊರೊನಾ ಲಸಿಕೆ ಅಭಿಯಾನವು ನಿರಂತರವಾಗಿ ನಡೆದುಕೊಂಡು ಬಂದಿದ್ದು, ಈ ಎರಡು ವರ್ಷದ ಅವಧಿಯಲ್ಲಿ ಕರ್ನಾಟಕದಾದ್ಯಂತ 12 ಕೋಟಿಗೂ ಅಧಿಕ ಮಂದಿ ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ. ಅದರಲ್ಲಿ ಮೊದಲ ಡೋಸ್ 55,151,273, ಎರಡನೇ ಡೋಸ್ 5.52,99,093 ಹಾಗೂ ಬೂಸ್ಟರ್ ಡೋಸ್ 1,02,85,308 ಪಡೆದುಕೊಂಡಿದ್ದು, ಒಟ್ಟು 12,07,35,675 ಮಂದಿ ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ. ಮೈಸೂರು ಜಿಲ್ಲೆಯಾದ್ಯಂತ 61,98,434 ಮಂದಿ ಲಸಿಕೆ ಪಡೆದಿದ್ದು, ಅದರಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಮೊದಲ ಡೋಸ್–40,374, ಎರಡನೇ ಡೋಸ್– 40,864, ಬೂಸ್ಟರ್ ಡೋಸ್–26,468 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಫ್ರಂಟ್ ಲೈನ್ ವರ್ಕರ್ಸ್‌ಗಳಲ್ಲಿ ಮೊದಲ ಡೋಸ್–36,040, ಎರಡನೇ ಡೋಸ್– 36,570, ಬೂಸ್ಟರ್ ಡೋಸ್–21,217 ಲಸಿಕೆ ಪಡೆದಿದ್ದಾರೆ.

12 ರಿಂದ 14 ವರ್ಷದೊಳಗಿನವರಲ್ಲಿ ಮೊದಲ ಡೋಸ್ –1,09,409, ಎರಡನೇ ಡೋಸ್–1,08,266 ಮತ್ತು 15 ರಿಂದ 17 ವರ್ಷದೊಳಗಿನವರು ಮೊದಲ ಡೋಸ್–1,35,289, ಎರಡನೇ ಡೋಸ್–1,33,871 ಮತ್ತು 18 ರಿಂದ44 ವರ್ಷದೊಳಗಿನವರಲ್ಲಿ ಮೊದಲ ಡೋಸ್–13,88,469, ಎರಡನೇ ಡೋಸ್–14,05,291 ಲಸಿಕೆ ಪಡೆದುಕೊಂಡರೆ, 44 ವರ್ಷ ಮೇಲ್ಪಟ್ಟವರಲ್ಲಿ ಮೊದಲ ಡೋಸ್–10,35,356, ಎರಡನೇ ಡೋಸ್–10,54,685 ಲಸಿಕೆ ಹಾಕಿಸಿಕೊಂಡಿದ್ದು, ಇದರಲ್ಲಿ 18 ವರ್ಷ ಮೇಲ್ಪಟ್ಟ 4,21,055 ಮಂದಿ ಹಾಗೂ 60 ವರ್ಷ ಮೇಲ್ಪಟ್ಟ 2,05,210 ಮಂದಿ ಬೂಸ್ಟರ್ ಡೋಸ್ ಪಡೆದುಕೊಂಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ಅಭಿಯಾನ ಹಾಗೂ ಜನತೆ ಸ್ವಯಂ ಪ್ರೇರಣೆಯಿಂದ ಕೊರೊನಾ ಬಗ್ಗೆ ಎಚ್ಚೆತ್ತುಕೊಂಡು ಅವರೇ ಮಾರ್ಗ ಸೂಚಿಗಳನ್ನು ಅನುಸರಿಸಿ, ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ. ಈಗಲೂ ನಗರದ ಎಲ್ಲಾ ಪ್ರಾಥಮಿಕ ಕೇಂದ್ರ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಲಸಿಕೆ ಲಭ್ಯವಿದೆ. ಕೊರೊನಾ ಮತ್ತೆ ಉಲ್ಬಣಗೊಂಡರೆ, ಅದಕ್ಕಾಗಿ ಆರೋಗ್ಯ ಇಲಾಖೆಯೂ ಆಕ್ಸಿಜನ್, ಬೆಡ್, ಔಷಧಿ ಸೇರಿದಂತೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಡಾ.ಪ್ರಸಾದ್, ಡಿಎಚ್‌ಓ, ಮೈಸೂರು

ಮೈಸೂರಿನಲ್ಲಿ ಶನಿವಾರ ಒಂದು ಕೊರೊನಾ ಪ್ರಕರಣ ಪತ್ತೆಯಾಗಿದ್ದು, 18 ಮಂದಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೂ ಮೈಸೂರಿನಲ್ಲಿ 2,33,950 ಕೇಸ್ ಪತ್ತೆಯಾಗಿವೆ.

ಮೈಸೂರು ಮಿತ್ರ ಭಾನುವಾರ 4 ಡಿಸೆಂಬರ್ 2022

ಇಂದು ಹನುಮ ಮಾಲಾಧಾರಿಗಳ ಶೋಭಾ ಸಂಕೀರ್ತನಾ ಯಾತ್ರೆ

ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್

ಶ್ರೀರಂಗಪಟ್ಟಣ, ಡಿ.3– ಹನುಮ ಜಯಂತಿ ಅಂಗವಾಗಿ ಪಟ್ಟಣದಲ್ಲಿ ನಾಳೆ(ಡಿ.4) ಬೃಹತ್ ಶೋಭಾ ಸಂಕೀರ್ತನಾ ಯಾತ್ರೆ ನಡೆಯಲಿದ್ದು, 25 ಸಾವಿರಕ್ಕೂ ಹೆಚ್ಚು ಮಂದಿ ಹನುಮ ಮಾಲಾ ಧಾರಿಗಳು ಭಾಗವಹಿಸುವ ನಿರೀಕ್ಷೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.



ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಗಂಜಾಂನ ನಿಮಿಷಾಂಬ ದೇವಾಲಯ ಬಳಿಯ ಆಂಜನೇಯ ಸ್ವಾಮಿ ದೇಗುಲದಿಂದ ಆರಂಭ ಗೊಂಡು ಪಟ್ಟಣದ ಮುಖ್ಯರಸ್ತೆಯಲ್ಲಿ ಸಾಗಿ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಕೊನೆಗೊಳ್ಳಲಿದೆ. ಶ್ರೀರಂಗಪಟ್ಟಣ ಅತೀ ಸೂಕ್ಷ್ಮ ಪ್ರದೇಶವಾಗಿರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಭಾರೀ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪಟ್ಟಣದ ಜಾಮೀಯಾ ಮಸೀದಿ ಸುತ್ತ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ.

ಪಟ್ಟಣ ಕೇಸರಿಮಯ: ಹನುಮ ಜಯಂತಿ ಅಂಗವಾಗಿ ಶೋಭಾ ಸಂಕೀರ್ತನಾ ಯಾತ್ರೆ ನಡೆಯುವ ಹಿನ್ನೆಲೆಯಲ್ಲಿ ಹನುಮ ಮಾಲಾಧಾರಿಗಳು ಪಟ್ಟಣದ ಜಾಮಿಯಾ ಮಸೀದಿ, ಅಂಬೇಡ್ಕರ್ ವೃತ್ತ, ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣ, ಗಂಜಾಂನ ಶ್ರೀನಿಮಿಷಾಂಬ ದೇವಸ್ಥಾನ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ಕೇಸರಿ ಬಣ್ಣದ ಬಾವುಟಗಳನ್ನು ಕಟ್ಟಿದ್ದು, ಇಡೀ ಶ್ರೀರಂಗಪಟ್ಟಣ ಕೇಸರಿಮಯವಾಗಿದೆ.

ಪೊಲೀಸ್ ಪರೇಡ್: ಶೋಭಾ ಯಾತ್ರೆಯಲ್ಲಿ ಸಾವಿರಾರು ಮಂದಿ ಹನುಮ ಮಾಲಾಧಾರಿಗಳು ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ನೇತೃತ್ವದಲ್ಲಿ ಸಾವಿರಾರು ಪೊಲೀಸರು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿ ಸಾರ್ವಜನಿಕರಿಗೆ ಎಚ್ಚರಿಕೆ ಜೊತೆಗೆ ಅರಿವು ಮೂಡಿಸಿದರು.

ಬಿಗಿ ಭದ್ರತೆ: ಪಟ್ಟಣದಲ್ಲಿ ಈಗಾಗಲೇ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆಗಾಗಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಶೋಭಾ ಯಾತ್ರೆ ಭದ್ರತೆಗಾಗಿ ಎಸ್ಪಿ, ಎಎಸ್ಪಿ, ಡಿವೈಎಸ್ಪಿ 6, ಸಿಪಿಐ 20, ಎಸ್‌ಐ 40, ಎಎಸ್‌ಐ 70, ಹೆಡ್ ಕಾನ್ಸ್‌ಟೇಬಲ್ 750, 5 ಕೆಎಸ್‌ಆರ್‌ಪಿ, 8 ಡಿಆರ್ ತುಕಡಿ, ಕ್ಯೂಆರ್‌ಡಿ 2 ಸೇರಿದಂತೆ 1500ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿದ್ದು, 2 ಡ್ರೋಣ್, 25ಕ್ಕೂ ಹೆಚ್ಚು ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಜೊತೆಗೆ ಶ್ರೀರಂಗಪಟ್ಟಣದ ನಾಲ್ಕೂ ಕಡೆ ಚೆಕ್‌ಪೋಸ್ಟ್ ತೆರೆದು ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ನಿಗಾ ವಹಿಸಲು ಕ್ರಮ ಕೈಗೊಳ್ಳಲಾಗಿದೆ.

6.11 ಕೋಟಿ ವೆಚ್ಚದ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ಚಿನಕುರಳಿ, ಡಿ.3– ಹೇಮಾವತಿ ನೀರಾವರಿ ನಿಗಮದಡಿ 6.11 ಕೋಟಿ ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಶಿಂಡಭೋಗನಹಳ್ಳಿ ಗ್ರಾಮದಲ್ಲಿ 1.40 ಕೋಟಿ ವೆಚ್ಚದ ಗ್ರಾಮ ಪರಿಮಿತಿ ರಸ್ತೆ ಮತ್ತು ಚರಂಡಿ ಉದ್ಘಾಟಿಸಿದರು. ಬಳಿಕ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ನಿರ್ಮಿಸಿರುವ ಶಾಲಾ ಕಟ್ಟಡ ಹಾಗೂ ಅಡುಗೆ ಮನೆ, 13.90 ಲಕ್ಷದ ಹೆಚ್ಚುವರಿ ಶಾಲಾ ಕಟ್ಟಡ ನಿರ್ಮಾಣ, ಚಿನಕುರಳಿ ಗ್ರಾಮದಲ್ಲಿ ಎಸ್‌ಸಿಪಿ ಯೋಜನೆಯಡಿ 50 ಲಕ್ಷ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ದೊಡ್ಡಬೋಗನಹಳ್ಳಿಯಲ್ಲಿ 80 ಲಕ್ಷ ವೆಚ್ಚದ ಗ್ರಾಮ ಪರಿಮಿತಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ, 1.20 ಕೋಟಿ ವೆಚ್ಚದಲ್ಲಿ ಕಾಳೇಗೌಡನ ಕೊಪ್ಪಲು–ಇಳ್ಳೇನಹಳ್ಳಿ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ, ಕೋಡಾಲ ಗ್ರಾಮದಲ್ಲಿ 1.16 ಕೋಟಿ ವೆಚ್ಚದ ಚರಂಡಿ, ಕಾಂಕ್ರೀಟ್ ರಸ್ತೆ ಹಾಗೂ ಮಾರಿಗುಡಿ ದೇವಸ್ಥಾನ ಜೀರ್ಣೋದ್ಧಾರ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು. ಜಿ.ಶೆಟ್ಟಹಳ್ಳಿ ಗ್ರಾಮದಲ್ಲಿ 1.05 ಕೋಟಿ ವೆಚ್ಚದಲ್ಲಿ ಚರಂಡಿ ಹಾಗೂ ಕಾಂಕ್ರೀಟ್ ರಸ್ತೆಗೆ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕ ಸಿ.ಎಸ್.ಪುಟ್ಟರಾಜು, ಹೇಮಾವತಿ ನೀರಾವರಿ ನಿಗಮದ ಯೋಜನೆಯಡಿ 6.11 ಕೋಟಿ ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಗ್ರಾಮೀಣ ಪ್ರದೇಶದ ಬಹುತೇಕ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಜನರಿಗೆ ಮೂಲ ಸೌಕರ್ಯ ಒದಗಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.



ಈ ವೇಳೆ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಪುಟ್ಟೇಗೌಡ, ಮಾಜಿ ಸದಸ್ಯ ಸಿ.ಎಸ್. ಗೋಪಾಲಗೌಡ, ಗ್ರಾಪಂ ಅಧ್ಯಕ್ಷರಾದ ಚಂದ್ರಶೇಖರಯ್ಯ, ಪವಿತ್ರ, ಪುಟ್ಟಸ್ವಾಮಿ, ಉಪಾಧ್ಯಕ್ಷೆ ಮಂಜುಳ, ಮಾಜಿ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಕೃಷ್ಣೇಗೌಡ, ಪರಮೇಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ವೊಗ್ಗಣ್ಣೇಗೌಡ, ನಿರ್ದೇಶಕ ಮಂಜುನಾಥ್, ಇಇ ಪುಟ್ಟಮಾಯಿಗೌಡ, ಎಇಇ ಯೋಗೇಶ್, ಎಇಗಳಾದ ಗಣೇಶ್, ಉಮೇಶ್, ಜಿಪಂ ಎಇಗಳಾದ ಕುಮಾರ್, ಬಾಲರಾಜು, ಪಿಡಿಓ ಆರತಿಕುಮಾರ್, ಮುಖಂಡರಾದ ನಾಗಣ್ಣ, ಪುಟ್ಟಣ್ಣ, ಪ್ರಕಾಶ್, ರಾಧಾಕೃಷ್ಣ, ಬಲರಾಮು ಸೇರಿದಂತೆ ಹಲವರಿದ್ದರು.

'ಬೇಡಿಕೆ ಈಡೇರಿಸಲು ಸರ್ಕಾರ ಬದ್ಧ'

ಮಂಡ್ಯ, ಡಿ.3– ನಿಮ್ಮ ಬೇಡಿಕೆ ಈಡೇರಿಸಲು ಸರ್ಕಾರ ಬದ್ಧ. ಆದ್ದರಿಂದ ಕೂಡಲೇ ಅಹೋರಾತ್ರಿ ಧರಣಿ ಕೈಬಿಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮನವಿ ಮಾಡಿದರು. ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನಗರದಲ್ಲಿ ನಡೆಯುತ್ತಿರುವ ರೈತ ಸಂಘದ ಅಹೋರಾತ್ರಿ ಧರಣಿ ಸ್ಥಳಕ್ಕೆ ಭೇಟಿ ನೀಡಿ ಮನವಿ ಮಾಡಿದರು. ಈ ವೇಳೆ ಮಾತನಾಡಿದ ರೈತ ಮುಖಂಡರು, ಕಳೆದ 27 ದಿನಗಳಿಂದ ಅಹೋರಾತ್ರಿ ಮಳೆ, ಚಳಿ, ಬಿಸಿಲು ಎನ್ನದೆ ಪ್ರತಿಭಟನೆ ನಡೆಸುತ್ತಿದ್ದೇವೆ. ಇಷ್ಟು ದಿನ ಯಾಕೆ ಬರಲಿಲ್ಲ ಸಾರ್... ಸರ್ಕಾರ ರೈತರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ. ರೈತರ ಕಷ್ಟ, ನೋವು, ಸಮಸ್ಯೆಗಳು ಸರ್ಕಾರಕ್ಕೆ ಕಾಣಿಸುತ್ತಿಲ್ಲವೇ? ಎಫ್‌ಆರ್‌ಪಿ ದರ ನಿಗದಿ ಮಾಡಿ ಎಸ್‌ಎಪಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಸರ್ಕಾರದ ಮೇಲೆ ನಮಗೆ ನಂಬಿಕೆ ಇಲ್ಲ. ನ್ಯಾಯ ಸಿಗುವವರೆಗೆ ನಾವು ಪ್ರತಿಭಟನೆ ಕೈ ಬಿಡಲ್ಲ. ಜನವರಿ ಕಳೆದರೂ ಸರಿಯೇ ನಾವು ಪ್ರತಿಭಟನೆ ಮುಂದುವರಿಸುತ್ತೇವೆ. ದಯವಿಟ್ಟು ರೈತರ ಹೋರಾಟಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೆ.ಗೋಪಾಲಯ್ಯ, ರೈತರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ. ಮೂರ್ನಾಲ್ಕು ದಿನಗಳಲ್ಲಿ ರೈತರ ಸಮಸ್ಯೆಗಳು ಬಗೆಹರಿಯುವ ಭರವಸೆ ಇದೆ. ದರ ನಿಗದಿ ಮಾಡಲು ಸರ್ಕಾರ ಮುಂದಾಗಿದೆ. ಆದರೆ ಕಾರ್ಖಾನೆ ಮಾಲೀಕರು ನ್ಯಾಯಾಲಯದಿಂದ ಸ್ಟೇ ತಂದಿದ್ದಾರೆ ಎಂದರು.

ನ್ಯಾಯಾಲಯದಲ್ಲಿ ಡಿ.6ರಂದು ಕಾರ್ಖಾನೆ ಮಾಲೀಕರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಯಲಿದೆ. ಡಿ.8ರಂದು ಸಚಿವ ಸಂಪುಟದ ಸಭೆ ಇದ್ದು, ನ್ಯಾಯಾಲಯದಲ್ಲಿ ನಡೆಯುವ ವಿಚಾರಣೆ ಗಮನಿಸಿ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೀರ್ಮಾನಿಸಲಿದ್ದಾರೆ. ಈಗಾಗಲೇ ನಾನು ಹಾಗೂ ಸಚಿವ ಕೆ.ಸಿ.ನಾರಾಯಣಗೌಡ ಮುಖ್ಯಮಂತ್ರಿ ಹಾಗೂ ಸಕ್ಕರೆ ಸಚಿವರ ಜೊತೆ ಮಾತುಕತೆ ನಡೆಸಿದ್ದೇವೆ. ಕಾರ್ಖಾನೆ ಮಾಲೀಕರ ಜೊತೆ ಸಿಎಂ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲಾಗುವುದು. ಆದ್ದರಿಂದ ಧರಣಿ ಕೈಬಿಡಿ ಎಂದು ಮನವಿ ಮಾಡಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ಸಿ.ಮಧುಚಂದನ್, ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ, ಎಸ್ಪಿ ಎನ್.ಯತೀಶ್, ಬಿಜೆಪಿ ಮುಖಂಡ ಡಾ.ಸಿದ್ದರಾಮಯ್ಯ ಇದ್ದರು.

ಕಳೆದ ನಾಲ್ಕೂವರೆ ವರ್ಷದಲ್ಲಿ ಜನಪರ ಕೆಲಸ ಆಗಿಲ್ಲ

ಮಾಜಿ ಸಚಿವ ಚಲುವರಾಯಸ್ವಾಮಿ ಆರೋಪ

ನಾಗಮಂಗಲ, ಡಿ.3– ತಾಲೂಕಿನಲ್ಲಿ ಕಳೆದ ನಾಲ್ಕೂವರೆ ವರ್ಷದಿಂದ ಯಾವುದೇ ಜನಪರ ಕೆಲಸಗಳು ಆಗಿಲ್ಲ. ರಸ್ತೆಗಳು ಗುಂಡಿ ಬಿದ್ದಿವೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇನ್ನೂ ಪ್ರಾರಂಭವಾಗಿಲ್ಲ. 138 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡಿಲ್ಲ ಎಂದು ಮಾಜಿ ಶಾಸಕ ಎನ್.ಚಲುವರಾಯಸ್ವಾಮಿ ಆರೋಪಿಸಿದರು.



ತಾಲೂಕಿನ ದೊಡ್ಡಬಾಲ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ಯಾರದ್ದೋ ಅಭಿಮಾನಕ್ಕೆ ಮಣಿದು ನನ್ನನ್ನು ಸೋಲಿಸಿದಿರಿ. ಗೆದ್ದವರಿಂದ ಕ್ಷೇತ್ರಕ್ಕೆ ಏನಾದರೂ ಪ್ರಯೋಜನವಾಯ್ತೆ? ಹೊನ್ನಾವರಕ್ಕೆ ಹೋಗುವ ರಸ್ತೆ ದುರಸ್ತಿಯಾಗಿಲ್ಲ. ಬಿಂಡಿಗನವಿಲೆಯಿಂದ ಗೊಂಡೇನಹಳ್ಳಿ ಮಾರ್ಗವಾಗಿ ಬೆಳ್ಳೂರಿಗೆ ಹೋಗುವ ರಸ್ತೆ ಕಿತ್ತು ಹೋಗಿದೆ. ಪಿ.ನೇರಳಕೆರೆಯಿಂದ ಗೋವಿಂದಘಟ್ಟಕ್ಕೆ ಹೋಗುವ ರಸ್ತೆ ಹಾಳಾಗಿದೆ. ಪಾಲಗ್ರಾಹರ–ಹರದನಹಳ್ಳಿ ರಸ್ತೆ ಹದಗೆಟ್ಟಿದೆ. ಮೈಲಾರಪಟ್ಟಣದ ರಸ್ತೆ ಸ್ಥಿತಿ ಚಿಂತಾಜನಕವಾಗಿದೆ. ಬಿಂಡೇನಹಳ್ಳಿಯಿಂದ ಭೀಮನಹಳ್ಳಿ ರಸ್ತೆ ಗುಂಡಿ ಬಿದ್ದಿದೆ. ತಾಲೂಕಿನ ಹಲವು ರಸ್ತೆಗಳು ಹದಗೆಟ್ಟಿದ್ದು, ಇದರಿಂದ ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಗಿದೆ. ನಾನು ಗೆದ್ದಿದ್ದರೆ ಈ ಅವ್ಯವಸ್ಥೆ ಇರುತ್ತಿತ್ತೆ? ಎಂದು ಪ್ರಶ್ನಿಸಿದರು. ನನ್ನನ್ನು ಗೆಲ್ಲಿಸಿ ತಾಲೂಕನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ 50 ವರ್ಷಕ್ಕಾಗುವಷ್ಟು ಅಭಿವೃದ್ಧಿ ಕೆಲಸ ಮಾಡಿ ತೋರಿಸುತ್ತೇನೆ ಎಂದರು.

ಸುಳ್ಳು ಭರವಸೆ: ಕಳೆದ ಚುನಾವಣೆಯಲ್ಲಿ ನಾನು ಮುಖ್ಯಮಂತ್ರಿಯಾದರೆ ಸ್ತ್ರೀಶಕ್ತಿ ಸಂಘಗಳ ಎಲ್ಲಾ ರೀತಿಯ ಸಾಲ ಸಂಪೂರ್ಣ ಮನ್ನಾ ಮಾಡುತ್ತೇನೆಂದು ಭರವಸೆ ನೀಡಿದ್ದರು. ಅವರೇ ಮುಖ್ಯಮಂತ್ರಿಯಾಗಿದ್ದರೂ, ಸಾಲ ಮನ್ನಾ ಮಾಡಲು ಆಗಲಿಲ್ಲ. ಈಗ ಮತ್ತೆ ಅದೇ ರಾಗ ಮುಂದುವರಿಸಿ 123 ಸ್ಥಾನ ಗೆದ್ದರೇ... ಸ್ತ್ರೀಶಕ್ತಿ ಸಾಲ ಮನ್ನಾ, ದಲಿತರನ್ನು ಮತ್ತು ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. 123 ಸ್ಥಾನ ಗೆಲ್ಲಲು ಸಾಧ್ಯವಿಲ್ಲ ಎಂಬುದು ಅವರಿಗೂ ಗೊತ್ತಿದ್ದೆ ಈ ಭರವಸೆ ನೀಡುತ್ತಿದ್ದಾರೆ. ನಾವು ಎಷ್ಟೇ ಸ್ಥಾನಗಳಲ್ಲಿ ಗೆಲ್ಲಲಿ ಯಾವುದೇ ರೀತಿಯಲ್ಲಾದರೂ ಮುಖ್ಯಮಂತ್ರಿಯಾಗಲಿ, ಕಾಂಗ್ರೆಸ್ ಅಥವಾ ಬಿಜೆಪಿಯೊಂದಿಗೆ ಸೇರಿಕೊಂಡು ಸರ್ಕಾರ ಮಾಡಿದರೂ ಸರಿ ದಲಿತರು ಅಥವಾ ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡುತ್ತೇನೆ ಎಂದು ಹೇಳಲಿ ನೋಡೋಣ ಎಂದು ಸವಾಲು ಹಾಕಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಮಾಜಿ ಅಧ್ಯಕ್ಷರಾದ ಎಚ್.ಟಿ.ಕೃಷ್ಣೇಗೌಡ, ಎಂ.ಪ್ರಸನ್ನ, ಮುಖಂಡರಾದ ಸುನಿಲ್ ಲಕ್ಷ್ಮೀಕಾಂತ್, ಆರ್.ಕೃಷ್ಣೇಗೌಡ, ಎಸ್.ಬಿ.ರಮೇಶ್, ಗ್ರಾಪಂ ಸದಸ್ಯ ಕುಮಾರ್, ಜಗದೀಶ್, ರಾಜು, ಸಂಪತ್ ಇತರರಿದ್ದರು.

ಎಲ್ಲಾ ವೃತ್ತಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಠ: ಬಿಇಓ

ಕೆ.ಆರ್.ಪೇಟೆ, ಡಿ.3– ಎಲ್ಲಾ ವೃತ್ತಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಠ. ಮಕ್ಕಳ ಭವಿಷ್ಯ ರೂಪಿಸುವ ಅಥವಾ ಬದಲಾಯಿಸುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಸೀತರಾಮು ಅಭಿಪ್ರಾಯಪಟ್ಟರು.



ತಾಲೂಕಿನ ಹಲಸನಹಳ್ಳಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಶಿಕ್ಷಕಿ ರಾಜಮ್ಮ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಇಂದಿಗೂ ನಾವು ಬಾಲ್ಯದಲ್ಲಿ ಅಕ್ಷರ ಕಲಿಸಿಕೊಟ್ಟ ಶಿಕ್ಷಕರನ್ನು ನೆನೆಯುತ್ತೇವೆ. ಮಕ್ಕಳು ಪೋಷಕರಿಗಿಂತ ಶಿಕ್ಷಕರನ್ನು ಹೆಚ್ಚಾಗಿ ಅವಲಂಬಿಸಿರುತ್ತಾರೆ. ಸ್ವಾಮಿ ವಿವೇಕಾನಂದ ಹೇಳಿರುವಂತೆ ಈಗಾಗಲೇ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರತರಲು ಶಿಕ್ಷಕರು ಶ್ರಮಿಸಿದರೆ ಮಕ್ಕಳು ಭವಿಷ್ಯದಲ್ಲಿ ಭಾರತದ ಭರವಸೆಯ ವ್ಯಕ್ತಿಯಾಗಿ ಹೊರ ಹೊಮ್ಮುವುದರಲ್ಲಿ ಸಂಶಯವಿಲ್ಲ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ತಾಲೂಕು ಅಧ್ಯಕ್ಷ ಪದ್ಮೇಶ್ ಮಾತನಾಡಿ, ರಾಜಮ್ಮ ಅವರು ಹಲಸನಹಳ್ಳಿ ಶಾಲೆಯಲ್ಲಿ ಕಳೆದ 20 ವರ್ಷಗಳಿಂದ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಅಪಾರ ಶಿಷ್ಯವೃಂದ ಸಂಪಾದಿಸಿದ್ದಾರೆ. ಇಡೀ ಗ್ರಾಮಸ್ಥರು ತಮ್ಮ ಸ್ವಂತ ದುಡ್ಡಿನಿಂದ ಚಿನ್ನದ ಉಂಗುರ ನೀಡಿ ಹೂಮಳೆಗೈದು ಬೀಳ್ಕೊಡುತ್ತಿರುವುದು ಅವರ ಕರ್ತವ್ಯ ನಿಷ್ಠೆಗೆ ಕನ್ನಡಿಯಂತಾಗಿದೆ. ಆದ್ದರಿಂದ ಅವರ ವಿಶ್ರಾಂತ ಜೀವನ ಸುಖಮಯವಾಗಿರಲೆಂದು ಶುಭ ಕೋರಿದರು.

ಈ ವೇಳೆ ಎಪಿಎಂಸಿ ಮಾಜಿ ನಿರ್ದೇಶಕರಾದ ಸೋಮಸುಂದರ್, ಬಿ.ಆರ್.ಸಿ.ಲಿಂಗರಾಜು, ಇಸಿಓ ಕೃಷ್ಣ ನಾಯಕ್, ಕರಾಸನೌ ಸಂಘದ ಪ್ರಕಾರ್ಯದರ್ಶಿ ಪಿ.ಜೆ.ಕುಮಾರ್, ಗೌರವ ಉಪಾಧ್ಯಕ್ಷ ಆನಂದ್ ಕುಮಾರ್, ಕಸಾಪ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ನಿಕಟಪೂರ್ವ ಅಧ್ಯಕ್ಷ ಧರ್ಮಪ್ಪ ಪದಾಧಿಕಾರಿಗಳಾದ ಲಕ್ಷ್ಮಣ್‌ಗೌಡ, ಮಂಜು, ರಾಮಕೃಷ್ಣ ಗೌಡ, ಇಂದ್ರಾಣಿ, ಸಂಧ್ಯಾ ರಾಣಿ, ವಾಣಿ, ಪವಿತ್ರ, ಶಿಕ್ಷಣ ಇಲಾಖಾ ಪತ್ತಿನ ಸಹಕಾರ ಸಂಘದ ನಿಕಟಪೂರ್ವ ಅಧ್ಯಕ್ಷ ದೊರೆಸ್ವಾಮಿ, ಗೌರವಾಧ್ಯಕ್ಷ ಜೆ.ಬಿ.ನಾಗರಾಜು, ಎಸ್ಸಿ–ಎಸ್ಟಿ ತಾಲೂಕು ಅಧ್ಯಕ್ಷ ಹೆಚ್.ಆರ್.ಯೋಗೇಶ್, ಗುರುರಂಗ, ಅಣ್ಣಯ್ಯ, ಸೇರಿದಂತೆ ಇತರರಿದ್ದರು.

ಗ್ರಾಮೀಣ ಕುಡಿಯುವ ನೀರು ಯೋಜನೆ ಕಾಮಗಾರಿಗೆ ವರ್ಕ್ ಆರ್ಡರ್ ನೀಡದ ಅಧಿಕಾರಿಗಳು

ವರದಿ ನೀಡುವಂತೆ ಜಿಪಂ ಸಿಇಓಗೆ ಮೈಸೂರು ಜಿಲ್ಲಾ ಅಭಿವೃದ್ಧಿ ಕಾರ್ಯದರ್ಶಿ ಸೂಚನೆ

- 450 ಕಾಮಗಾರಿಗೆ ಟೆಂಡರ್ ಕರೆದರೂ 100ಕ್ಕೆ ವರ್ಕ್ ಆರ್ಡರ್ ನೀಡಿಲ್ಲ
- ಇನ್ನೋವೇಟಿವ್ ರಸ್ತೆಗೆ ಜಿಪಂ ಅನುಮತಿ ಇಲ್ಲದೆ ಆದೇಶ; ಇಂಜಿನಿಯರ್‌ಗೆ ನೋಟಿಸ್
- ಅಂಗನವಾಡಿಯಲ್ಲಿ ಸುಳ್ಳು ಲೆಕ್ಕ ತೋರಿಸಿ ದುರುಪಯೋಗ; ಪರಿಶೀಲನೆಗೆ ಸೂಚನೆ

ಮೈಸೂರು, ಡಿ.3(ಎಂಟಿವೈ)–ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದರೂ ವರ್ಕ್ ಆರ್ಡರ್ ನೀಡದೇ ಇರುವ ಅಧಿಕಾರಿಗಳ ವರ್ತನೆ ಅನುಮಾನ ಮೂಡಿಸುತ್ತಿದೆ. ಈ ಸಂಬಂಧ ಪ್ರತಿಯೊಂದು ಕಡತ ಪರಿಶೀಲಿಸಿ ವರದಿ ನೀಡುವಂತೆ ಜಿಪಂ ಸಿಇಓ ಪೂರ್ಣಿಮಾ ಅವರಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳೂ ಆದ ಜಿ.ಪಂ ಆಡಳಿತಾಧಿಕಾರಿ ಎನ್.ಜಯರಾಂ ಸೂಚನೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಷರತ್ತಿನೊಂದಿಗೆ ಟೆಂಡರ್ ಕರೆದಿದ್ದರೂ, ಒಂದು ತಿಂಗಳಾದರೂ ವರ್ಕ್ ಆರ್ಡರ್ ನೀಡದಿರುವುದು ಅಧಿಕಾರಿಗಳ ವರ್ತನೆ ಸಂಶಯ ಮೂಡಿಸುತ್ತಿದೆ. ಈ ವರ್ತನೆ ದುರುದ್ದೇಶದಿಂದ ಕೂಡಿದೆ ಎನ್ನಿಸುತ್ತದೆ. ಯಾವ ಲೆವೆಲ್‌ನಲ್ಲಿ ದುರುದ್ದೇಶವಿದೆ ಎಂದು ಮೇಲ್ನೋಟಕ್ಕೆ ಅರ್ಥವಾಗುತ್ತದೆ. ವಿಳಂಬವಾಗುತ್ತಿರುವ 100 ಕಾಮಗಾರಿಗಳ ಕಡತವನ್ನು ಪರಿಶೀಲಿಸಿ, ವರ್ಕ್ ಆರ್ಡರ್ ನೀಡಲು ವಿಳಂಬಕ್ಕೆ ಕಾರಣವೇನು ಎಂದು ವರದಿ ನೀಡುವಂತೆ ಜಿ.ಪಂ ಸಿಇಓಗೆ ಸೂಚಿಸಿದರು.

ಇದಕ್ಕೂ ಮುನ್ನ ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಮೈಸೂರು ಹಾಗೂ ಹುಣಸೂರು ವಿಭಾಗದಿಂದ 450 ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದು, 100 ಕಾಮಗಾರಿಗಳಿಗೆ ವರ್ಕ್ ಆರ್ಡರ್ ಕೊಟ್ಟಿಲ್ಲ. 80 ಕಾಮಗಾರಿಗಳು ಮುಗಿದಿದ್ದು, ಉಳಿದವು ಪ್ರಗತಿಯಲ್ಲಿವೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾಹಿತಿ ನೀಡಿದರು. ಇದಕ್ಕೆ ಅಸಮಾದಾನಗೊಂಡ ಎನ್.ಜಯರಾಂ, ವರ್ಕ್ ಆರ್ಡರ್ ಕೊಡಲು ವಿಳಂಬ ಮಾಡಿರುವುದು ಏತಕ್ಕೆ? ಉದ್ದೇಶಪೂರ್ವಕವಾಗಿ ವಿಳಂಬವಲ್ಲ. ದುರುದ್ದೇಶಪೂರ್ವಕ ಅನ್ನಿಸುತ್ತಿದೆ. ಕೂಡಲೇ ವಿಳಂಬಕ್ಕೆ ವಿವರಣೆ ಕೊಡುವಂತೆ ಷೋಕಾಸ್ ನೀಡಬೇಕು. ಜಿಪಂನಿಂದ ಅಧಿಕಾರಿಗಳ ಒಂದು ತಂಡವನ್ನು ಕರೆದೊಯ್ದು ಪ್ರತಿ ಕಡತವನ್ನು ಪರಿಶೀಲಿಸಿ ವರದಿ ಕೊಡುವಂತೆ ಸೂಚಿಸಿದರು.

ನೋಟಿಸ್ ಜಾರಿ: ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ ಕಾಮಗಾರಿಗಳಲ್ಲಿ ಪ್ರತಿ ತಾಲೂಕಿನಲ್ಲಿ ಒಂದೊಂದು ರಸ್ತೆಯನ್ನು ಇನ್ನೋವೇಟಿವ್ ರಸ್ತೆಯನ್ನಾಗಿ ಮಾಡಲು ಜಿಪಂನ ಅನುಮತಿ ಇಲ್ಲದೆ ಆದೇಶ ನೀಡಿರುವ ಕುರಿತು ವಿವರಣೆ ಕೇಳಿ ಮುಖ್ಯ ಇಂಜಿನಿಯರ್‌ಗೆ ನೋಟಿಸ್ ಜಾರಿಗೊಳಿಸುವಂತೆ ಹೇಳಿದರು. ಪಿಆರ್‌ಇಡಿ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಿ, ಜನವರಿ ಮೊದಲ ವಾರದೊಳಗೆ ಬಿಲ್ ಪಾವತಿಸಬೇಕು. ಕಾಮಗಾರಿ ಮುಗಿದ ಒಂದು ವಾರದೊಳಗೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಬೇಕು. ಸಣ್ಣ ಸಣ್ಣ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸಬಾರದು. ಈ ಕಾಮಗಾರಿಗಳ ವಿಚಾರದಲ್ಲಿ ಖಾಸಗಿ ಸಂಸ್ಥೆಯೊಂದು ತನ್ನ ಟೆಕ್ನಾಲಜಿಯನ್ನು ಪ್ರಯೋಗಿಸಲು ಸರ್ಕಾರವನ್ನು ಬಳಸಿಕೊಂಡಿದೆ. ಈ ಸಂಸ್ಥೆಗೆ ಜವಾಬ್ದಾರಿ ಕೊಟ್ಟ ಮೇಲೆ ಇಲ್ಲಿಯ ತನಕ ಮುಗಿಸಬೇಕಿತ್ತು. ಒಂದು ವಾರದೊಳಗೆ ಮುಗಿಸದಿದ್ದಲ್ಲಿ ಟೆಂಡರ್ ರದ್ದುಪಡಿಸಿ ಮರು ಟೆಂಡರ್ ಕರೆಯುವಂತೆ ಸಲಹೆ ನೀಡಿದರು. ತಿ.ನರಸೀಪುರ ಹಾಗೂ ನಂಜನಗೂಡು ತಾಲ್ಲೂಕಿನ ವಿವಿಧೆಡೆ ಗುತ್ತಿಗೆದಾರನೊಬ್ಬ 150 ಕಾಮಗಾರಿಗಳ ಟೆಂಡರ್ ಪಡೆದಿರುವುದರಿಂದ ಕಾಮಗಾರಿ ನಿಗದಿತ ಸಮಯದೊಳಗೆ ಮುಗಿಸಲು ಸಾಧ್ಯವಾಗುತ್ತಿಲ್ಲ. ಈಗ ಅಧಿಕಾರಿಗಳಿಗೆ ಪ್ರತಿನಿತ್ಯ ಫಾಲೋ ಅಪ್ ಮಾಡಿ ಕಾಮಗಾರಿ ವೇಗಗೊಳಿಸಿದ್ದಾರೆ. ಪೈಪ್‌ಲೈನ್ ಕಾಮಗಾರಿ ಮುಗಿದಿದ್ದು, ತಿಂಗಳ ಅಂತ್ಯಕ್ಕೆ ಮುಗಿಯಲಿದೆ ಎಂದು ಮೈಸೂರು–ಹುಣಸೂರು ವಿಭಾಗದ ಕಾರ್ಯಪಾಲಕ ಅಭಿಯಂತರರು ಆಡಳಿತಾಧಿಕಾರಿಗಳ ಗಮನಕ್ಕೆ ತಂದರು.



ಓವರ್‌ಹೆಡ್ ಟ್ಯಾಂಕ್ ಬೇಡ: ಸರ್ಕಾರಿ ಬಡಾವಣೆಗಳು, ಹಳ್ಳಿಗಳಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಬೇಕು. ಆದರೆ ಖಾಸಗಿ ಸಂಸ್ಥೆಗಳು ನಿರ್ಮಿಸಿರುವ ಬಡಾವಣೆಯಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡಬಾರದು. ಒಂದು ವೇಳೆ ಖಾಸಗಿ ಡೆವಲಪರ್ಸ್‌ಗಳು ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಟ್ಯಾಂಕ್ ನಿರ್ಮಾಣಕ್ಕೆ ಉದ್ದೇಶಿಸಿದ್ದರೆ, ಅದನ್ನು ಕೈಬಿಡಬೇಕು. ಖಾಸಗಿ ಬಡಾವಣೆಗಳನ್ನು ನಿರ್ಮಿಸುವಾಗ ಮುಂದಿನ ಜನಸಂಖ್ಯೆಗೆ ಅನುಗುಣವಾಗಿ ನೀರು ಒದಗಿಸುವುದಕ್ಕೆ ಬೇಕಾದ ಕ್ರಮ ಕೈಗೊಳ್ಳಬೇಕು. ಸರ್ಕಾರದ ಹಣದಿಂದ ಪೈಪ್‌ಲೈನ್, ಓವರ್‌ಹೆಡ್ ಟ್ಯಾಂಕ್ ನಿರ್ಮಿಸುವ ಬದಲಿಗೆ ಅಗತ್ಯವುಳ್ಳ ಪ್ರದೇಶ ಗುರುತಿಸಿ ಅನುದಾನ ಬಳಕೆ ಮಾಡುವಂತೆ ಸಲಹೆ ನೀಡಿದರು.

ಅಂಗನವಾಡಿ ಕೇಂದ್ರದಲ್ಲಿ ಸುಳ್ಳುಲೆಕ್ಕ: ಅಂಗನವಾಡಿ ಕೇಂದ್ರಗಳಲ್ಲಿ ಸುಳ್ಳು ಹಾಜರಾತಿ ತೋರಿಸಿ ರೇಷನ್ ಪಡೆಯಲಾಗುತ್ತಿದೆ. ಪಡೆದ ಹೆಚ್ಚುವರಿ ರೇಷನ್, ವಿವಿಧ ಕಾಳುಗಳನ್ನು ಸಂತೆಪೇಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಹಾಜರಾತಿಯಲ್ಲಿ 35 ಮಕ್ಕಳು ಎಂದು ತೋರಿಸಿದರೆ, ನಿಜವಾಗಿ 8–10 ಮಕ್ಕಳು ಮಾತ್ರ ಹಾಜರಾಗುತ್ತಿದ್ದಾರೆ. ಅದನ್ನು ತಡೆಗಟ್ಟಲು ನೋಡಲ್ ಅಧಿಕಾರಿಗಳು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಹಾಜರಾತಿಯಲ್ಲಿ ಸುಳ್ಳುಲೆಕ್ಕ ಬರೆಯುವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.

ಅಂಗನವಾಡಿ ಕೇಂದ್ರಗಳಿಗೆ ಮೂಲಸೌಲಭ್ಯ ಕಲ್ಪಿಸಬೇಕು. ಬಡ ಕುಟುಂಬದ ಮಕ್ಕಳು ಮಾತ್ರ ಅಂಗನವಾಡಿ ಕೇಂದ್ರಗಳಿಗೆ ಬರುತ್ತಾರೆ. ಆರ್ಥಿಕವಾಗಿ ಸದೃಢವಾಗಿರುವವರು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳನ್ನು ಸೇರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅಂಗನವಾಡಿ ಹಾಗೂ ಸರ್ಕಾರಿ ಶಾಲೆಗಳಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ಸುಸಜ್ಜಿತ ಕಟ್ಟಡ ನಿರ್ಮಿಸಿ ಕೊಟ್ಟರೆ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ ಎಂದು ತಿಳಿಸಿದರು.

ತಾ.ಪಂಗಳಿಗೆ ನಿಯೋಜಿಸಿರುವ ಆಡಳಿತಾಧಿಕಾರಿಗಳು ವಾರದಲ್ಲಿ ಎರಡು ಬಾರಿಯಾದರೂ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಬೇಕು. ಸರ್ಕಾರದ ವಿವಿಧ ಯೋಜನೆಗಳ ಪ್ರಗತಿ ಹಾಗೂ ಸೌಲಭ್ಯಗಳು ಫಲಾನುಭವಿಗಳಿಗೆ ಪಾರದರ್ಶಕವಾಗಿ ದೊರೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ವಿವಿಧ ನಿಗಮ ಮಂಡಳಿಗಳ ಯೋಜನೆಗಳ ಅನುಷ್ಠಾನದ ಕಾಮಗಾರಿ ಪ್ರಗತಿ, ಗುಣಮಟ್ಟವನ್ನು ಪರಿಶೀಲಿಸಬೇಕು. ನೋಡಲ್ ಅಧಿಕಾರಿಗಳು ಫೀಲ್ಡ್ ವಿಸಿಟ್ ಮಾಡದಿದ್ದರೆ ವಿಳಂಬದೊಂದಿಗೆ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ವಿಷಾದಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಹಾಜರಾತಿ ಮಾಹಿತಿಯನ್ನು ಸುಳ್ಳು ಹೇಳಿ ಹೇಳಿ ಹೆಚ್ಚುವರಿ ರೇಷನ್ ತೆಗೆದುಕೊಳ್ಳುತ್ತಿರುವ ಸಂಶಯ ವ್ಯಕ್ತವಾಗಿದೆ. ಮೊಬೈಲ್ ಮೂಲಕ ಇ–ಹಾಜರಿ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಹಾಗಾಗಿ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ಅಂಗನವಾಡಿ ಕೇಂದ್ರಗಳಿಗೆ ತೆರಳಿ ಪರಿಶೀಲಿಸಬೇಕು. ಪರಿಶೀಲನೆ ವೇಳೆ ಹಾಜರಾತಿ ಭರ್ತಿ ಮಾಡದಿದ್ದರೆ ಹಾಗೂ ಹಾಜರಾತಿಗೆ ಅನುಗುಣವಾಗಿ ಮಕ್ಕಳು ಇಲ್ಲದಿದ್ದರೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮುಡ ವ್ಯಾಪ್ತಿಯಲ್ಲಿ ಲೇಔಟ್ ನಿರ್ಮಾಣ ಮಾಡುವ ಸಂದರ್ಭದಲ್ಲಿ ಲೇಔಟ್ ನಿರ್ಮಿಸುವ ಡೆವಲಪರ್‌ಗಳು ಅಲ್ಲಿನ ರಸ್ತೆ, ನೀರು, ವಿದ್ಯುತ್ ಸೌಲಭ್ಯವನ್ನು ಕಲ್ಪಿಸಬೇಕು. ಅಂಗನವಾಡಿಗಳು ಶಾಲೆಗಳು ಹಾಸ್ಟೆಲ್‌ಗಳ ಬಳಿ ವಿದ್ಯುತ್ ತಂತಿಗಳು ಹೋಗಿದ್ದರೆ ಪರಿಶೀಲಿಸಿ ಬೇರೆಡೆಗೆ ಸ್ಥಳಾಂತರಿಸುವಂತೆ ಚೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಜಿ.ಪಂ ಸಿಇಓ ಬಿ.ಆರ್.ಪೂರ್ಣಿಮಾ ಮಾತನಾಡಿ, ಗುತ್ತಿಗೆದಾರರ ಬಿಲ್ ಪಾವತಿಗೆ ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ ಜಿ.ಪಂ ಡಿಪಿಎಂ ಅವರನ್ನು ಸಂಪರ್ಕಿಸಿ ತಾಂತ್ರಿಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಟೆಂಡರ್ ಕರೆದಿರುವ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜನರೊಂದಿಗಿದ್ದು ಅಭಿವೃದ್ಧಿ ರಾಜಕಾರಣ ಮಾಡುವ ನನಗೆ ಯಾವ ರೌಡಿಗಳ ಅವಶ್ಯಕತೆ ಇಲ್ಲ

- ಕಾಂಗ್ರೆಸ್‌ನ ಟೀಕಾಕಾರರಿಗೆ ಸಂಸದ ಪ್ರತಾಪ್ ಸಿಂಹ ಖಡಕ್ ಜವಾಬು
- ಬೆತ್ತನಗೆರೆ ಶಂಕರ ಬಿಜೆಪಿ ಸೇರ್ಪಡೆ ವಿಚಾರದಲ್ಲಿ ಕಾಂಗ್ರೆಸ್ ಏಟಿಗೆ ಎದಿರೇಟು



ಮೈಸೂರು, ಡಿ.3(ಎಸ್‌ಬಿಡಿ)– ಜನರೊಂದಿಗಿದ್ದು ಅಭಿವೃದ್ಧಿ ರಾಜಕಾರಣ ಮಾಡುವ ನನಗೆ ಯಾವ ರೌಡಿಗಳ ಅವಶ್ಯಕತೆ ಇಲ್ಲ. ಪಕ್ಷ ಸೇರ್ಪಡೆಯಾದವರಲ್ಲಿ ಬೆತ್ತನಗೆರೆ ಶಂಕರ ಇದ್ದದ್ದು ನನಗೆ ತಿಳಿದಿರಲಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ.

ಸೈಲೆಂಟ್ ಸುನೀಲ್ ಬಿಜೆಪಿ ಸೇರಲಿದ್ದಾನೆಂಬ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ವಾಗ್ಯುದ್ಧ ನಡೆಯುತ್ತಿರುವುದರ ನಡುವೆ ಮೈಸೂರಿನಲ್ಲೂ ರೌಡಿ ಬೆತ್ತನಗೆರೆ ಶಂಕರನನ್ನು ಸಂಸದ ಪ್ರತಾಪ್ ಸಿಂಹ ಪಕ್ಷಕ್ಕೆ ಬರಮಾಡಿಕೊಂಡಿದ್ದಾರೆ ಎಂದು ಮಾಧ್ಯಮಗಳಲ್ಲಿ ಬಿತ್ತರವಾದ ಹಿನ್ನೆಲೆಯಲ್ಲಿ ಪ್ರತಾಪ್ ಸಿಂಹ ಶನಿವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಕೆಲ ತಿಂಗಳ ಹಿಂದೆ ಹೆಚ್.ಡಿ.ಕೋಟೆಯ ಮುಖಂಡರು ಬಿಜೆಪಿ ಸೇರ್ಪಡೆಯಾಗುತ್ತಿದ್ದು, ತಾವೂ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಪಕ್ಷದ ಮುಖಂಡರಾದ ಅಪ್ಪಣ್ಣನವರು ಆಹ್ವಾನಿಸಿದ್ದರು. ಅದರಂತೆ ಮೈಸೂರಿನ ಬಿಜೆಪಿ ಕಚೇರಿಯಲ್ಲಾದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪಕ್ಷ ಸೇರ್ಪಡೆಯಾದವರಿಗೆ ಶಾಲು ಹೊದಿಸಿ ಹೊರಬಂದೆ. ಆದರೆ ಅದ್ಯಾರೋ ಬೆತ್ತನಗೆರೆ ಶಂಕರನಿಗೆ ಶಾಲು ಹಾಕಿ ಪ್ರತಾಪ್ ಸಿಂಹ ಪಕ್ಷಕ್ಕೆ ಬರಮಾಡಿಕೊಂಡಿದ್ದಾರೆ ಎಂದು ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತಿದೆ. ನಂತರ ಬೆತ್ತನಗೆರೆ ಶಂಕರ, ನಲ್ಲೂರು ಶಂಕರೇಗೌಡ ಎಂದು ಹೆಸರು ನೀಡಿದ್ದಾರಾ? ಎಂದು ಪಕ್ಷದವರನ್ನು ಕೇಳಿದಾಗ, ಹೌದು ನಮಗೂ ಗೊತ್ತಿರಲಿಲ್ಲ ಎಂದು ತಿಳಿಸಿದ್ದಾಗಿ ಹೇಳಿದರು.

ನೂರಾರು, ಸಾವಿರಾರು ಜನ ಪಕ್ಷ ಸೇರ್ಪಡೆಯಾಗುತ್ತಾರೆ. ಆ ಸಂದರ್ಭದಲ್ಲಿ ಎಲ್ಲರ ಜಾತಕ, ಕುಂಡಲಿ ನೋಡಿಕೊಂಡು ಅವರು ಹಿಂದೆ ಏನಾಗಿದ್ದರು, ಪೂರ್ವ ಜನ್ಮದಲ್ಲಿ ಏನಾಗಿದ್ದರು, ಈಗ ಏನು ಮಾಡುತ್ತಿದ್ದಾರೆ, ಮುಂದೆ ಏನು ಮಾಡುತ್ತಾರೆ ಎಂದು ತಿಳಿದುಕೊಳ್ಳಲು ಸಾಧ್ಯವಿಲ್ಲ. ಹೀಗೆ ಸ್ಕೂಟನಿ(ಪರಿಶೀಲನೆ) ಮಾಡಲು ಅದೇನು ಉದ್ಯೋಗ ನೇಮಕಾತಿ ಪ್ರಕ್ರಿಯೆಯಲ್ಲ. ಪಕ್ಷಕ್ಕೆ ಸೇರಿದವರನ್ನು ನಾನು ಸ್ವಾಗತಿಸಿದ್ದೇನೆಯೇ ಹೊರತು ಅವರೆಲ್ಲರ ಪೂರ್ವಾಪರ ವಿಚಾರಿಸಲು ಸಾಧ್ಯವಿಲ್ಲ. ಇದನ್ನೇ ಬಳಸಿಕೊಂಡು ನಾನೇ ಹೋಗಿ ರೌಡಿಶೀಟರ್‌ನನ್ನು ಬರಮಾಡಿಕೊಂಡಿದ್ದೇನೆ ಎಂದು ಅನಗತ್ಯವಾಗಿ ಬಿಂಬಿಸುವ ಅಗತ್ಯವಿಲ್ಲ. ರೌಡಿಗಳನ್ನು ಜೊತೆಯಲ್ಲಿಟ್ಟುಕೊಂಡು ರಾಜಕೀಯ ಮಾಡುವ ಕಾಲ ಯಾವಾಗಲೋ ಹೋಯಿತು. ಆಯಿಲ್ ಕುಮಾರ್, ಕೊತ್ವಾಲ್ ರಾಮಚಂದ್ರ, ಜಯರಾಜ್ ಅವರನ್ನು ಇಟ್ಟುಕೊಂಡು ರಾಜಕಾರಣ ಮಾಡಿದ್ದು ಯಾರು? ಎಂದು ಕರ್ನಾಟಕದ ಜನತೆಗೆ ಗೊತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೆಚ್.ಡಿ.ಕೋಟೆ ನಮ್ಮ ಲೋಕಸಭಾ ಕ್ಷೇತ್ರ ವ್ಯಾಪ್ತಿಗೂ ಬರುವುದಿಲ್ಲ. ಆದರೂ ಪಕ್ಷದ ನಾಯಕರು ಆಹ್ವಾನಿಸಿದರೆಂಬ ಕಾರಣಕ್ಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪಕ್ಷ ಸೇರಿದವರಿಗೆ ಶಾಲು ಹಾಕಿದ್ದೇನೆ. ಮೈಸೂರಿನಲ್ಲಿ ಕಳೆದ 9 ವರ್ಷದಿಂದ ರಾಜಕಾರಣ ಮಾಡುತ್ತಿದ್ದೇನೆ. ನನ್ನದು ಅಭಿವೃದ್ಧಿ ರಾಜಕಾರಣ ಅಷ್ಟೇ. ನನಗೆ ಯಾವ ರೌಡಿಗಳೂ ಬೇಕಾಗಿಲ್ಲ. ಯಾವ ರಿಯಲ್ ಎಸ್ಟೇಟ್ ಕೂಡ ಅಗತ್ಯವಿಲ್ಲ. ರಿಯಲ್ ಎಸ್ಟೇಟ್ ಮೂಲಕ ಹಣ ಮಾಡಿದವರನ್ನೂ ಬಗ್ಗಿಸಿ ಕೆಲಸ ಮಾಡಿಸುತ್ತಿದ್ದೇನೆ. ರೌಡಿಶೀಟರ್, ರೌಡಿಗಳು, ಜನರನ್ನು ಭಯಬೀತಿಗೊಳಿಸುವವರ ಅಗತ್ಯವಂತೂ ನನಗಿಲ್ಲ. ಕಾಂಗ್ರೆಸ್‌ನವರಿಗೆ ಇರಬಹುದು ಅದು ನನಗೆ ಗೊತ್ತಿಲ್ಲ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗಲೇ ನಾನು ಗೆದ್ದು ಬಂದಿದ್ದೇನೆ. ಆಗ ನನ್ನೊಂದಿಗಿದ್ದಿದ್ದ ಜನ ಅವರೊಂದಿಗಿದ್ದು ರಾಜಕಾರಣ ಮಾಡುವವನು ನಾನು. ಕೊತ್ವಾಲ್ ರಾಮಚಂದ್ರ, ಜಯರಾಜ್, ಬೆಕ್ಕಿನ ಕಣ್ಣಿನ ರಾಜೇಂದ್ರನಂತಹವರನ್ನು ಇಟ್ಟುಕೊಂಡು ಪಾಲಿಟಿಕ್ಸ್ ಮಾಡಿದವರು ನಮಗೇನು ಪಾಠ ಹೇಳಿಕೊಡುವ ಅಗತ್ಯವಿಲ್ಲ ಎಂದು ಟೀಕಾಕಾರರಿಗೆ ತಿರುಗೇಟು ನೀಡಿದರು.

ಕಾಶ್ಮೀರದಲ್ಲೇ ಪ್ರತ್ಯೇಕತಾ ವಾದಿಗಳ ಬಾಯಿ ಮುಚ್ಚಿಸಿದ್ದೇವೆ. ದೇಶದ ಎಲ್ಲಾ ಭಾಗಗಳಲ್ಲಿ ನಡೆಯುತ್ತಿದ್ದ ಭಯೋತ್ಪಾದನಾ ಚಟುವಟಿಕೆಗಳನ್ನು ಹತ್ತಿಕ್ಕಿದ್ದೇವೆ. ಇದೆಲ್ಲವೂ ಬಿಜೆಪಿ ಪಕ್ಷ, ದಿಟ್ಟ ನಾಯಕತ್ವ ಹಾಗೂ ಪ್ರಧಾನಿ ಮೋದಿಜೀ ಅವರಿಂದ ಸಾಧ್ಯವಾಗಿದೆ. ಪ್ರತ್ಯೇಕತಾವಾದಿಗಳು, ಭಯೋತ್ಪಾದಕರನ್ನೇ ಬಿಟ್ಟಿಲ್ಲ, ಇನ್ನು ನಮ್ಮನ್ನು ಬಿಡುತ್ತಾರಾ ಎಂಬ ಭಯದಿಂದ ರೌಡಿಗಳೂ ಮನಃಪರಿವರ್ತನೆ ಮಾಡಿಕೊಂಡು ಸಮಾಜ ಸೇವೆಗೆ ಬರುತ್ತಿದ್ದಾರೆ. ಬಿಜೆಪಿ ಗಟ್ಟಿಯಾದ ನಾಯಕತ್ವ, ಸಮಾಜಘಾತುಕ ಶಕ್ತಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ್ದರಿಂದ ಅವರ ಮನಃಪರಿವರ್ತನೆ ಆಗುತ್ತಿರುವುದನ್ನು ಕಾಂಗ್ರೆಸ್‌ನವರು ತಿಳಿದುಕೊಳ್ಳಬೇಕು. ಯಾವ ರೌಡಿಶೀಟರ್, ರೌಡಿಗಳು, ಪುಂಡರು ನಮಗೇನು ಬೇಕಾಗಿಲ್ಲ. ಎಲ್ಲವನ್ನೂ ಎದುರಿಸುವ ಸಾಮರ್ಥ್ಯ ನನಗಿದೆ ಎಂದು ಹೇಳಿದರು.

ಪಿಎಚ್.ಡಿ ಪದವೀಧರರು



ಮೈಸೂರು:ಡಾ. ಕೆ.ಟಿ.ಸುನೀತಾ ಅವರ ಮಾರ್ಗದರ್ಶನದಲ್ಲಿ ಬಿ.ಪಿ. ಪವನ್ ಅವರು ಇಂಗ್ಲಿಷ್ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ

ವಾಸುದೇವರಾವ್ ಭಗರೆ



ಮೈಸೂರು, ಡಿ.3–ಮೈಸೂರಿನ ದೇವರಾಜ ಮೊಹಲ್ಲಾ ಬಿಡಾರಂ ಕೃಷ್ಣಪ್ಪ ರಸ್ತೆಯ ನಿವಾಸಿ ವಾಸುದೇವರಾವ್ ಭಗರೆ(66) ಅವರು ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಂಗಳೂರಲ್ಲಿ ವಿದ್ಯುತ್ ಗುತ್ತಿಗೆದಾರರ ಸಂಘದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ



ಮೈಸೂರು,ಡಿ.3(ಪಿಎಂ)– ಲಕ್ಷದಿಂದ 5 ಲಕ್ಷ ರೂ.ವರೆಗಿನ ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಸ್ಥಳೀಯ ಗುತ್ತಿಗೆದಾರರಿಗೆ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಡಿ.5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಅಹೋರಾತ್ರಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಎಂ.ಆರ್.ಧರ್ಮವೀರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಹೋರಾಟದ ಮೇರೆಗೆ ಸಣ್ಣ ಸಣ್ಣ ಕಾಮಗಾರಿಗಳನ್ನು ಕ್ರೋಢೀಕರಿಸಿ ಬೃಹತ್ ಟೆಂಡರ್ ಕರೆಯದಂತೆ ಸರ್ಕಾರ ಆದೇಶ ಹೊರಡಿಸಿದೆ. ಆದರೆ ಕಾರ್ಯಾಂಗ ಇದನ್ನು ಅನುಷ್ಠಾನಗೊಳಿಸುತ್ತಿಲ್ಲ. ಇದರ ಪರಿಣಾಮ ಸ್ಥಳೀಯ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು. ಸಂಘದ ಜಿಲ್ಲಾ ಉಪಾಧ್ಯಕ್ಷ ಹೆಚ್.ಜೆ.ರಾಘವೇಂದ್ರ, ಕಾರ್ಯದರ್ಶಿ ಬಿ.ಎಂ.ಗಿರೀಶ್‌ಕುಮಾರ್, ಸಹ ಕಾರ್ಯದರ್ಶಿ ಹೆಚ್.ಆರ್.ಕೃಷ್ಣಾಚಾರಿ, ಸಂಘಟನಾ ಕಾರ್ಯದರ್ಶಿ ವೆಂಕಟೇಶಮೂರ್ತಿ ಗೋಷ್ಠಿಯಲ್ಲಿದ್ದರು.

> ಬೆಳಕು ಯೋಜನೆಗೆ ಬೆಸ್ಕಾಂ ನೀಡುತ್ತಿರುವ ದರವನ್ನು ಎಲ್ಲಾ ಎಸ್ಕಾಂಗಳಿಗೂ (ವಿದ್ಯುತ್ ಸರಬರಾಜು ಕಂಪನಿ) ಜಾರಿಗೊಳಿಸಬೇಕು. ಈ ಯೋಜನೆಯಡಿ ಕಾಮಗಾರಿ ನಿರ್ವಹಿಸಿರುವ ಬಿಲ್‌ಗಳಿಗೆ ಶೀಘ್ರ ಹಣಕಾಸು ಒದಗಿಸಬೇಕು. ಅಲ್ಲದೆ, ರೈತರು ಮತ್ತು ಗ್ರಾಹಕರ ಅನುಕೂಲಕ್ಕಾಗಿಯೂ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿದ್ದೇವೆ. ರೈತರ ಕೃಷಿ ಪಂಪ್‌ಸೆಟ್‌ಗಳ ಸಂಬಂಧ ತತ್ಕಾಲ್ (ಶೀಘ್ರ ವಿದ್ಯುತ್) ಯೋಜನೆಗೆ ಕಳೆದ ಒಂದು ವರ್ಷದಲ್ಲಿ ಯಾವುದೇ ಅನುದಾನ ನೀಡಿಲ್ಲ. ಇದರಿಂದ ಲಕ್ಷಾಂತರ ರೈತರಿಗೆ ಅನಾನುಕೂಲವಾಗಿದ್ದು, ಕೂಡಲೇ ಅನುದಾನ ಬಿಡುಗಡೆಗೆ ಕ್ರಮ ವಹಿಸಬೇಕು.
> –ಎಂ.ಆರ್.ಧರ್ಮವೀರ

ಮೈಸೂರಿನಲ್ಲಿ ಪ್ರಥಮ ಐಷಾರಾಮಿ ಗೇಟೆಡ್ ಫ್ಲಾಟ್ ಸಮುದಾಯ

ಜಿ ಸ್ಕ್ವೇರ್ ಪಲೇಸಿಯಾ ಪ್ರಾರಂಭ

ಮೈಸೂರು,ಡಿ.3–ಮೈಸೂರು, ಕರ್ನಾಟಕದ ಸುಂದರ ನಗರಗಳಲ್ಲಿ ಒಂದು. ಇಲ್ಲಿನ ವಾಸ್ತುಶಿಲ್ಪದ ಪರಂಪರೆ ಮತ್ತು ಹಿತವಾದ ವಾತಾವರಣ ಎಲ್ಲರನ್ನು ಸೆಳೆಯುತ್ತದೆ. ಜೊತೆಗೆ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಕಾರಣ ಈ ನಗರ, ವಾಸಕ್ಕೆ ಅತ್ಯಂತ ಅನುಕೂಲಕರವಾಗಿದೆ.

ಮೈಸೂರು ಅರಮನೆಯು ತನ್ನ ವೈಭವ ಮತ್ತು ವಿಶೇಷ ವಿನ್ಯಾಸದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದುಕೊಂಡಿದೆ. ಇದು ಭವ್ಯತೆ ಮತ್ತು ಪರಂಪರೆಯ ವೈಭವದ ಹೆಗ್ಗುರುತಾಗಿದೆ. ಜಿ ಸ್ಕ್ವೇರ್ ಹೌಸಿಂಗ್, ದಕ್ಷಿಣ ಭಾರತದ ಅತೀ ದೊಡ್ಡದಾದ ರಿಯಲ್ ಎಸ್ಟೇಟ್ ಸಂಸ್ಥೆಯಾಗಿದ್ದು, ಮೈಸೂರಿನಲ್ಲಿ ಜಿ ಸ್ಕ್ವೇರ್, ಪ್ರತಿಷ್ಠಿತ ಪಲೇಸಿಯಾ ಯೋಜನೆಯನ್ನು ಪ್ರಾರಂಭಿಸಿದೆ.



ಇದು ಸಂಪೂರ್ಣವಾಗಿ ಹೊಸ ವಿನ್ಯಾಸದೊಂದಿಗೆ ಅಭಿವೃದ್ಧಿಪಡಿಸಿದ ರೆಸಿಡೆನ್ಷಿಯಲ್ ಪ್ಲಾಟ್ ಪ್ರಾಜೆಕ್ಟ್ ಆಗಿದೆ. ಇಂಪೀರಿಯಲ್ ಐಷಾರಾಮಿ ಥೀಮ್ ಕೊಡುಗೆಯಾಗಿ ಗೇಟೆಡ್ ಸಮುದಾಯ ಯೋಜನೆಯನ್ನು ಗ್ರಾಹಕರಿಗೆ ಪ್ರೀಮಿಯಂ ಜೀವನಶೈಲಿಯ ವೈಶಿಷ್ಟ್ಯತೆಗಳೊಂದಿಗೆ ಕಲ್ಪಿಸುತ್ತಿದೆ.

ಮೈಸೂರಿನಲ್ಲಿ ಜಿ ಸ್ಕ್ವೇರ್ ಪಲೇಶಿಯಾ ಪ್ರಥಮ ಲಕ್ಸುರಿ–ಥೀಮ್ಡ್ ಗೇಟೆಡ್ ಪ್ಲಾಟ್ ಸಮುದಾಯ ಯೋಜನೆಯಾಗಿದ್ದು, ಅರಮನೆ ನಗರಿಯ ಗ್ರಾಹಕರಿಗೆ ಅತೀವ ಸ್ಫೂರ್ತಿ ಒದಗಿಸಲಿದೆ. ಅಲ್ಲದೆ, ಜಿ ಸ್ಕ್ವೇರ್ ಪಲೇಶಿಯಾ, ಸಮುದಾಯದಲ್ಲಿ ಐಷಾರಾಮಿ ಆಧಾರಿತ ಜೀವನ ಶೈಲಿಯ ಸೌಕರ್ಯಗಳು, ಕ್ಲಬ್ ಹೌಸ್ ಮತ್ತು ವಿಶಾಲವಾದ ಓಪನ್ ಸ್ಪೇಸ್ ರೇಷಿಯೋ (ಓಎಸ್‌ಆರ್)ನೊಂದಿಗೆ ಪ್ರೀಮಿಯಂ ಕೊಡುಗೆಗಳನ್ನು ನೀಡಲಾಗುತ್ತಿದೆ.

ಈ ಯೋಜನೆಯು ಮಣಿಪಾಲ್ ಆಸ್ಪತ್ರೆಯಿಂದ ಕೇವಲ 2 ನಿಮಿಷ ಪ್ರಯಾಣದ ಅಂತರದಲ್ಲಿದ್ದು, ಬೆಂಗಳೂರು–ಮೈಸೂರು ಹೆದ್ದಾರಿ ಜಂಕ್ಷನ್‌ಗೆ ಸಮೀಪವಿರುವ ರಿಂಗ್ ರೋಡ್‌ನಲ್ಲಿದೆ. ಜಿ ಸ್ಕ್ವೇರ್ ಪಲೇಶಿಯಾ ಮೊದಲ ಹಂತವಾಗಿ ವಿಶಾಲವಾದ 10 ಎಕರೆ ಪ್ರದೇಶದಲ್ಲಿ 147 ಪ್ರೀಮಿಯಂ ಎಲ್ಲಾ ಪ್ಲಾಟ್ಸ್‌ಗಳನ್ನು ಹೊಂದಿದೆ. ಅಲ್ಲದೆ ವಿಶೇಷವಾಗಿ ಐಷಾರಾಮಿ ವೈಶಿಷ್ಟ್ಯಗಳೊಂದಿಗೆ 75ಕ್ಕೂ ಹೆಚ್ಚು (75+) ವಿಶ್ವದರ್ಜೆಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಐಷಾರಾಮಿ ವೈಶಿಷ್ಟ್ಯಗಳೊಂದಿಗೆ 10,000 ಚದರಡಿಯಲ್ಲಿ ಅದ್ದೂರಿಯಾಗಿ ಕ್ಲಬ್ ಹೌಸ್ ನಿರ್ಮಿಸಲಾಗಿದ್ದು, ನಿವಾಸಿಗಳು ಮತ್ತು ಸ್ನೇಹಿತರೊಂದಿಗೆ ಈ ಸಮುದಾಯದೊಳಗೆ ಸಂತಸದಾಯಕ ವಿಶ್ರಾಂತಿ ಪಡೆಯಲು ಸಹಾಯವಾಗುತ್ತದೆ. ಇದು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ಪ್ಲಾಟ್ ಆಗಿದ್ದು, ಇದರಲ್ಲಿ ಎಲ್ಲಾ ಮೂಲ ಸೌಕರ್ಯಗಳು, ಉತ್ತಮವಾದ ಬ್ಲ್ಯಾಕ್–ಟಾಪ್ ರಸ್ತೆಗಳು, ಸೋಲಾರ್ ಸ್ಟ್ರೀಟ್ ಲೈಟ್ಸ್, ವಿದ್ಯುತ್, ಒಳ ಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ಸೇರಿದಂತೆ ಸಕಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ಯೋಜನೆಯು ಉತ್ತಮ ಕೊಡುಗೆ ನೀಡುವುದಲ್ಲದೆ, ನಿರಾತಂಕ ಹೂಡಿಕೆಗೆ ಒಂದು ಉತ್ತಮ ಆಯ್ಕೆಯಾಗಿದೆ. ಮೈಸೂರಿನಲ್ಲಿ ಇದು ಪ್ರಪ್ರಥಮ ಯೋಜನೆಯಾಗಿದ್ದು, 5 ವರ್ಷಗಳು ಉಚಿತ ನಿರ್ವಹಣೆ ಸೌಲಭ್ಯ ಸಿಗಲಿದೆ. ಇದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದ ಪರಿಪೂರ್ಣ ಯೋಜನೆಯಾಗಿದೆ.

ಜಿ ಸ್ಕ್ವೇರ್ ಹೌಸಿಂಗ್ ಸಿಇಓ ಎನ್.ಈಶ್ವರ್ ಮಾತನಾಡಿ, "ಮೈಸೂರು, ಕರ್ನಾಟಕದ ಸಾಂಸ್ಕೃತಿಕ ಮತ್ತು ಪಾರಂಪರಿಕ ನಗರಗಳಲ್ಲಿ ಒಂದಾಗಿದ್ದು, ಅಭಿವೃದ್ಧಿಯತ್ತ ವೇಗದಿಂದ ಸಾಗುತ್ತಿರುವ ನಗರವಾಗಿದೆ. ಮೈಸೂರು ಅರಮನೆಯ ಸೌಂದರ್ಯದಿಂದ ಸ್ಫೂರ್ತಿಗೊಂಡು, ಜಿ ಸ್ಕ್ವೇರ್ ಯೋಜನೆಯ ತಜ್ಞರ ತಂಡ ಮೈಸೂರಿನಲ್ಲಿ 'ಜಿ ಸ್ಕ್ವೇರ್ ಪಲೇಶಿಯಾ' ಹೆಸರಿನಲ್ಲಿ ಈ ಯೋಜನೆ ರೂಪಿಸಿದೆ.

ಪ್ರೀಮಿಯಂ ಕೊಡುಗೆಗಳು, ಸಮುದಾಯದಲ್ಲಿ ಐಷಾರಾಮಿ ಆಧಾರಿತ ಜೀವನ ಶೈಲಿಯ ಸೌಕರ್ಯಗಳೊಂದಿಗೆ ಅತ್ಯುತ್ತಮವಾಗಿ ಆರಂಭಿಸಲಾಗಿದೆ. ನಮ್ಮ ಎಲ್ಲಾ ಗ್ರಾಹಕರಿಗೆ ಅವರ ವಸತಿ ಅಗತ್ಯಗಳನ್ನು ಮರು ಪರಿಶೀಲಿಸಲು ಸಹಾಯ ಮಾಡುವ ಮೂಲಕ ಅವರಿಗೆ ಸಂಭಾವ್ಯ ಸಲಹೆಯನ್ನು ನೀಡಲಾಗುವುದು. ನಾವು ಸಾವಿರಾರು ಗ್ರಾಹಕರನ್ನು ಹೊಂದಿದ್ದು, ಅವರು ಯಾವಾಗಲೂ ಎಲ್ಲದರಲ್ಲೂ ನಮ್ಮ ಉಪಕ್ರಮಗಳಿಗೆ ಸದಾ ಬೆಂಬಲಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಡಿ.5ರಿಂದ 19ರವರೆಗೆ ಶ್ರೀ ಹನುಮಜಯಂತಿ

ಮೈಸೂರು,ಡಿ.3–ಧಾರ್ಮಿಕದತ್ತಿ ಇಲಾಖೆ ವತಿಯಿಂದ ಡಿ.5ರಿಂದ 19ರವರೆಗೆ ಸಂಜೆ 5.30ರಿಂದ 9.30ರವರೆಗೆ ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ಹನುಮ ಜಯಂತಿ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಡಿ.13ರಂದು ಸಂಜೆ 6 ಗಂಟೆ ನಂತರ ಶ್ರೀ ಸೀತಾರಾಮರ ಕಲ್ಯಾಣ ಮಹೋತ್ಸವ ಜರುಗುವುದು. ಡಿ.16ರಂದು ಬೆಳಗ್ಗೆ 8 ಗಂಟೆ ನಂತರ ಶ್ರೀ ರಾಮದೇವರ ಪಟ್ಟಾಭಿಷೇಕ ಮಹೋತ್ಸವ, 17ರಂದು ಸಂಜೆ 4ಕ್ಕೆ ನಂತರ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉತ್ಸವವು ರಾಜಬೀದಿಯಲ್ಲಿ ನಾದಸ್ವರ ಹಾಗೂ ಭಾರತ್ ಬ್ಯಾಂಡ್‌ರೊಂದಿಗೆ ಭವ್ಯವಾಗಿ ಜರುಗುವುದು. 18ರಂದು 7 ಗಂಟೆ ನಂತರ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉಯ್ಯಾಲೋತ್ಸವವು ಹೂವಿನ ಮಂಟಪದಲ್ಲಿ ಜರುಗುವುದು. 19ರಂದು ಮೂಲದೇವರ ಸಹಿತ ಶ್ರೀ ಸಿದ್ಧ ರಾಮ ಲಕ್ಷ್ಮಣ ಹನುಮಂತ ದೇವರಿಗೆ ತೀರ್ಥಸ್ನಾನ, ಡೋಲೋತ್ಸವ ನಡೆಯಲಿದೆ.

ಡಿ.8ಕ್ಕೆ ಸಾರ್ವಜನಿಕ ಸಮಾಲೋಚನೆ ಸಭೆ

ಮೈಸೂರು,ಡಿ.3–ಹೂಟಗಳ್ಳಿ ನಗರಸಭಾ ಕಾರ್ಯಾಲಯ ವತಿಯಿಂದ 2023–24ನೇ ಸಾಲಿನ ಆಯವ್ಯಯ ತಯಾರಿಸುವ ಸಂಬಂಧ ಪೌರಾಯುಕ್ತರ ಅಧ್ಯಕ್ಷತೆಯಲ್ಲಿ ಡಿ.8ರಂದು ಸಂಜೆ 4ಕ್ಕೆ ನಗರಸಭೆ ಕಚೇರಿ ಆವರಣದಲ್ಲಿ 1ನೇ ಸುತ್ತಿನ ಸಾರ್ವಜನಿಕ ಸಮಾಲೋಚನೆ ಸಭೆ ಏರ್ಪಡಿಸಿದೆ. ಸಭೆಗೆ ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ನಾಗರಿಕರು ಆಗಮಿಸಿ 2023–24ನೇ ಸಾಲಿನ ಆಯವ್ಯಯ ತಯಾರಿಸುವ ಸಂಬಂಧ ಸಲಹೆಗಳನ್ನು ನೀಡಬಹುದು

ರಂಗಾಯಣ ನಿರ್ದೇಶಕರ ವಜಾಕ್ಕೆ ಆಗ್ರಹಿಸಿ ಪತ್ರ ಚಳವಳಿ



ಮೈಸೂರು, ಡಿ.3(ಪಿಎಂ)– ವಿವಾದಾತ್ಮಕ ಕಾರ್ಯಗಳ ಮೂಲಕ ಪ್ರಖ್ಯಾತಿಯಾಗಿರುವ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ವಜಾಗೊಳಿಸಿ ರಂಗಾಯಣ ನಿರ್ದೇಶಕ ಸ್ಥಾನಕ್ಕೆ ಸೂಕ್ತರನ್ನು ನೇಮಿಸುವಂತೆ ಒತ್ತಾಯಿಸಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ವತಿಯಿಂದ ಶನಿವಾರ ಪತ್ರ ಚಳವಳಿ ನಡೆಸಲಾಯಿತು.

ಮೈಸೂರು ಮಹಾನಗರ ಪಾಲಿಕೆ ಮುಖ್ಯದ್ವಾರದ ಬಳಿ ಇರುವ ಅಂಚೆ ಪೆಟ್ಟಿಗೆ ಮುಖ್ಯಮಂತ್ರಿಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಬರೆದಿರುವ ಪತ್ರಗಳನ್ನು ರವಾನಿಸಲಾಯಿತು. ಕೋಮುವಾದದ ಮನಸ್ಥಿತಿ ಹೊಂದಿರುವ ಅಡ್ಡಂಡ ಕಾರ್ಯಪ್ಪ ರಂಗಾಯಣಕ್ಕೆ ಕಳಂಕ ತಂದಿದ್ದಾರೆ. ಅವರು ಈವರೆಗೆ ಮಾಡಿರುವ ಎಲ್ಲಾ ಕಾರ್ಯಗಳು ಅಡ್ಡದಾರಿಯಲ್ಲೇ ಸಾಗಿವೆ. ಅವರು ಇತ್ತೀಚೆಗಷ್ಟೆ ರಚಿಸಿರುವ 'ಟಿಪ್ಪು ನಿಜ ಕನಸುಗಳು' ಕೃತಿಯಲ್ಲಿ ಟಿಪ್ಪು ಅವರನ್ನು ವಿರೂಪಗೊಳಿಸಿರುವುದು ಕಾರ್ಯಪ್ಪನವರ ವಿಕೃತ ಮನಸ್ಥಿತಿಯ ಪ್ರತೀಕವಾಗಿದೆ ಚಳವಳಿಗಾರರು ಎಂದು ಕಿಡಿಕಾರಿದರು.

ಮೊನ್ನೆ ಪತ್ರಿಕಾ ಪ್ರಕಟಣೆಯಲ್ಲಿ ಮುತ್ಸದ್ದಿ ಹಿರಿಯ ರಾಜಕರಣಿ ಅಡಗೂರು ಹೆಚ್.ವಿಶ್ವನಾಥ್ ಅವರ ಬಗ್ಗೆ ಕಾರ್ಯಪ್ಪ ಲಘುವಾಗಿ ಹೇಳಿಕೆ ನೀಡಿದ್ದಾರೆ. ಇದು ಖಂಡನೀಯ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ವಿಶ್ವನಾಥ್ ಅವರು ಪ್ರಮುಖ ಪಾತ್ರ ವಹಿಸಿದ್ದು, ಸರ್ಕಾರ ರಚನೆಗೆ ಅವರು ಪ್ರಮುಖ ರೂವಾರಿಯಾಗಿದ್ದಾರೆ. ಹೆಚ್.ವಿಶ್ವನಾಥ್ ಅವರಿಗೆ ಕೃತಜ್ಞತೆ ಸಲ್ಲಿಸಿ, ನಿಮ್ಮ ಪಾಪ ಪರಿಹರಿಸಿಕೊಳ್ಳಿ ಎಂದು ಕುಟುಕಿದರು. ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ), ಮುಖಂಡ ಪಿ.ರಾಜು, ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ಮತ್ತಿತರರು ಚಳವಳಿಯಲ್ಲಿ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಜೀವಮಾನ ಸಾಧನಾ ಪ್ರಶಸ್ತಿ



ಕಳೆದ ನವೆಂಬರ್ 24ರಂದು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ 43ನೇ ರಾಷ್ಟ್ರೀಯ ಇಂಡಿಯನ್ ಸೊಸೈಟಿ ಆಫ್ ಪಿಡಿಯಾಟ್ರಿಕ್ ಅಂಡ್ ಪ್ರಿವೆಂಟೀವ್ ಡೆಂಟಿಸ್ಟ್ರಿ ಕಾನ್ಫರೆನ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಮೈಸೂರಿನ ಕಬೀರ್ ರಸ್ತೆಯ ನಿವಾಸಿ ದಿವಂಗತ ಅತ್ತಿಗುಪ್ಪೆ ಛಾಯಾಕಾಂತ ಶೆಟ್ಟಿಯವರ ಮೊಮ್ಮಗ ಹಾಗೂ ದಾವಣಗೆರೆಯ ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಡಾ.ಎ.ಆರ್.ಪ್ರಭಾಕರ್ ಅವರಿಗೆ ಮಧ್ಯಪ್ರದೇಶದ ಭೋಪಾಲ್‌ನ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ತೇಜಸ್ವಿ ಎಸ್.ನಾಯ್ಕ್ ಅವರು ರಾಷ್ಟ್ರೀಯ ಜೀವಮಾನ ಸಾಧನಾ ಪ್ರಶಸ್ತಿ ಪ್ರದಾನ ಮಾಡಿದರು. ಸುದೀರ್ಘ ಜೀವಮಾನ ಶ್ರೇಷ್ಠ ಸಾಧನೆಗೈದ ಪ್ರಯುಕ್ತ ಈ ಪ್ರಶಸ್ತಿ ನೀಡಿ, ಗೌರವಿಸಲಾಗಿದೆ.

ನಾಳೆ ರೈತ ಸಂಘದಿಂದ ಪ್ರತಿಭಟನೆ



ಮೈಸೂರು,ಡಿ.3(ಪಿಎಂ)–ಭೂ ಸುಧಾರಣಾ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆಗೆ ತಂದಿರುವ ತಿದ್ದುಪಡಿ ಕೈಬಿಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಡಿ.5ರಂದು ಮೈಸೂರು ಡಿಸಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮೋಹನ್‌ರಾಜ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ಅನುಕೂಲವಾಗುವ ಯಾವುದೇ ಯೋಜನೆಗಳನ್ನು ಜಾರಿಗೊಳಿಸದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿವೆ. ಇದನ್ನು ಖಂಡಿಸಿ ಅಂದು ಬೆಳಗ್ಗೆ 11ಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದರು. ಸಂಘದ ಜಿಲ್ಲಾಧ್ಯಕ್ಷ ಲೋಕೇಶ್, ಪದಾಧಿಕಾರಿಗಳಾದ ದಿನೇಶ್, ಜಯದೇವ್ ಇತರರು ಗೋಷ್ಠಿಯಲ್ಲಿದ್ದರು.

ಬಾಬಾಬುಡನ್ ಗಿರಿ ದರ್ಗಾ ಪೂಜೆಗೆ ಅರ್ಚಕರ ನೇಮಕ

ಚಿಕ್ಕಮಗಳೂರು: ಚಿಕ್ಕಮಗಳೂರಿನ ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಗಿರಿ ದರ್ಗಾ ಪೂಜೆಗೆ ತಾತ್ಕಾಲಿಕವಾಗಿ ಇಬ್ಬರು ಅರ್ಚಕರ ನೇಮಕಕ್ಕೆ ಸರ್ಕಾರ ಅನುಮತಿ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಪಿ.ಎಂ.ಸಂದೀಪ್, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಬೊಮ್ಮನ ಕುಡಿಗೆಯ ಕೆ.ಶ್ರೀಧರ ಅವರನ್ನು ನಿಯೋಜಿಸಿಕೊಳ್ಳಲು ಒಪ್ಪಿಗೆ ನೀಡಿದೆ. ವ್ಯವಸ್ಥಾಪನ ಸಮಿತಿಯ ತೀರ್ಮಾನವನ್ನು ಸರ್ಕಾರಕ್ಕೆ ಕಳಿಸಲಾಗಿತ್ತು. ಸರ್ಕಾರವು ಪರಿಶೀಲಿಸಿ ತಾತ್ಕಾಲಿಕವಾಗಿ ಇಬ್ಬರು ಅರ್ಚಕರ ನೇಮಕಕ್ಕೆ ಆದೇಶಿಸಿದೆ.

ಮಂಚೇಗೌಡನಕೊಪ್ಪಲಿನಲ್ಲಿ ವಿನಾಯಕಸ್ವಾಮಿ ದೇವಸ್ಥಾನ, ಶ್ರೀರಾಮಮಂದಿರ ಉದ್ಘಾಟನೆ

ಇಂದಿನಿಂದ ವಿವಿಧ ಪೂಜಾ ಕಾರ್ಯಕ್ರಮ


ಮೈಸೂರು, ಡಿ.3(ಪಿಎಂ)–ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಚೇಗೌಡನಕೊಪ್ಪಲಿನ ವರಸಿದ್ಧಿ ವಿನಾಯಕಸ್ವಾಮಿ ದೇವಸ್ಥಾನ, ಶ್ರೀರಾಮ ಮಂದಿರ ಉದ್ಘಾಟನೆ, ನವಗ್ರಹ ಪ್ರತಿಷ್ಠಾಪನೆ ಹಾಗೂ ವಿವಿಧ ಪೂಜಾ ಕೈಂಕರ್ಯಗಳನ್ನು ಡಿಸೆಂಬರ್ 4ರಿಂದ 6ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್.ರವಿ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಥಿಲಾವಸ್ಥೆಯಲ್ಲಿದ್ದ ಗ್ರಾಮದ ವಿನಾಯಕಸ್ವಾಮಿ ದೇವಸ್ಥಾನ ಮತ್ತು ರಾಮಮಂದಿರವನ್ನು ನೆಲಸಮಗೊಳಿಸಿ ನೂತನವಾಗಿ ನಿರ್ಮಿಸಲಾಗಿದೆ. ಕ್ಷೇತ್ರದ ಶಾಸಕರ ಅನುದಾನ ಮತ್ತು ಸ್ಥಳೀಯರ ನೆರವಿನೊಂದಿಗೆ ಈ ಕಾರ್ಯ ನಡೆಸಲಾಗಿದೆ. ಡಿ.4ರಂದು ಸಂಜೆ 6.30ಕ್ಕೆ ಗಣಪತಿ ಪೂಜೆ ನಡೆಯಲಿದ್ದು, ಡಿ.5ರ ಮುಂಜಾನೆ 3.10ರಿಂದ 4.30ರ ಅವಧಿಯಲ್ಲಿ ದೇವರ ವಿಗ್ರಹಗಳ ಪ್ರತಿಷ್ಠಾಪನೆ ನಡೆಯಲಿದೆ ಎಂದರು.

ಡಿ.6ರಂದು ಬೆಳಗ್ಗೆ 8ಕ್ಕೆ ಮಂಚೇಗೌಡನಕೊಪ್ಪಲಿನ ಅರಳಿಮರ ವೃತ್ತದಲ್ಲಿ ಸಭಾ ಕಾರ್ಯಕ್ರಮ ಆಯೋಜಿಸಲಾಗಿದೆ. ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮಾಜಿ ಶಾಸಕ ವಾಸು, ವಿಧಾನಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಶಂಕರೇಗೌಡ, ಲಕ್ಷ್ಮೀ ಶಿವಣ್ಣ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಘದ ಪದಾಧಿಕಾರಿಗಳಾದ ಸಿ.ಮಂಜುನಾಥ್, ಜಯರಾಂಚಾರಿ ಗೋಷ್ಠಿಯಲ್ಲಿದ್ದರು.

ಇಂದು ಚಾಮುಂಡಿಬೆಟ್ಟದ ಮೆಟ್ಟಿಲು ಹತ್ತುವ ಸ್ಪರ್ಧೆ



ಮೈಸೂರು,ಡಿ.3(ಪಿಎಂ)– ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್ ಮೈಸೂರು ಘಟಕದ ವತಿಯಿಂದ ಡಿ.4ರಂದು ಸಸ್ಯಾಹಾರದ ಮಹತ್ವದ ಬಗ್ಗೆ ಅರಿವು ಮೂಡಿಸಲು ಚಾಮುಂಡಿಬೆಟ್ಟದ ಮೆಟ್ಟಿಲು ಹತ್ತುವ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸಂಘಟನೆಯ ಮೈಸೂರು ಘಟಕದ ಅಧ್ಯಕ್ಷ ಚೆನ್ನಬಸಪ್ಪ ತಿಳಿಸಿದರು.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6.30ಕ್ಕೆ ಸ್ಪರ್ಧೆಗೆ ಚಾಲನೆ ದೊರೆಯಲಿದೆ. ಅತಿಥಿಗಳಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ಅಮರಪ್ಪ ಹಿರಿಯ ವಕೀಲ ವಿ.ರವಿಕುಮಾರ್, ಪಿರಮಿಡ್ ಮಾಸ್ಟರ್ ಸುರೇಶ್‌ಕಲಬುರ್ಗಿ ಪಾಲ್ಗೊಳ್ಳಲಿದ್ದಾರೆ. 10ರಿಂದ 20 ವರ್ಷ, 21ರಿಂದ 30, 31ರಿಂದ 40 ಹಾಗೂ 40 ವರ್ಷ ಮೇಲ್ಪಟ್ಟವರು ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿವೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಉಚಿತ ನೋಂದಣಿಗೆ ಅವಕಾಶ ನೀಡಲಾಗಿತ್ತು ಎಲ್ಲಾ ವಿಭಾಗಗಳಿಂದ ಒಟ್ಟು 450 ಮಂದಿ ಭಾಗವಹಿಸಲಿದ್ದಾರೆ ಎಂದರು.

ಮೈಸೂರು ಘಟಕದ ಉಪಾಧ್ಯಕ್ಷ ನಟರಾಜ್, ಕಾರ್ಯದರ್ಶಿ ಸಿ.ಅನಿತಾ, ಟ್ರಸ್ಟಿಗಳಾದ ಅಮೃತಾ, ಶಾಂತಲಾ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಹಿಳೆಯರಿಗೆ ಉಚಿತ ತರಬೇತಿ ಶಿಬಿರ

ಮೈಸೂರು, ಡಿ.3–ಕೌಶಲ್ಯ ಕರ್ನಾಟಕದ ಯೋಜನೆಯಡಿ ಪರಿವರ್ತನಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ TAILORING, HAND EMBROIDERY ಕೋರ್ಸ್‌ಗಳಿಗೆ 45 ದಿನ ಉಚಿತವಾಗಿ ಎಸ್.ಸಿ ನಿರುದ್ಯೋಗಿ ಮಹಿಳೆಯರಿಗೆ ತರಬೇತಿಯನ್ನು ನೀಡುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪರಿವರ್ತನಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಕೆ.ಎಸ್.ಮಾಲೇಗೌಡ ಮೊ.ಸಂ: 9964487523 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.12.2022 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ : ರೇವತಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಅರಸು ಯುವಜನ ವೇದಿಕೆ:** ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಮೈದಾನ, ಬೆಳಗ್ಗೆ 8ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸಂಸ್ಮರಣಾ 27ನೇ ಸಂಗೀತ ಸಮ್ಮೇಳನ, ಸಂಗೀತಾಂಜಲಿ, ತರಂಗ ತಂಡದಿಂದ ವೇಣುವಾದನ, ನಿರ್ದೇಶನ: ವಿದುಷಿ ಸ್ಮಿತಾ ಶ್ರೀಕಿರಣ್, ವಿದ್ವತ್ ಗೋಷ್ಠಿ: ಚಿಕ್ಕದೇವರಾಜ ಒಡೆಯರ್ ವಿರಚಿತ ಗೇಯ ಪ್ರಬಂಧ–ಗೀತಗೋಪಾಲ–ಪ್ರಾತ್ಯಕ್ಷಿಕೆ ಡಾ.ಮೀರಾ ರಾಜಾರಾಂ ಪ್ರಾಣೇಶ್ ಅವರಿಂದ, ವಿದ್ವಾನ್ ವಿ.ನಂಜುಂಡಸ್ವಾಮಿ ಅವರಿಂದ ಶಾಸ್ತ್ರೀಯ ಸಂಗೀತ ಅಂದು–ಇಂದು–ಮುಂದೆ ವೈಜ್ಞಾನಿಕ ಚಿಂತನೆ–ಪ್ರಾತ್ಯಕ್ಷಿಕೆ, ಸಂಜೆ 5.30ರಿಂದ ಜಿ.ಕೆ. ಮನಮೋಹನ್ ಅವರಿಂದ ಗಾಯನ, ಸುಮಂತ್–ವಯೋಲಿನ್, ಅನಿರುದ್ಧ್ ಭಟ್–ಮೃದಂಗ, ಸಂಜೆ 6.30ಕ್ಕೆ ಡಾ. ಜಯಂತಿ ಆರ್. ಕುಮರೇಶ್–ವೀಣಾವಾದನ, ತುಮಕೂರು ಬಿ. ರವಿಶಂಕರ್–ಮೃದಂಗ, ತಿರುಚಿ ಕೃಷ್ಣಸ್ವಾಮಿ–ಘಟ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಮೈಸೂರು ವಲಯ :** ಕರ್ನಾಟಕ ಮತ್ತು ಜಮ್ಮು ಕಾಶ್ಮೀರ ನಡುವಿನ ಬಿಸಿಸಿಐ–19 ಕೂಚ್ ಬೇಹರ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಎಸ್‌ಡಿಎನ್ ಆರ್‌ಡಬ್ಲ್ಯು ಮೈದಾನ, ಮಾನಸಗಂಗೋತ್ರಿ, ಬೆಳಗ್ಗೆ 10ರಿಂದ.

■ **ರಂಗಾಯಣ :** ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ರಂಗಾಯಣದ ರೆಪರ್ಟರಿ ಕಲಾವಿದರಿಂದ ಟಿಪ್ಪು ನಿಜಕನಸುಗಳು ನಾಟಕ ಪ್ರದರ್ಶನ, ನಿರ್ದೇಶನ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6ಕ್ಕೆ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು, ಶ್ರೀಕಾಂತ ಸಂಸ್ಕೃತ ಪಾಠಶಾಲೆ, ಶ್ರೀ ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ :** ಗೀತಾ ಜಯಂತಿ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಶ್ರೀ ಕೆ.ಎನ್. ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜಿ. ನರಸಿಂಹ ಅಯ್ಯಂಗಾರ್, ಮುಖ್ಯ ಅತಿಥಿಗಳು: ವಿದುಷಿ ಎಂ.ಸಿ.ನಾಗಲಕ್ಷ್ಮೀ, ಸ್ಥಳ: ವಿದ್ಯಾಸಂಸ್ಥೆಯ ಸಭಾಭವನ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ರಘೋತ್ತಮಚಾರ್ ನಾಗಸಂಪಿಗೆ ಬಾಗಲಕೋಟೆ ಅವರಿಂದ ಭಗವದ್ಗೀತೆಯ 2ನೇ ಅಧ್ಯಾಯದ ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸಂಜೆ 5 ಗಂಟೆಗೆ.

■ **ಶ್ರೀ ಉತ್ತರಾಧಿ ಮಠ :** ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ ಶ್ರೀ ಭಗವದ್ಗೀತಾ ಅಭಿಮಾನ, 2ನೇ ತಿಂಗಳ ಪ್ರವಚನ, ಸ್ಥಳ: ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30 ರಿಂದ.

■ **ಶ್ರೀ ಸದ್ಗುರು ಸೇವಾ ಮಂಡಲ:** 52ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹದ ಪ್ರಯುಕ್ತ ಧಾರ್ಮಿಕ ಕಾರ್ಯಕ್ರಮಗಳು, ಬೆಳಗ್ಗೆ 7 ಗಂಟೆಗೆ ಶ್ರೀಯವರಿಗೆ ರುದ್ರಾಭಿಷೇಕ, ಸರ್ವಾಲಂಕಾರ ಶ್ರೀ ಗುರು ಚರಿತ್ರೆ ಪಾರಾಯಣ, ಬೆಳಗ್ಗೆ 11 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ ಉಪನ್ಯಾಸ, ದತ್ತ ಭಜನೆ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಸದ್ಗುರು ಸೇವಾ ಮಂಡಲ, ಅರಮನೆ ಕಚೇರಿ ವೃತ್ತ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜೀ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಸುಜ್ಞಾನ ಟ್ರಸ್ಟ್, ಕೆಹೆಚ್‌ಬಿ ಬಡಾವಣೆ, ಹೂಟಗಳ್ಳಿ, ಬೆಳಗ್ಗೆ 10ಕ್ಕೆ

■ **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್:** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ.ಬೆ.ನಾ. ವಿಜಯೀಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಶ್ರೀ ಗೀತಾಪ್ರಚಾರಿಣಿ ಸಭಾ ಟ್ರಸ್ಟ್, ಶ್ರೀ ಗೀತಾ ಮಂದಿರದ ರಸ್ತೆ.

■ **ಸಮತೆಂತೋ, ಮೈಸೂರು:** ಮಲೆಯಾಳಂ ಏಕವ್ಯಕ್ತಿ ನಾಟಕ ಪೆಣ್ ನಟನ್, ನಟನೆ ಮತ್ತು ನಿರ್ದೇಶನ : ಸಂತೋಷ್ ಕೀಳಟ್ಟೂರ್, ಸ್ಥಳ : ನಟನ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಹನುಮ ಜಯಂತಿ, ಸಂಜೆ 6.30ಕ್ಕೆ ಪುಣ್ಯಾವಾಚನ, ರಕ್ಷಾಬಂಧನ, ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, 9.30ಕ್ಕೆ ಪೂರ್ಣಾಹುತಿ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಾತ್ರಿ 10 ಗಂಟೆಯ ನಂತರ ದೇವಸ್ಥಾನದ ಭಜನಾ ಮಂಡಳಿಯವರಿಂದ ಅಖಂಡ ಭಜನೆ, ಸ್ಥಳ: ಟ್ರಸ್ಟ್ ಆವರಣ, ಹನುಮಂತನಗರ, ಬನ್ನಿಮಂಟಪ.

■ **ದಿನೇಶ್ ಕೋಚಿಂಗ್ ಸೆಂಟರ್ :** ಪ್ರತಿಭಾ ಪುರಸ್ಕಾರ ಸಮಾರಂಭ, ಮುಖ್ಯ ಅತಿಥಿಗಳು : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತುಮಕೂರು ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ವಿರೇಶಾನಂದ ಸರಸ್ವತೀ, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ವಿಶ್ವ ವಿಕಾಸ ಟ್ರಸ್ಟ್ :** ಜ್ಯೋತಿಷಿ ಹಾಗೂ ವಾಸ್ತು ತಜ್ಞರಾದ ರಾಮ್ ಶ್ರೀಕಾಂತ್ ತೇಜಾ ಗುರೂಜಿ ಅವರಿಂದ ಸಂಖ್ಯಾಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ವಾಸ್ತು ವಿಜ್ಞಾನ ಪೂರ್ವ ಪೀಠಿಕೆ ಕುರಿತು ಒಂದು ದಿನದ ಕಾರ್ಯಾಗಾರ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ವಿವಿಟಿ ಟ್ರಸ್ಟ್ ಅಧ್ಯಕ್ಷ ಮಂಟೇಲಿಂಗಾಚಾರ್, ಉದ್ಘಾಟನೆ: ಅಖಿಲ ಭಾರತ ವಿಶ್ವಕರ್ಮ ಪರಿಷತ್ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಪ್ರಕೃತಿ ಸುರೇಶ್, ಮುಖ್ಯ ಅತಿಥಿಗಳು: ಡೆಪ್ಯುಟಿ ಕಮೀಷನರ್ ಡಿ.ಎಂ.ಮಂಜುನಾಥ್ ಸೋಸಲೆ, ಕೈಗಾರಿಕಾ ಅಭಿವೃದ್ಧಿ ಮಂಡಳಿ ವಿಶೇಷ ಭೂಸ್ವಾಧೀನಾಧಿಕಾರಿ ವಿ.ಪ್ರಿಯದರ್ಶಿನಿ, ಉಪಸ್ಥಿತರು : ಶ್ರೀನಿಧಿ ಚಕ್ರವರ್ತಿ, ಎನ್.ಎಂ. ನವೀನ್ ಕುಮಾರ್, ಹೆಚ್.ಸಿ.ಚೆಲುವಮೂರ್ತಿ, ಡಾ.ಮಾಲತೇಶ್ ಆಚಾರ್ಯ, ವಿಕ್ರಂ ಅಯ್ಯಂಗಾರ್, ಆರ್. ಮಣಿಕಂಠರಾಜ್‌ಗೌಡ, ಸ್ಥಳ: ಸಾಯಿ ಕಾಂಪ್ಲೆಕ್ಸ್, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಉದ್ಘಾಟನೆ ಮತ್ತು ಕೃತಿ ಲೋಕಾರ್ಪಣೆ, ಉದ್ಘಾಟನೆ: ಕವಯಿತ್ರಿ ಎ.ಹೇಮಗಂಗಾ, ಅಧ್ಯಕ್ಷತೆ: ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಕೃತಿ ಪರಿಚಯ: ಸಾಹಿತಿ ಕೆ.ಶ್ರೀಧರ್, ಮುಖ್ಯ ಅತಿಥಿಗಳು : ಮೊಹಮದ್ ಜಾಫರ್, ರಾಜು ಆಡ್ಯ, ಮಮತ, ಶೋಭಾ, ಎಂ.ಸುಹಾಸ್, ಸ್ಥಳ: ರೋಟರಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ:** ರಾಜ್ಯೋತ್ಸವ–ಸಹಕಾರಿ ಸಪ್ತಾಹದ ಅಂಗವಾಗಿ ಸಾಂಸ್ಕೃತಿಕ ಸಂಜೆ, ಅಧ್ಯಕ್ಷತೆ: ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಾಗಚಂದ್ರ, ಉದ್ಘಾಟನೆ: ಪ್ರಾಧ್ಯಾಪಕ ಡಾ.ಜನಾರ್ಧನ್, ಪ್ರತಿಭಾ ಪುರಸ್ಕಾರ: ನಿವೃತ್ತ ಹಿರಿಯ ಸಂಶೋಧಕ ಡಾ.ಹೆಚ್.ವಿ. ನಾಗರಾಜರಾವ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ, ಶ್ರೀ ಪಂಚಮುಖಿ ಆಂಜನೇಯಸ್ವಾಮಿ ಮತ್ತು ಗರುಡ ದೇವರಿಗೆ ಸ್ನಪನ, ಅಭಿಷೇಕ, ಹೂವಿನ ಅಲಂಕಾರ, ಅನುಜ್ಞೆ, ಅಂಕುರಾರ್ಪಣ, ಪುಣ್ಯಾಹವಾಚನ ಮಹಾಸಂಕಲ್ಪ, ರಕ್ಷಾಬಂಧನ, ಧ್ವಜಾರೋಹಣ, ಕಳಸ ಪ್ರತಿಷ್ಠೆ, ಸ್ಥಳ: ದೇವಸ್ಥಾನ, ಇರ್ವಿನ್ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕುಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಕೆ.ಟಿ.ಉದಯಕಿರಣ್, ಸಿ.ವಿಶ್ವನಾಥ್ ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 9.40 ನಮ್ಮ ಆರೋಗ್ಯ, ಪಿಸಿಓಡಿಗೆ ಕಾರಣಗಳು ಮತ್ತು ಪರಿಹಾರ ಕುರಿತು ಡಾ.ಮಾಧುರಿ ಅವರೊಂದಿಗೆ ಮಾತುಕತೆ, 10.00 ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಸೇಂಟ್ ಜೋಸೆಫ್ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎಂ.ಎಸ್.ಸುಬ್ಬಲಕ್ಷ್ಮೀ, ಗಣಪತಿ ಭಟ್ ಹಾಸಣಗಿ, 12.45 ಜನಪದ ಸಂಗೀತ–ನಾಗಬಸಮ್ಮ ಮತ್ತು ತಂಡ, 1.20 ಭಾವಗೀತೆ–ಶಾಂತಲಾ ಎಲ್.ರಾವ್, 3.45 ಯಕ್ಷಗಾನ ತಾಳಮದ್ದಲೆ–ಪ್ರಸಂಗ–ಕಿಂದಮ ಶಾಪ, ಪ್ರಸ್ತುತಿ–ಉಡುಪಿ ಆತ್ರಾಡಿಯ ರಾಘವ ಶೆಟ್ಟಿಗಾರ್ ಮತ್ತು ಬಳಗದವರು, 6.50 ಕೃಷಿರಂಗ– ಕೃಷಿಲೋಕ, ಕೃಷಿ ಮಾಹಿತಿ, ಜನಪದಗೀತೆಗಳು, 8.00 ಯುವವಾಣಿ–ಯುವ ಪ್ರತಿಭೆ–ನವದೆಹಲಿಯ ಕರ್ತವ್ಯ ಪಥದನಲ್ಲಿ ಜರುಗಿದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಎನ್.ಸಿ.ಸಿ. ಕೆಡೆಟ್‌ಗಳಾದ ಪ್ರಮೀಣಾ ಕುಂವರ್, ಸುಚಿತ್ರಾ, ಪ್ರಿಯಾ ಮತ್ತು ಸುಷ್ಮಿತಾ ಅವರೊಂದಿಗೆ ಮಾತುಕತೆ, 9.15 ರಂಗಗೀತೆಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪಂಡಿತ್ ವಿಶ್ವನಾಥ್ – ಗಾಯನ

ಬಾಳುಗೋಡಲ್ಲಿ ಗಿರಿಜನ ಉತ್ಸವ

ಆದಿವಾಸಿ ಜನರ ಕಲೆ, ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸಿ: ಕೆ.ಜಿ.ಬೋಪಯ್ಯ





ಮಡಿಕೇರಿ, ಡಿ.3– ಆದಿವಾಸಿ ಗಿರಿಜನರಲ್ಲಿ ಪ್ರತಿಭೆಗೆ ಕೊರತೆ ಇಲ್ಲ. ಆ ನಿಟ್ಟಿನಲ್ಲಿ ಆದಿವಾಸಿ ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಮೆಚ್ಚುವಂತದ್ದು ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಮಗ್ರ ಗಿರಿಜನ ಯೋಜನಾ ಇಲಾಖೆ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಕಾರದಲ್ಲಿ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ವಿರಾಜಪೇಟೆ ತಾಲೂಕು ಬಾಳುಗೋಡು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಶನಿವಾರ ನಡೆದ 'ಗಿರಿಜನ ಉತ್ಸವ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಆದಿವಾಸಿ ಜನರು ತಮ್ಮದೇ ಆದ ಆಚಾರ–ವಿಚಾರ, ಕಲೆ, ಸಂಸ್ಕೃತಿಯನ್ನು ಹೊಂದಿದ್ದು, ಇಂತಹ ಪ್ರಾಚೀನ ಕಲೆ, ಸಂಸ್ಕೃತಿಯನ್ನು ಪ್ರಪಂಚಕ್ಕೆ ಪಸರಿಸುವಂತಾಗಬೇಕು ಎಂದು ಕೆ.ಜಿ.ಬೋಪಯ್ಯ ಅವರು ತಿಳಿಸಿದರು.

'ಆದಿವಾಸಿ ಗಿರಿಜನರಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ಕಲೆ, ಸಂಸ್ಕೃತಿ ಜೊತೆಗೆ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು. ಪ್ರತಿಯೊಬ್ಬರೂ ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದು ಕೆ.ಜಿ.ಬೋಪಯ್ಯ ಅವರು ಕರೆ ನೀಡಿದರು'

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ಆದಿವಾಸಿ ಜನರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬೇಕು, ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳ ಸೌಲಭ್ಯವನ್ನು ಪಡೆದುಕೊಳ್ಳುವಂತಾಗಬೇಕು. ವಿದ್ಯಾರ್ಥಿಗಳು ಆಟ ಪಾಠದಲ್ಲಿ ಮುಂದಿರಬೇಕು. ಕೆಟ್ಟ ಅಭ್ಯಾಸಗಳಿಗೆ ಬಲಿಯಾಗಬಾರದು ಎಂದು ಸಲಹೆ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಅವರು ಮಾತನಾಡಿ, ಗಿರಿಜನರ ಕಲೆ, ಸಂಸ್ಕೃತಿಯನ್ನು ಪ್ರೋತ್ಸಾಹಿಸುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಬ್ಬದ ಮಾದರಿಯಲ್ಲಿ ಗಿರಿಜನ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಹಿರಿಯ ಕಲಾವಿದರಾದ ಕುಡಿಯರ ಮುತ್ತಪ್ಪ ಮಾತನಾಡಿದರು.

ಏಕಲವ್ಯ ಮಾದರಿ ವಸತಿ ಶಾಲೆಗಳ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧಾ ಕೂಟದಲ್ಲಿ ಕ್ಲಾಸಿಕಲ್ ಡ್ಯಾನ್ಸ್‌ನಲ್ಲಿ ಬಾಳುಗೋಡು ಏಕಲವ್ಯ ಮಾದರಿ ವಸತಿ ಶಾಲೆಯ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಜೀಸ್ಮ ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿ ವಿಜೇತಳಾಗಿ ಕೊಡಗು ಜಿಲ್ಲೆಗೆ ಕೀರ್ತಿ ತಂದಿರುವುದಕ್ಕೆ ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರು ಅಭಿನಂದಿಸಿದರು.

ಹಬ್ಬದಂತೆ ನಡೆದ ಗಿರಿಜನ ಉತ್ಸವ ಆದಿವಾಸಿ ಗಿರಿಜನರ ಪ್ರಾಚೀನ ಕಲೆ, ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಾಳುಗೋಡು ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಶನಿವಾರ ನಡೆದ 'ಗಿರಿಜನ ಉತ್ಸವ'ವು ಹಬ್ಬದಂತೆ ಸಡಗರ ಸಂಭ್ರಮದಿಂದ ಜರುಗಿತು.

ಜೇನುಕುರುಬ, ಕುಡಿಯ, ಮಲೆಕುಡಿಯ, ಯರವ, ಪಣಿಯ ಸಮಾಜದ ಕಲಾವಿದರು ಒಂದೆಡೆ ಸೇರಿ ತಮ್ಮ ತಮ್ಮ ಸಂಸ್ಕೃತಿ, ಕಲಾ ಪ್ರಕಾರಗಳನ್ನು ಸಾಂಪ್ರದಾಯಿಕ ನೃತ್ಯ ಹಾಗೂ ಹಾಡಿನ ಮೂಲಕ ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು.

ರಸ್ತೆ ಬದಿ ಕಸ ಸುರಿದ ಮಡಿಕೇರಿ ಹೋಟೆಲ್‌ಗೆ 20 ಸಾವಿರ ರೂ. ದಂಡ

ಸುರಿದವರಿಂದಲೇ ಕಸ ತೆಗೆಸುವುದರೊಂದಿಗೆ ದಂಡದ ಬಿಸಿ



ಮಡಿಕೇರಿ,ಡಿ.3– ರಸ್ತೆ ಬದಿ ಕಸ ಎಸೆದು ಹೋದ ಮಡಿಕೇರಿ ನಗರದ ಹೋಟೇಲ್‌ವೊಂದಕ್ಕೆ ಕಡಗದಾಳು ಗ್ರಾಪಂ 20 ಸಾವಿರ ರೂ.ಗಳ ಭಾರೀ ಮೊತ್ತದ ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ. ಆ ಮೂಲಕ ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿದವರೇ ತ್ಯಾಜ್ಯವನ್ನು ತೆರವುಗೊಳಿಸುವುದರೊಂದಿಗೆ ಭಾರಿ ಮೊತ್ತದ ದಂಡವನ್ನು ಭರಿಸಬೇಕೆಂಬ ಎಚ್ಚರಿಕೆಯ ಸಂದೇಶ ಕಡಗದಾಳು ಗ್ರಾಮ ಪಂಚಾಯಿತಿಯಿಂದ ರವಾನೆಯಾಯಿತು.

ಘಟನೆ ಹಿನ್ನೆಲೆ: ಕಡಗದಾಳು ಗ್ರಾಮ ಪಂಚಾಯ್ತಿ ವತಿಯಿಂದ ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಶ್ರಮದಾನ ಮಾಡಿ ರಸ್ತೆ ಬದಿಯಲ್ಲಿ ಬಿಸಾಡಿರುವ ತ್ಯಾಜ್ಯಗಳನ್ನು ಸಂಗ್ರಹಿಸುವ ಮೂಲಕ ಗ್ರಾಮದ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾ ಬರಲಾಗುತ್ತಿದೆ.

ಅದರಂತೆ ಶನಿವಾರ ಗ್ರಾಮದ ಸೈನಿಕ್ ಅಕಾಡೆಮಿಯ ಸದಸ್ಯರು ಶ್ರಮದಾನದ ಮೂಲಕ ರಸ್ತೆ ಬದಿಯ ತ್ಯಾಜ್ಯಗಳನ್ನು ಸಂಗ್ರಹಿಸಿ, ಶುಚಿತ್ವಗೊಳಿಸುತ್ತಿದ್ದ ಸಂದರ್ಭ ಮಡಿಕೇರಿಯ ಹೊಟೇಲ್ ಒಂದರ ತ್ಯಾಜ್ಯವನ್ನು ಸುಮಾರು 8ರಿಂದ 10 ಚೀಲಗಳಲ್ಲಿ ತಂದು ರಸ್ತೆ ಬದಿಯಲ್ಲಿ ಎಸೆದಿರುವುದು ಕಂಡು ಬಂದಿತ್ತು. ಎಸೆದ ತ್ಯಾಜ್ಯವನ್ನು ಶುಚಿಗೊಳಿಸುವುದಿರಲಿ, ಸ್ಥಳದಲ್ಲಿ ನಿಲ್ಲುವುದಕ್ಕೂ ಅಸಾಧ್ಯವಾದ ದುರ್ಗಂಧ ಬರುತ್ತಿದ್ದ ಹಿನ್ನೆಲೆಯಲ್ಲಿ ಸೈನಿಕ್ ಅಕಾಡೆಮಿಯ ಸದಸ್ಯರು, ಕಡಗದಾಳು ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ.ಟಿ.ಜಯಣ್ಣ ಹಾಗೂ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕಸದ ಚೀಲದಲ್ಲಿದ್ದ ಚೀಟಿಯಲ್ಲಿ ದೊರಕಿದ ಹೊಟೇಲ್ ಮಾಲೀಕರ ಮೊಬೈಲ್ ನಂಬರ್‌ಗೆ ಸಂಪರ್ಕಿಸಿ, ಗ್ರಾ.ಪಂ. ಜನಪ್ರತಿನಿಧಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಸ್ಥಳಕ್ಕಾಗಮಿಸಿದ ಹೊಟೇಲ್ ಸಿಬ್ಬಂದಿಯನ್ನು ಗ್ರಾಮಸ್ಥರು ತೀವ್ರ ತರಾಟೆಗೆ ತೆಗೆದುಕೊಂಡರಲ್ಲದೇ, ಕೂಡಲೇ ತ್ಯಾಜ್ಯವನ್ನು ಸ್ಥಳದಿಂದ ತೆರವುಗೊಳಿಸುವಂತೆ ಸೂಚಿಸಿದರು. ಹೊಟೇಲ್ ಅನ್ನು ಈಗಾಗಲೇ ಮುಚ್ಚಲಾಗಿದ್ದು, ಹೊಟೇಲ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಹೊರ ರಾಜ್ಯದ ಕಾರ್ಮಿಕರು ತ್ಯಾಜ್ಯವನ್ನು ತಂದು ಇಲ್ಲಿ ಸುರಿದಿದ್ದಾರೆ. ತ್ಯಾಜ್ಯವನ್ನು ಸ್ಥಳದಿಂದ ತೆರವುಗೊಳಿಸುವುದರೊಂದಿಗೆ ಗ್ರಾಮ ಪಂಚಾಯಿತಿ ವಿಧಿಸುವ ದಂಡವನ್ನು ಭರಿಸುವುದಾಗಿ ಹೊಟೇಲ್ ಸಿಬ್ಬಂದಿ ತಿಳಿಸಿದರು. ತದನಂತರ ಗ್ರಾಮ ಪಂಚಾಯಿತಿಯಿಂದ ಸಂಬಂಧಿಸಿದ ಹೊಟೇಲ್ ಮಾಲೀಕರಿಗೆ 20 ಸಾವಿರ ರೂಪಾಯಿಗಳ ಭಾರೀ ದಂಡವನ್ನು ವಿಧಿಸಲಾಯಿತು.

ಡಿ.6 ರಂದು ಹಾತೂರು ಗ್ರಾಮ ಪಂಚಾಯಿತಿ ಸಭೆ

ಗೋಣಿಕೊಪ್ಪ, ಡಿ.3– ಹಾತೂರು ಗ್ರಾಮ ಪಂಚಾಯಿತಿ ಗ್ರಾಮ ಸಭೆ ಡಿ.6ರಂದು ಬೆಳಗ್ಗೆ 10.30 ಗಂಟೆಗೆ ಹಾತೂರು ಪ್ರೌಢಶಾಲೆಯ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಗುಮ್ಮಟ್ಟಿರ ಎಸ್. ನಂಜಪ್ಪ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ನೋಡೆಲ್ ಅಧಿಕಾರಿಯಾಗಿ ಪಿ.ಆರ್.ರಾಜೇಶ್ ಭಾಗವಹಿಸಲಿದ್ದಾರೆ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಜ್ಮಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಂಗವಿಕಲತೆ ಶಾಪವಲ್ಲ, ಅವರನ್ನು ಇತರರಂತೆ ಗೌರವಿಸಿ



ವಿರಾಜಪೇಟೆ, ಡಿ.3– ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಸಮಾಜದಲ್ಲಿ ಪ್ರತಿಯೊಬ್ಬರು ಗೌರವದಿಂದ ಕಾಣಬೇಕು ಎಂದು ಶಾಸಕ ಕೆ.ಜಿ.ಬೋಪಯ್ಯ ಕರೆ ನೀಡಿದ್ದಾರೆ.

ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಕೊಡಗು ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಪನ್ಮೂಲ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ವಿರಾಜಪೇಟೆ ಸರಕಾರಿ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ತಾಲೂಕಿನ 'ವಿಶೇಷ ಅಗತ್ಯತೆಯುಳ್ಳ ಮಕ್ಕಳ ವೈದ್ಯಕೀಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷ ಅಗತ್ಯತೆಯಿರುವ ಮಕ್ಕಳು ಸರ್ಕಾರದ ಸವಲತ್ತುಗಳನ್ನು ಪಡೆಯಲು ಮುಂದಾಗಬೇಕು ಎಂದರು.

ಅಂಗವಿಕಲತೆ ಶಾಪವಲ್ಲ, ಅಂತ ಮಕ್ಕಳನ್ನು ಇತರೆ ಎಲ್ಲ ಮಕ್ಕಳಂತೆ ಸರಿಸಮಾನವಾಗಿ ನೋಡಿಕೊಳ್ಳಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು. ಹಾಗೂ ವೈದ್ಯಕೀಯ ತಪಾಸಣೆ ನಂತರ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದುಕೊಂಡು ಉತ್ತಮ ಆರೋಗ್ಯವಂತರಾಗಬೇಕು ಎಂದರು.

ತಾಲೂಕು ಕಾರ್ಯನಿರ್ವಹಣಾಧಿಕಾರಿ ಅಪ್ಪಣ್ಣ, ಕೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬಿಳಗಿ, ತಾಲೂಕು ಆರೋಗ್ಯಾಧಿಕಾರಿ ಡಾ, ಯತಿರಾಜ್, ಕೇತ್ರ ಸಂಪನ್ಮೂಲ ಅಧಿಕಾರಿ ವನಜಾಕ್ಷಿ, ದೈಹಿಕ ಶಿಕ್ಷಕರಾದ ಪಿ.ಪ್ರವೀಣ್, ಶಿಕ್ಷಣ ಇಲಾಖೆಯ ಉತ್ತಪ್ಪ, ಮಡಿಕೇರಿಯ ಡಾ. ಕೃಪಲಿನಿ ಅಯ್ಯಪ್ಪ, ಬಿ.ಐ.ಇ.ಆರ್.ಟಿ ಅಜೀತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೊಡಗು ವೈದ್ಯಕೀಯ ವಿಜ್ಞಾನ ಬೋಧಕ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ್ದರು. ವನಜಾಕ್ಷಿ ಸ್ವಾಗತಿಸಿದರು, ಕೆ.ಸಿ.ಗಿತಾಂಜಲಿ ನಿರೂಪಿಸಿದರೆ ವಮನ ವಂದಿಸಿದರು.

ಮಾದಕ ವಸ್ತುಗಳಿಂದ ದೂರವಿರುವ ಬಗ್ಗೆ ಜಾಗೃತಿ ಅಗತ್ಯ



ಗೋಣಿಕೊಪ್ಪ, ಡಿ.3– ಯುವ ಜನತೆ ಮಾದಕ ವಸ್ತುಗಳಿಂದ ದೂರ ಉಳಿಯಲು ಹೆಚ್ಚು ಜಾಗೃತಿ ಮೂಡಿಸಬೇಕು ಎಂದು ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದ್ದಾರೆ.

ಶನಿವಾರ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಯುವ ಒಕ್ಕೂಟ, ಇಂಡಿಯನ್ ಯುವಕ ಸಂಘ ಮತ್ತು ಪೊನ್ನಂಪೇಟೆ ನಿಸರ್ಗ ಯುವತಿ ಮಂಡಳಿ ಸಹಯೋಗದಲ್ಲಿ ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ದೇಶದಲ್ಲಿ ಯುವ ಸಮೂಹ ಹೆಚ್ಚಿರುವುದರಿಂದ ನಿರೀಕ್ಷೆ ಹೆಚ್ಚಿವೆ. ಪ್ರತಿಭೆಗೆ ಅವಕಾಶ ಮಾಡಿಕೊಡಲು ಸರ್ಕಾರ ಇಲಾಖೆಗಳ ಮೂಲಕ ಯೋಜನೆ ಅನುಷ್ಠಾನಗೊಳಿಸುತ್ತಿದೆ. ಇದರ ಸದ್ಬಳಕೆ ಮಾಡಿಕೊಳ್ಳಲು ಯುವ ಜನತೆ ಮುಂದಾಗಬೇಕಿದೆ ಎಂದರು.

ಮಾದಕ ವಸ್ತುಗಳ ಬಳಕೆ ಬಗ್ಗೆ ಹೆಚ್ಚು ಜಾಗೃತರಾಗಬೇಕಿದೆ. ಯುವ ಸಮೂಹದಿಂದ ಅಭಿವೃದ್ಧಿಯ ನಿರೀಕ್ಷೆ ಹೆಚ್ಚಿದ್ದು, ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವುದರಿಂದ ಅಭಿವೃದ್ಧಿ ಕಾರ್ಯಗಳತ್ತ ಸೆಳೆಯುವ ಪ್ರಯತ್ನ ಹೆಚ್ಚಾಗಬೇಕು ಎಂದರು.

ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕ ಜಿ.ಎಸ್.ಗುರುಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿರುವ ಯುವಕ ಸಂಘಗಳನ್ನು ಚಟುವಟಿಕೆಯತ್ತ ಸೆಳೆಯಲು ವಿಶೇಷ ಕಾರ್ಯಕ್ರಮ ರೂಪಿಸಬೇಕಿದೆ. ಸರ್ಕಾರ ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಯೋಜನೆ ರೂಪಿಸಿಕೊಂಡಿದೆ ಎಂದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸೋಮೆಂಗಡ ಗಣೇಶ್ ತಿಮ್ಮಯ್ಯ, ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ.ಸುರೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ವಿ.ಟಿ.ವಿಸ್ಮಯಿ ಚಕ್ರವರ್ತಿ, ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕ ಜಿ.ಎಸ್.ಗುರುಸ್ವಾಮಿ ಅವರುಗಳನ್ನು ಸನ್ಮಾನಿಸಲಾಯಿತು. ಜನಪದ ನೃತ್ಯ, ಜನಪದ ಗೀತೆ, ಏಕಾಂಕ ನಾಟಕ, ಶಾಸ್ತ್ರೀಯ ಗಾಯನ, ಸಿತಾರ್, ಕೊಳಲು, ತಬಲ, ವೀಣೆ, ಮೃದಂಗ, ಭರತನಾಟ್ಯ, ಒಡಿಸ್ಸಿ ಮಣಿಪುರಿ, ಕೊಚುಪುಡಿ, ಕಥಕ್, ಹಾರ್ಮೋನಿಯಂ, ಗಿಟಾರ್, ಆಶುಭಾಷಣ ಸ್ಪರ್ಧೆ ನಡೆಯಿತು. ಪೊನ್ನಂಪೇಟೆ ಗ್ರಾಪಂ ಅಧ್ಯಕ್ಷೆ ಗಿರಿಜಾ ವೆಂಕಟೇಶ್, ಸದಸ್ಯ ರಾಮಕೃಷ್ಣ, ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ. ಸುಕುಮಾರ್, ವಿರಾಜಪೇಟೆ ಮಾಜಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ವಿರಾಜಪೇಟೆ ತಾಲೂಕು ಯುವ ಒಕ್ಕೂಟ ಅಧ್ಯಕ್ಷೆ ಶೀಲಾ ಬೋಪಣ್ಣ, ಪೊನ್ನಂಪೇಟೆ ನಿಸರ್ಗ ಯುವತಿ ಮಂಡಳಿ ಅಧ್ಯಕ್ಷೆ ರೇಖಾ ಶ್ರೀಧರ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶರೀನ್ ಕೊಡವ, ಉಪ ಪ್ರಾಂಶುಪಾಲ ಎಂ.ಯು. ಚಂಗಪ್ಪ ಇದ್ದರು.

ಡಿ.12ಕ್ಕೆ ಚಾ.ನಗರ ಜಿಲ್ಲೆಗೆ ಸಿಎಂ ಬೊಮ್ಮಾಯಿ ಭೇಟಿ

ಸಕಲ ಸಿದ್ಧತೆ ಕೈಗೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚನೆ



ಚಾಮರಾಜನಗರ, ಡಿ.3– ಚಾಮರಾಜನಗರ ಜಿಲ್ಲೆಗೆ ಡಿ.12ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಗಮಿಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿರುವ ಹಿನ್ನೆಲೆಯಲ್ಲಿ ಯಾವುದೇ ಲೋಪವಿಲ್ಲದಂತೆ ಅಧಿಕಾರಿಗಳು ಅಚ್ಚುಕಟ್ಟಾಗಿ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತೆಗಳ ಪರಿಶೀಲನೆಗಾಗಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಯವರು ಡಿ.12 ರಂದು ಮೊದಲಿಗೆ ಚಾಮರಾಜನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಫಲಾನುಭವಿಗಳಿಗೆ ಸವಲತ್ತು ವಿತರಿಸುವರು. ಬಳಿಕ ಹನೂರಿನಲ್ಲಿಯೂ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಿದ್ದಾರೆ. ತದನಂತರ ಮಲೈ ಮಹದೇಶ್ವರ ಬೆಟ್ಟಕ್ಕೆ ತೆರಳಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸುವರು. ಈ ಎಲ್ಲಾ ಕಾರ್ಯಕ್ರಮಗಳಿಗೆ ಅಚ್ಚುಕಟ್ಟಾಗಿ ಪೂರ್ವ ಸಿದ್ಧತೆ ಕೈಗೊಳ್ಳಬೇಕೆಂದು ಉಸ್ತುವಾರಿ ಸಚಿವರು ತಿಳಿಸಿದರು.

ಜಿಲ್ಲೆ ಸರ್ವಾಂಗೀಣ ಅಭಿವೃದ್ಧಿಯಾಗಬೇಕಿದೆ. ಇನ್ನಷ್ಟು ಕಾರ್ಖಾನೆಗಳು, ಉದ್ಯಮಗಳು ಬೆಳೆಯಬೇಕಿದೆ. ಪ್ರಗತಿಗೆ ಉತ್ತೇಜನ ನೀಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮುಖೇನ ಶಕ್ತಿ ತುಂಬಬೇಕಿದೆ. ಅಭಿವೃದ್ಧಿಗೆ ಪೂರಕವಾಗಿ ಹಲವು ಪ್ರಕ್ರಿಯೆಗಳು ನಡೆಯಬೇಕಿದೆ. ಮುಖ್ಯಮಂತ್ರಿಗಳ ಭೇಟಿ ಕಾರ್ಯಕ್ರಮ ಮಹತ್ವ ಪಡೆದುಕೊಂಡಿದೆ. ಹೀಗಾಗಿ ಅಧಿಕಾರಿಗಳು ಸಕಲ ಸಿದ್ಧತೆಯನ್ನು ತ್ವರಿತವಾಗಿ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಇದೇ ವೇಳೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಮಾತನಾಡಿ, ಕುಡಿಯುವ ನೀರಿನ ಮೂರನೇ ಹಂತ ಯೋಜನೆ ವಿಳಂಬವಾಗಿದೆ. ಇದು ಜಾರಿಗೆ ಬರಬೇಕು. ಸುಸಜ್ಜಿತ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಸ್ಥಳ ಗುರುತಿಸಲಾಗಿದ್ದು ಈ ಕಾರ್ಯ ಚಾಲನೆಗೆ ಬರಬೇಕಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಸ್ಪಂದಿಸಿದ ಸಚಿವರು ಕೂಡಲೇ ಕುಡಿಯುವ ನೀರು ಯೋಜನೆಯ ಕಡತ ಮಂಡಿಸಬೇಕು. ಇದರ ಮುಂದಿನ ಪ್ರಕ್ರಿಯೆಗೆ ನಾನೇ ಕ್ರಮ ವಹಿಸುತ್ತೇನೆ ಎಂದರು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಂಬಂಧ ಸಹ ತ್ವರಿತವಾಗಿ ಕ್ರಮ ತೆಗೆದುಕೊಳ್ಳುವಂತೆ ಕೆಎಸ್‌ಆರ್‌ಟಿಸಿ ಜಿಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಸಚಿವರು ಸೂಚನೆ ನೀಡಿದರು.

ಶಾಸಕರಾದ ಆರ್. ನರೇಂದ್ರ, ಎನ್. ಮಹೇಶ್, ಸಿ.ಎಸ್. ನಿರಂಜನ್ ಕುಮಾರ್ ಅವರು ಮಾತನಾಡಿದರು.

ನಗರಸಭೆ ಅಧ್ಯಕ್ಷರಾದ ಸಿ.ಎಂ. ಆಶಾ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರು ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ದೀಪ ಕಂಟ್ರಾಕ್ಟರ್, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್, ಕೆಶಿಪ್ ಯೋಜನೆಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಕುಮಾರ್ ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಅಪರಾಧಿಗೆ 7 ವರ್ಷ ಸಜೆ, 20,000 ದಂಡ



ಚಾಮರಾಜನಗರ, ಡಿ.3– ಅಪ್ರಾಪ್ತ ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ ಬಲವಂತವಾಗಿ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ ಮಕ್ಕಳ ಸ್ನೇಹಿ ಹಾಗೂ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಪೋಕ್ಸೋ ಕಾಯ್ದೆಯಡಿ 7 ವರ್ಷ ಕಠಿಣ ಶಿಕ್ಷೆ ವಿಧಿಸಿ ಶನಿವಾರ ತೀರ್ಪು ನೀಡಿದೆ.

ತಾಲೂಕಿನ ಮರಿಯಾಲ ಗ್ರಾಮದ ಪುಟ್ಟರಾಜು ಶಿಕ್ಷೆಗೆ ಗುರಿಯಾದ ಅಪರಾಧಿ. ಈತ ನೊಂದ ಅಪ್ರಾಪ್ತ ಬಾಲಕಿಯನ್ನು ಪರಿಚಯ ಮಾಡಿಕೊಂಡು, 2017ರ ಮೇ 8 ರಂದು ಆಕೆಯನ್ನು ಬಲವಂತಪಡಿಸಿ ಬೈಕಿನಲ್ಲಿ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಬಗ್ಗೆ ಚಾ.ನಗರ ಗ್ರಾಮಾಂತರ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ವಿಚಾರಣೆ ವೇಳೆ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ, ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ಎ.ಸಿ. ನಿಶಾರಾಣಿ ಅವರು ಆರೋಪಿ ಪುಟ್ಟರಾಜುವಿಗೆ ಪೋಕ್ಸೋ ಕಾಯ್ದೆಯಡಿ 7 ವರ್ಷ ಕಠಿಣ ಶಿಕ್ಷೆ, 20,000 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಅಲ್ಲದೇ ಕಾನೂನು ಸೇವಾ ಪ್ರಾಧಿಕಾರದಿಂದ ನೊಂದ ಬಾಲಕಿಗೆ ಪರಿಹಾರ ರೂಪದಲ್ಲಿ 2 ಲಕ್ಷ ರೂ. ನೀಡಬೇಕೆಂದು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

ವಿದ್ಯುತ್ ತಂತಿ ತಗುಲಿ ಕಟಾವಿಗೆ ಬಂದಿದ್ದ ಕಬ್ಬಿನ ಬೆಳೆ ಬೆಂಕಿಗಾಹುತಿ

ಕೊಳ್ಳೇಗಾಲ, ಡಿ.3– ವಿದ್ಯುತ್ ತಂತಿ ತಗುಲಿ ಕಟಾವಿಗೆ ಬಂದಿದ್ದ ಕಬ್ಬಿನ ಬೆಳೆ ಸಂಪೂರ್ಣವಾಗಿ ಸುಟ್ಟು ನಾಶವಾಗಿರುವ ಘಟನೆ ತಾಲೂಕಿನ ಹಿತ್ತಲದೊಡ್ಡಿ ಗ್ರಾಮದಲ್ಲಿ ಜರುಗಿದೆ.

ಹಿತ್ತಲದೊಡ್ಡಿ ಗ್ರಾಮದ ನಾಗರಾಜು ಅವರಿಗೆ ಸೇರಿದ ಕುಣಗಳ್ಳಿ ಸರ್ವೆ ನಂ.558 ಹಾಗೂ 559ರ ಸುಮಾರು 2 ಎಕರೆ 15 ಸೆಂಟ್ 16 ತಿಂಗಳು ಬೆಳೆದ ಕಬ್ಬು ಬೆಳೆ ಸುಟ್ಟು ಭಸ್ಮವಾಗಿದೆ. ಹಿತ್ತಲದೊಡ್ಡಿ ಗ್ರಾಮದ ಹೊರಹೊಲದಲ್ಲಿರುವ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಕಬ್ಬು ಬೆಳೆ ಧಗಧಗನೆ ಉರಿಯುತ್ತಿರುವುದನ್ನು ಕಂಡು ಗ್ರಾಮಸ್ಥರು ಅಗ್ನಿಶಾಮಕ ದಳದ ಸಿಬ್ಬಂದಿಗಳನ್ನು ಕರೆಯಿಸಿ ಹಾರಿಸಲು ಯತ್ನಿಸಿದರೂ ಸಹಾ ಬೆಳೆ ಸಂಪೂರ್ಣವಾಗಿ ಸುಟ್ಟು ಹೋಗಿದೆ.

ಈ ಸಂಬಂಧ ಚೆಸ್ಕಾಂ ಇಲಾಖೆಗೆ ದೂರು ಸಲ್ಲಿಸಿದ್ದು ಚೆಸ್ಕಾಂ ಇಂಜಿನಿಯರ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಮಹಜರ್ ನಡೆಸಿದರು. ಜಮೀನು ಮಧ್ಯೆ ಅಳವಡಿಸಿರುವ ವಿದ್ಯುತ್ ಸ್ಥಾವರ(ಟಿ.ಸಿ)ದಿಂದಾಗಿ ಕಬ್ಬು ಬೆಳೆ ನಾಶವಾಗಿದೆ. ಕೂಡಲೇ ಜಮೀನು ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಜಮೀನು ಮಧ್ಯೆ ಇರುವ ಟಿಸಿಗಳನ್ನು ಸ್ಥಳಾಂತರ ಮಾಡಬೇಕು ಎಂದು ಸ್ಥಳೀಯ ರೈತರು ಆಗ್ರಹಿಸಿದರು.

ಕೊಳ್ಳೇಗಾಲ ಪಟ್ಟಣದ ಮೂರು ಕೆರೆಗಳ ಅಭಿವೃದ್ಧಿಗೆ 10 ಕೋಟಿ ರೂ.

ಚಾಮರಾಜನಗರ, ಡಿ.3– ಕೊಳ್ಳೇಗಾಲದ ಮುಕುಟಪ್ರಾಯವೆನಿಸಿರುವ ಚಿಕ್ಕರಂಗನಾಥ ಕೆರೆ, ಕೊಂಗಳ ಕೆರೆ ಮತ್ತು ಮುಡಿಗುಂಡ ಕೆರೆ ಅಭಿವೃದ್ಧಿಗಾಗಿ ಮುಖ್ಯಮಂತ್ರಿಯವರ ವಿಶೇಷ ಅನುದಾನದಡಿ 10 ಕೋಟಿ ರೂ. ಬಿಡುಗಡೆಯಾಗಿದ್ದು, ಈ ಮೂರು ಕೆರೆಗಳ ಅಭಿವೃದ್ಧಿಯನ್ನು ಉತ್ತಮವಾಗಿ ನಿರ್ವಹಿಸಿ ನಗರದ ಆಕರ್ಷಣೀಯ ಕೇಂದ್ರಗಳನ್ನಾಗಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ತಿಳಿಸಿದರು.

ಕೊಳ್ಳೇಗಾಲದ ಚಿಕ್ಕರಂಗನಾಥ ಕೆರೆ ಬಳಿ ಮೂರು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಾಂಕೇತಿಕವಾಗಿ ಭೂಮಿ ಪೂಜೆ ಸಲ್ಲಿಸುವ ಮೂಲಕ ಕಾಮಗಾರಿಗೆ ಅವರು ಚಾಲನೆ ನೀಡಿದರು. ಮುಖ್ಯಮಂತ್ರಿಯವರು ಇದೇ ಡಿ.12ರಂದು ಹನೂರಿನಲ್ಲಿ ಒಟ್ಟಾಗಿ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಅಧಿಕೃತವಾಗಿ ಈ ಎಲ್ಲಾ ಮೂರು ಕೆರೆಗಳ ಅಭಿವೃದ್ಧಿಗೆ ಚಾಲನೆ ನೀಡಲಿದ್ದಾರೆ. ಇಂದು ಸಾಂಕೇತಿಕವಾಗಿ ಪೂಜೆ ನೆರವೇರಿಸಲಾಗಿದೆ. ಅತ್ಯಂತ ಪೂರ್ವ ಕಾಲದ ಕೆರೆಗಳನ್ನ ಸಂರಕ್ಷಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 10 ಕೋಟಿ ರೂ. ವೆಚ್ಚ ಮಾಡಲಾಗುತ್ತದೆ ಎಂದರು.

ಜನರಿಗೆ ಅನುಕೂಲವಾಗಲೆಂದು ನಿರ್ಮಿಸಲಾದ ಕೆರೆಗಳಿಂದ ಉತ್ತಮ, ನೈರ್ಮಲ್ಯ, ಗಾಳಿ ಬರಲಿ ಎಂಬುದು ಆಶಯವಾಗಿತ್ತು. ಆದರೆ ಇಂದು ಕಲುಷಿತ ನೀರು ಕೆರೆಗಳಿಗೆ ಸೇರಿ ದುರ್ವಾಸನೆ ಬೀರುತ್ತಿದೆ. ಇದನ್ನು ತಪ್ಪಿಸಿ ನೈರ್ಮಲ್ಯ ಉಳಿಸಿ ಉತ್ತಮವಾಗಿ ಪೋಷಣೆ ಮಾಡುವ ಉದ್ದೇಶದಿಂದ ಕೆರೆಗಳ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ ಎಂದರು.

ಇಂದು ಕೊಳ್ಳೇಗಾಲ ಪಟ್ಟಣದ ಮುರುಳೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿಯೂ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 1.5 ಕೋಟಿ ರೂ. ಬಿಡುಗಡೆಯಾಗಿದ್ದು, ಕಾಮಗಾರಿಗೆ ಪೂಜೆ ನೆರವೇರಿಸಲಾಗಿದೆ. ಒಟ್ಟಾರೆ ವೇಗವಾಗಿ ಬೆಳೆಯುತ್ತಿರುವ ಕೊಳ್ಳೇಗಾಲ ಪಟ್ಟಣದ ಬೆಳವಣಿಗೆಗೆ ಪೂರಕವಾಗಿ ಎಲ್ಲಾ ನೆರವುಗಳನ್ನು ನೀಡಲಾಗುತ್ತದೆ. ಈ ಅವಿಸ್ಮರಣೀಯ ಒಳ್ಳೆಯ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸಬೇಕೆಂದು ಸಚಿವರು ತಿಳಿಸಿದರು. ಇಲ್ಲಿನ ಜಗಜೀವನ್ ರಾಮ್ ಭವನ ನಿರ್ಮಾಣಕ್ಕೂ 12ಲಕ್ಷ ರೂ. ಕೊಟ್ಟಿದ್ದೇವೆ. ಈ ಭವನದ ನಿರ್ಮಾಣ ಕಾರ್ಯವು ಸಹ ತ್ವರಿತವಾಗಿ ಹಮ್ಮಿಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಿಳಿಸಿದರು. ಶಾಸಕ ಎನ್. ಮಹೇಶ್ ಮಾತನಾಡಿದರು. ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಸುಶೀಲ, ಸದಸ್ಯರಾದ ನಾಸಿರ್ ಷರೀಫ್, ನಾಗಸುಂದ್ರಮ್ಮ, ಪವಿತ್ರ, ಮಾನಸ, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರನಾರಾಯಣ ಗುಪ್ತ, ನಾಮನಿರ್ದೇಶಿತ ಸದಸ್ಯ ಸೋಮಣ್ಣ ಎಸಿ ಗೀತಾ ಹುಡೇದ, ತಹಶೀಲ್ದಾರ್ ಮಂಜುಳಾ, ಪೌರಾಯುಕ್ತೆ ನಂಜುಂಡಸ್ವಾಮಿ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಕೊಳ್ಳೇಗಾಲ ಪಟ್ಟಣದಲ್ಲಿ ವೃತ್ತದಲ್ಲಿ ಸ್ಥಾಪಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಸಚಿವರು ಮಾಲಾರ್ಪಣೆ ಮಾಡಿದರು. ಶಾಸಕ ಎನ್. ಮಹೇಶ್ ಇತರರಿದ್ದರು.

ಆದರ್ಶ ಶಾಲೆಗೆ ಬಸ್ ಸೌಕರ್ಯ, ರಸ್ತೆ ರಿಪೇರಿಗೆ ಒತ್ತಾಯಿಸಿ ವಿದ್ಯಾರ್ಥಿಗಳು, ಪೋಷಕರಿಂದ ರಸ್ತೆ ತಡೆ



ಚಾಮರಾಜನಗರ, ಡಿ.3– ತಾಲೂಕಿನ ಮಲ್ಲಯ್ಯನಪುರ ಗ್ರಾಮದ ಬಳಿ ಇರುವ ಸರ್ಕಾರಿ ಆದರ್ಶ ಶಾಲೆಗೆ ಸಮರ್ಪಕವಾಗಿ ಬಸ್ ಸೌಕರ್ಯ ಕಲ್ಪಿಸಬೇಕು ಹಾಗೂ ಶಾಲೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಸರಿಪಡಿಸುವಂತೆ ಒತ್ತಾಯಿಸಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಪೋಷಕರು ನಗರದಲ್ಲಿ ಶನಿವಾರ ರಸ್ತೆ ತಡೆ ಚಳವಳಿ ನಡೆಸಿದರು.

ನಗರದ ಮೂಡ್ಲುಪುರ ಬಳಿ ನಿರ್ಮಾಣದ ಹಂತದಲ್ಲಿ ಇರುವ ಬೈಪಾಸ್ ಸೇತುವೆ ಬಳಿ ಜಮಾಯಿಸಿದ ನೂರಾರು ವಿದ್ಯಾರ್ಥಿಗಳು ಹಾಗೂ ಪೋಷಕರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಆರಂಭಿಸಿದರು. ಗಂಟೆಗಳ ಕಾಲ ರಸ್ತೆ ತಡೆ ನಡೆಸಿದ್ದರಿಂದ ಚಾಮರಾಜನಗರ– ತೆರಕಣಾಂಬಿ ಮಾರ್ಗದಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಸರ್ಕಾರಿ ಆದರ್ಶ ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳು ನಗರದಿಂದಲೇ ಪ್ರಯಾಣಿಸುತ್ತಾರೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಬೆಳಗ್ಗೆ 9 ಗಂಟೆ ಹಾಗೂ 9.15ಕ್ಕೆ ಬಸ್ ಹೊರಡುತ್ತದೆ. ಶನಿವಾರ ಬೆಳಗ್ಗೆ ಒಂದು ಬಸ್ ಮಾತ್ರ ಬಸ್ ನಿಲ್ದಾಣದಿಂದ ಶಾಲೆಗೆ ಸಂಚರಿಸುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಆಗುತ್ತದೆ. ಒಂದು ಬಸ್‌ನಲ್ಲಿ ನೂರಾರು ವಿದ್ಯಾರ್ಥಿಗಳನ್ನು ತುಂಬಿಕೊಂಡು ಹೋಗಲಾಗುತ್ತಿದೆ. ಇದು ಕೂಡಲೇ ತಪ್ಪಬೇಕು. ಸಮರ್ಪಕವಾಗಿ ಬಸ್‌ಗಳನ್ನು ಬಿಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಶಾಲೆಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳು ರಾಡಿ ಹಿಡಿದಿವೆ. ಇದನ್ನು ಸರಿಪಡಿಸುವಂತೆ ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಎಷ್ಟೇ ಮನವಿ ಮಾಡಿದರೂ ಪ್ರಯೋಜನ ಆಗಿಲ್ಲ. ಮಳೆ ಬಂದಾಗ ವಿದ್ಯಾರ್ಥಿಗಳ ಪರಿಪಾಟಲು ಹೇಳತೀರದಂತಾಗಿದೆ. ಈ ಕೂಡಲೇ ರಸ್ತೆಗಳನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ, ಶಾಲೆಗೆ ಸಮರ್ಪಕ ಬಸ್ ವ್ಯವಸ್ಥೆ ಹಾಗೂ ರಸ್ತೆ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ನಂತರ ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರತಿಭಟನೆಯನ್ನು ಕೈಬಿಟ್ಟು ತೆರಳಿದರು.

ಜಿಂಕೆ ಕೊಂದು ಚರ್ಮ ಮಾರಾಟ ಮಾಡಲೆತ್ನಿಸಿದ ಇಬ್ಬರ ಬಂಧನ



ಕೊಳ್ಳೇಗಾಲ, ಡಿ.3– ಜಿಂಕೆ ಕೊಂದು ಚರ್ಮ ಮಾರಾಟ ಮಾಡಲು ಕೊಂಡೊಯ್ಯುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ ಅವರಿಂದ ಎರಡು ಜಿಂಕೆ ಚರ್ಮ ಹಾಗೂ ಒಂದು ಡಿಯೋ (ಕೆ.ಎ09–ಹೆಚ್.ಇ2934) ಮೋಟಾರ್ ಬೈಕ್, ಎರಡು ಮೊಬೈಲ್‌ನ್ನು ಜಪ್ತಿ ಮಾಡಲಾಗಿದೆ. ನಂಜನಗೂಡು ತಾಲೂಕಿನ ದೊಡ್ಡ ಕವಲಂದೆ ಗ್ರಾಮದ ಇಫ್ತೆಕರ್ ಅಹಮ್ಮದ್ ಖಾನ್(30) ಹಾಗೂ ಅಬ್ದುಲ್ ಮುತ್ತಾಲಿಕ್(30) ಬಂಧಿತರು. ಇವರುಗಳು ತಮ್ಮ ಬೈಕ್‌ನಲ್ಲಿ ಜಿಂಕೆ ಚರ್ಮ ಸಾಗಾಣಿಕೆ ಮಾಡುತ್ತಿರುವುದನ್ನು ಖಚಿತ ಪಡಿಸಿಕೊಂಡ ಅರಣ್ಯ ಸಂಚಾರಿ ದಳದ ಪೊಲೀಸರು (ಎಫ್.ಎಂ.ಎಸ್) ಬಂಧಿಸಿ, ಕಚೇರಿಯಲ್ಲಿ ಪ್ರಕರಣ ದಾಖಲಿಸಿ ಬಂಧಿತ ಆರೋಪಿಗಳನ್ನು ನ್ಯಾಯಾಂಗದ ಮುಂದೆ ಹಾಜರುಪಡಿಸಲಾಗಿದೆ.

ಚಿರತೆ ಹಾವಳಿ; ಗ್ರಾಮಸ್ಥರಿಗೆ ಎಚ್ಚರಿಕೆ ಸಂದೇಶ

ಟಿ.ನರಸೀಪುರ, ಡಿ.3– ತಾಲೂಕಿನ ಕೇತುಪುರ ಗ್ರಾಮದ ವ್ಯಾಪ್ತಿಯಲ್ಲಿ ಚಿರತೆ ಕಾಣಿಸಿಕೊಂಡಿರುವುದರಿಂದ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಗ್ರಾಪಂ ವತಿಯಿಂದ ಮೈಕ್ ಮೂಲಕ ಮನವಿ ಮಾಡಲಾಗುತ್ತಿದೆ. ಕೇತುಪುರ ಗ್ರಾಮಸ್ಥರು ಸಂಜೆ 5 ಗಂಟೆ ನಂತರ ಅನಾವಶ್ಯಕವಾಗಿ ಓಡಾಡಬಾರದು ಹಾಗೂ ತಮ್ಮ ಜಾನುವಾರುಗಳನ್ನು ಮನೆಯಿಂದ ಹೊರಗಡೆ ಕಟ್ಟಿಹಾಕಬಾರದು. ಹಾಗೆಯೇ ಗ್ರಾಪಂ ವ್ಯಾಪ್ತಿಯ ಆಯ್ದ ಸ್ಥಳಗಳಲ್ಲಿ ಅರಣ್ಯ ಸಿಬ್ಬಂದಿ ಮೊಬೈಲ್ ನಂಬರ್ ಪ್ರಕಟಿಸಿದ್ದು, ಚಿರತೆ ಕಾಣಿಸಿದ್ದಲ್ಲಿ ಕೂಡಲೇ ಮಾಹಿತಿ ನೀಡುವಂತೆ ಕೋರಲಾಗುತ್ತಿದೆ.

ಮೂರನೇ ಪುಟದಿಂದ

ಚಿತ್ರಕಲಾ ಶಿಬಿರಕ್ಕೆ ಚಾಲನೆ

ಅದೇ ಮಾದರಿಯಲ್ಲಿ ಬರೆದಿದ್ದರೆ ತಲೆ ಉರುಳುತ್ತಿದ್ದವು. ನಮ್ಮ ಭಾವನೆ ನಾಶವಾಗಿ ಹೋಗುವ ಭಯ ಮನೆ ಮಾಡಿದ್ದು, ಅದು ಕುಕ್ಕರ್ ಬಾಂಬ್ ಮೂಲಕ ಅಡುಗೆ ಮನೆಯನ್ನೂ ಪ್ರವೇಶಿಸಿದೆ ಎಂದು ವಿಷಾದಿಸಿದರು. ಇದೇ ವೇಳೆ ಚಿತ್ರ ಕಲಾವಿದ ಎಲ್.ಶಿವಲಿಂಗಪ್ಪ ಮಾತನಾಡಿ, ಸರ್ವ ಜನಾಂಗವನ್ನು ಒಳಗೊಂಡರೆ ಅದು ಭಾರತೀಯತೆ ಆಗುತ್ತದೆ. ವೈವಿಧ್ಯತೆ ಮತ್ತು ನಂಬಿಕೆಗಳನ್ನು ಕಾಪಾಡಿಕೊಳ್ಳಬೇಕು. ಎಲ್ಲವನ್ನು ಗ್ರಹಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಹೆಚ್ಚಿಸಿಕೊಳ್ಳಬೇಕು. ಮನಸ್ಸು ವಿಶಾಲಗೊಳಿಸಿಕೊಳ್ಳಬೇಕು. ಆಗ ಮಾತ್ರ ಉತ್ತಮ ಕಲಾವಿದ ಹೊರಹೊಮ್ಮುತ್ತಾನೆ ಎಂದರು. ಶಿಬಿರದಲ್ಲಿ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ(ಕಾವಾ) 22 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ವಿವಿಧ ಚಿತ್ರ ರಚನೆಯಲ್ಲಿ ಮಗ್ನರಾಗಿದ್ದಾರೆ. ಈ ಶಿಬಿರಾರ್ಥಿಗಳು ರಚಿಸುವ ಚಿತ್ರಗಳನ್ನು ಬಹುರೂಪಿ ನಾಟಕೋತ್ಸವದಲ್ಲಿ ಪ್ರದರ್ಶಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಕಾವಾ ಆಡಳಿತಾಧಿಕಾರಿ ಹೆಚ್.ಎಂ.ಜಯಶಂಕರ್, 'ಬಹುರೂಪಿ' ಸಂಚಾಲಕ ಜಗದೀಶ್ ಮನವಾರ್ತೆ ಉಪಸ್ಥಿತರಿದ್ದರು.

ವಿಶೇಷಚೇತನರ ನಾನಾ ಪ್ರತಿಭೆ ಪ್ರದರ್ಶನ

ವಿಕಲಚೇತನರು ಕೂಡ ಅನುದಾನವನ್ನು ಸದುಪಯೋಗಪಡಿಸಿಕೊಳ್ಳಿ ಎಂದರು. ನಾನು ಪ್ರೀತಿಯಿಂದ ಇಷ್ಟಪಟ್ಟು ಭಾಗವಹಿಸುವಂತಹ ಕಾರ್ಯಕ್ರಮದಲ್ಲಿ ಈ ವಿಕಲಚೇತನರಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಒಂದು. ಈ ಬಾರಿಯಿಂದ ವಿಕಲಚೇತನರಿಗೆ ಸಾಲಿನಲ್ಲಿ ನಿಲ್ಲುವ ಪ್ರಯಾಸ ಇರುವುದಿಲ್ಲ. ನೇರವಾಗಿ ಹೋಗಿ ಮತದಾನ ಮಾಡುವ ಪ್ರಕ್ರಿಯೆ ಇರುತ್ತದೆ. ಇದಕ್ಕೆ ಚುನಾವಣಾ ಆಯೋಗ ಅವಕಾಶ ಕಲ್ಪಿಸಿದೆ ಎಂದು ತಿಳಿಸಿದರು. ನಂತರ ಮಾತನಾಡಿದ ಅಪರ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ, ಕೆಲವು ದಿನಗಳ ಹಿಂದೆ ನಡೆದ ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯಕ್ರಮದಲ್ಲಿ ವಿಕಲಚೇತನ ಮಕ್ಕಳು ಭಾಗವಹಿಸಿ ನಮ್ಮಲ್ಲಿ ಯಾವುದೇ ರೀತಿಯ ಕೊರತೆ ಇಲ್ಲ ಅನ್ನುವುದನ್ನು ವಿವಿಧ ಆಟ ಆಡುವುದರ ಮೂಲಕ ತೋರಿಸಿ ಕೊಟ್ಟಿದ್ದರು ಎಂದು ಹೇಳಿದರು. ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಮಾತನಾಡಿ ಯಾರು ಸಹ ಯಾರಿಗೂ ಕಡಿಮೆ ಇಲ್ಲ. ನಾವು ಸಹ ನಿಮಗೆ ಸರಿಸಮಾನರು ಎಂಬ ಕಾರ್ಯಕ್ರಮ ವಿಶ್ವದ ಎಲ್ಲೆಡೆ ನಡೆಯುತ್ತಿದೆ. ವಿಕಲ ಚೇತನ ಮಕ್ಕಳು ಯಾವುದಕ್ಕೂ ಕೂಡ ಕಡಿಮೆ ಇಲ್ಲ. ಎಲ್ಲಾ ರೀತಿಯ ಪ್ರತಿಭೆ ನಿಮ್ಮಲ್ಲಿದೆ. ನೀವು ಸಾಧಿಸುತ್ತೀರಾ ಎಂದು ತಿಳಿಸಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾ ರಿಗಳಾದ ಆರ್.ಮಾಲಿನಿ, ಸುಬೇದಾರ್ ಭಗತ್‌ಸಿಂಗ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಎಲ್ಲರೂ ಗೈರು: ಆಹ್ವಾನಿತ ಜನಪ್ರತಿನಿಧಿಗಳೆಲ್ಲಾ ಗೈರಾಗಿದ್ದರು. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು, ನಿಗಮ–ಮಂಡಳಿ ಅಧ್ಯಕ್ಷರು, ಮೇಯರ್, ಉಪಮೇಯರ್ ಬಂದಿರಲಿಲ್ಲ. ಆಮಂತ್ರಣ ಪತ್ರಿಕೆಯಲ್ಲಿ 36 ಹೆಸರಿತ್ತು. ಈ ಪೈಕಿ ಡಿಸಿ, ಎಡಿಸಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರನ್ನು ಹೊರತುಪಡಿಸಿ ಉಳಿದವರೆಲ್ಲರೂ ಗೈರಾಗಿದ್ದರು.

ಕುಟುಂಬಕ್ಕೂ 15 ಲಕ್ಷ ರೂ.ಪರಿಹಾರ

ಮಾತ್ರ ಕಾಡುಪ್ರಾಣಿಗಳ ಹಾವಳಿ ಇತ್ತು. ಈಗ ಬೆಂಗಳೂರಿನ ಆಸುಪಾಸಿನಲ್ಲಿ ಆಗುತ್ತಿರುವುದನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಕಳೆದ ಹಲವಾರು ದಿನಗಳಿಂದ ಚಿರತೆ ಜೀವಂತವಾಗಿ ಹಿಡಿದು ಕಾಡಿಗೆ ಬಿಡಲು ಇಲಾಖೆಗೆ ಸೂಚನೆ ನೀಡಿರುವುದಾಗಿ ತಿಳಿಸಿದರು. ಬೆಂಗಳೂರು ಹಾಗೂ ಮೈಸೂರು ವಲಯದಲ್ಲಿ ಆನೆ ಕಾರಿಡಾರ್ ಸುತ್ತಮುತ್ತ ಚಿರತೆಗಳು ಇವೆ. ಚಿರತೆ ದಾಳಿ ಆಗುತ್ತಿರುವುದನ್ನು ತಡೆಯಲು ವಿಶೇಷ ತಂಡವನ್ನು ರಚಿಸಲಾಗಿದ್ದು, ನಿರ್ದಿಷ್ಟವಾಗಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ. ಅವುಗಳನ್ನು ನಿಯಂತ್ರಿಸಲು ಹಾಗೂ ಕಾಡು ಬಿಟ್ಟು ಆಚೆ ಬಂದಿರುವ ಚಿರತೆಗಳನ್ನು ಹಿಡಿಯಲು ತಂಡ ಕಾರ್ಯಾಚರಣೆ ಮಾಡಲಿದೆ ಎಂದರು.

ಅಮಿತ್ ಷಾ ಮಹತ್ವದ ಸಭೆ

ಬಂದಾಗಲೂ ಒಮ್ಮೆಯೂ ಪೂರ್ಣ ಬಹುಮತ ಗಳಿಸಿಲ್ಲ. ರಾಜ್ಯ ಬಿಜೆಪಿಗೆ 50 ಕ್ಷೇತ್ರಗಳನ್ನು ಗೆಲ್ಲಲೇಬೇಕು ಎಂಬ ಕಟ್ಟಪ್ಪಣೆಯನ್ನು ಅಮಿತ್ ಷಾ ನೀಡಿದ್ದಾರೆ.

ಆದರೆ, 113ರ ಮ್ಯಾಜಿಕ್ ಸಂಖ್ಯೆಯನ್ನು ಇವರ ನಾಯಕತ್ವದಲ್ಲಿ ಮುಟ್ಟಲಾಗುತ್ತಿಲ್ಲ. ಹೀಗಾಗಿ ರಾಷ್ಟ್ರೀಯ ನಾಯಕರೇ ಅಖಾಡಕ್ಕೆ ಇಳಿದು ದಕ್ಷಿಣ ಭಾರತದಲ್ಲಿ ತಮ್ಮ ಖಾತೆ ಉಳಿಸಿಕೊಳ್ಳಲು ಮುಂದಾಗಿದ್ದಾರೆ. ಇದೇ ಉದ್ದೇಶಕ್ಕಾಗಿ ಅಮಿತ್ ಷಾ, ಚುನಾವಣಾ ಪೂರ್ವ ಸಭೆ ಕರೆದಿದ್ದಾರೆ. ಸಭೆಯ ನಂತರ ರಾಜ್ಯದಲ್ಲಿ ದೆಹಲಿ ನಾಯಕರು ಬಿರುಸಿನ ಚುನಾವಣಾ ಪ್ರಕ್ರಿಯೆ ಆರಂಭಿಸಲಿದ್ದಾರೆ. ಡಿಸೆಂಬರ್ 10ರಿಂದಲೇ ಚುನಾವಣಾ ಸಿದ್ಧತೆ ನಡೆಯಲಿದ್ದು, ಇದಕ್ಕಾಗಿ 5 ಚುನಾವಣಾ ಉಸ್ತುವಾರಿ ಕಚೇರಿಗಳು ಆರಂಭವಾಗಲಿದ್ದು, ಇವುಗಳ ಉಸ್ತುವಾರಿ ಹೊಣೆ ಕೇಂದ್ರ ಸಚಿವರಿಗೆ ನೀಡಲಾಗುವುದು.

ಉನ್ನತ ಮಟ್ಟಕ್ಕೆ ಕೊಂಡೊಯ್ಯಿರಿ

ಕಲಿಕೆಗೆ ಆದ್ಯತೆ ನೀಡಬೇಕು. ಸುಧಾರಣೆಗೆ ಸರ್ಕಾರ ಸಿದ್ಧವಾಗಿದೆ. ವಿಕೇಂದ್ರೀಕರಣ, ಪಾರದರ್ಶಕತೆ, ಸ್ವಾಯತ್ತತೆಗೆ ಒತ್ತು ನೀಡುತ್ತಿದೆ ಎಂದು ಅವರು ನುಡಿದರು.

ಆಧುನಿಕ ಜಗತ್ತಿನಲ್ಲಿ ಕೌಶಲ್ಯ ಕಲಿಕೆ ಅತ್ಯವಶ್ಯವಾಗಿರುವುದರಿಂದ ಅದಕ್ಕೆ ಹೆಚ್ಚು ಒತ್ತು ನೀಡಿ ಕುಲಪತಿಗಳು, ಪ್ರಾಧ್ಯಾಪಕರು ಹೆಚ್ಚು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಪ್ರಪಂಚದ ಮಧ್ಯೆ ನಾವು ಸ್ಪರ್ಧೆ ಮಾಡುತ್ತಿದ್ದು, ಜ್ಞಾನ ಮತ್ತು ಕೌಶಲ್ಯದ ಮೂಲಕ ವಿದ್ಯಾರ್ಥಿಗಳನ್ನು ಸಮಾಜಕ್ಕೆ ನೀಡುವತ್ತ ಗಮನಹರಿಸಬೇಕಾಗಿದೆ ಎಂದು ಅವರು ಇದೇ ವೇಳೆ ನುಡಿದರು. 22 ವರ್ಷಗಳ ನಂತರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ್ದೇವೆ. ಈಗಾಗಲೇ 9 ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಪ್ರತೀ ಜಿಲ್ಲೆಗೊಂದರಂತೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಸ್ವಾಯತ್ತತೆ, ಸ್ವಾತಂತ್ರ್ಯ ನೀಡಲು ಸರ್ಕಾರ ಮುಂದಾಗಿದೆ. ಡಿಜಿಟಲೀಕರಣದಂತಹ ಅವಕಾಶವನ್ನು ಬಳಸಿಕೊಂಡು ಮುನ್ನಡೆಯದಿದ್ದರೆ ನಮಗೆ ಉಳಿಗಾಲವಿಲ್ಲ ಎಂದು ಡಾ. ಅಶ್ವತ್ಥನಾರಾಯಣ ನುಡಿದರು. ಸುಶಾಸನ ಕುರಿತು ವಿಷಯ ಮಂಡಿಸಿದ ವಿಶ್ರಾಂತ ಕುಲಪತಿ ಪ್ರೊ ಎಸ್.ಎನ್.ಹೆಗ್ಡೆ ನಾಯಕತ್ವ ಗುಣವುಳ್ಳವರು, ಜ್ಞಾನಿಗಳು ವಿಶ್ವವಿದ್ಯಾನಿಲಯಗಳ ಕುಲಪತಿಗಳಾಗಬೇಕು. ಸೆಮಿ ಕಾರ್ಪೊರೇಟ್ ಸಂಸ್ಕೃತಿಯಿಂದ ಮಾತ್ರ ಯಾವುದೇ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಸಾಧ್ಯ. ಸ್ಕ್ರೀನಿಂಗ್ ಕಮಿಟಿ ಮತ್ತು ಆಯ್ಕೆ ಸಮಿತಿಗಳಿಂದ ಕುಲಪತಿಗಳನ್ನು ಶಿಫಾರಸ್ಸು ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ದಿವ್ಯ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ. ಹೆಚ್.ರಾಜಶೇಖರ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಚಾಣಕ್ಯ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಯಶವಂತ್ ಡೋಂಗ್ರೆ, ಶಾಸಕ ಎಲ್.ನಾಗೇಂದ್ರ, ಕುಲಸಚಿವೆ ವಿ.ಆರ್.ಶೈಲಜ, ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ಹಲಸೆ ಅವರು ಭಾಗವಹಿಸಿದ್ದರು.

ಆಂತರಿಕ ಸಮಸ್ಯೆ ಹೆಚ್ಚಾದರೆ ವಿವಿಗಳ ಗುಣಮಟ್ಟ ಕುಸಿಯುತ್ತದೆ: ಸುತ್ತೂರು ಶ್ರೀಗಳು


ಮೈಸೂರು:ವಿಶ್ವವಿದ್ಯಾನಿಲಯಗಳಲ್ಲಿ ಆಂತರಿಕ ಸಮಸ್ಯೆಗಳು ಹೆಚ್ಚಾದರೆ ಅದರ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತದೆ ಎಂದು ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಿದ್ದ ಉನ್ನತ ಶಿಕ್ಷಣದಲ್ಲಿ 'ಸುಶಾಸನ: ಪರಿಕಲ್ಪನೆ ಮತ್ತು ಅನುಷ್ಠಾನ' ಕುರಿತ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಗುಡ್ ಗವರ್ನನ್ಸ್ ಬಗ್ಗೆ ಅರಿವು ಮೂಡಿಸಲು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರವು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಆದರೆ ಮೈಸೂರಿನ ಅಂದಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಉತ್ತಮ ಆಡಳಿತಕ್ಕೆ ಸೂಕ್ತ ಉದಾಹರಣೆ ಎಂದರು. ಅತ್ಯುತ್ತಮ ಆಡಳಿತ ವ್ಯವಸ್ಥೆ ರೂಪುಗೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅದಕ್ಕೆ ತಕ್ಕಂತೆ ಅವುಗಳ ಶಿಕ್ಷಣದ ಗುಣಮಟ್ಟವೂ ಹೆಚ್ಚಾಗಬೇಕು. ಆಂತರಿಕ ಸಮಸ್ಯೆಗಳಿದ್ದಲ್ಲಿ ಉದ್ದೇಶ ಸಫಲವಾಗುವುದಿಲ್ಲ ಎಂದು ಶ್ರೀಗಳು ನುಡಿದರು. ಪಾರದರ್ಶಕತೆ, ದೂರದೃಷ್ಟಿಯಿಂದ ಪರಿಣಾಮಕಾರಿಯಾಗಿ ಆಡಳಿತ ನಡೆಸಿ ವಿಶ್ವ ಮಟ್ಟದ ಬೋಧನಾ ಕ್ರಮಗಳನ್ನು ಅನುಸರಿಸಿದ್ದಲ್ಲಿ ವಿಶ್ವವಿದ್ಯಾನಿಲಯಗಳು ಶ್ರೇಷ್ಠತೆಯ ಗುರಿ ಮುಟ್ಟಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಶ್ರೀಗಳು ಇದೇ ವೇಳೆ ಕರೆ ನೀಡಿದರು.

ಕಾಂಗ್ರೆಸ್‌ನವರು ಅಧಿಕಾರಕ್ಕೆ ಬರೋಲ್ಲ

ಸಿದ್ರಾಮುಲ್ಲಾಖಾನ್ ಎಂದು ಬದಲಾಯಿಸಿಕೊಳ್ಳುವುದು ಒಳಿತು ಎಂದರು. ಕಾಲಮಿತಿಯೊಳಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುವುದು. ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದ ಅವರು, ಮಂಜೂರಾತಿ ಹುದ್ದೆಗಳಿಗೆ ಮಾತ್ರ ನಾವು ಅನುದಾನ ಕೊಡುತ್ತೇವೆ. ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯಗಳ ಸಂಪನ್ಮೂಲದಲ್ಲೇ ವೇತನ ನೀಡಬೇಕಾಗುತ್ತದೆ ಎಂದರು.

ಸರಗೂರು, ಕೋಟೆ ತಾಲೂಕಿಗೆ ಚರ್ಮಗಂಟು ಸೋಂಕು ಹೊತ್ತು ತಂದ ಗುಜರಾತ್‌ನ 'ಗಿರ್ ಹಸುಗಳು'!



ಮೈಸೂರು ಜಿಲ್ಲೆಯಲ್ಲಿ 2309 ರಾಸುಗಳಿಗೆ ಮಾರಕ ಸೋಂಕು, 86 ಜಾನುವಾರು ಬಲಿ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಡಿ.3– ಆಸೆಪಟ್ಟು ತಂದ ಹಸುಗಳೇ ಸರಗೂರು ಹಾಗೂ ಹೆಚ್.ಡಿ. ಕೋಟೆ ತಾಲೂಕಿನ ರಾಸುಗಳಿಗೆ ಕಂಟಕವಾಗಿ ಪರಿಣಮಿಸಿವೆ. ದೇಶದಾದ್ಯಂತ ಜಾನುವಾರುಗಳ ಕಾಡುತ್ತಿರುವ ಚರ್ಮಗಂಟು ರೋಗವನ್ನು ಗುಜರಾತ್‌ನಿಂದ ಹೊತ್ತು ತಂದ ಈ ಗಿರ್ ತಳಿಯ ಹಸುಗಳು, ಉಭಯ ತಾಲೂಕಿನ 2309ಕ್ಕೂ ಹೆಚ್ಚು ಜಾನುವಾರುಗಳಿಗೆ ಸಂಕಷ್ಟ ತಂದಿವೆ.

ಸರಗೂರು ಹೋಬಳಿಯ ಗ್ರಾಮವೊಂದರ ಮೂವರು ರೈತರು ಗಿರ್ ತಳಿಯ ಹಸುಗಳ ಸಾಕಲು ಬಯಸಿ, ಗುಜರಾತ್‌ನಿಂದ ಆರೇಳು ಹಸುಗಳನ್ನು ತಂದಿದ್ದರು. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಲಕ್ಷಕ್ಕೂ ಅಧಿಕ ಜಾನುವಾರುಗಳ ಮಾರಣಹೋಮಕ್ಕೆ ಕರಣವಾಗಿರುವ ಚರ್ಮಗಂಟು ರೋಗದ ಸೋಂಕು ಪೀಡಿತ ಈ ಗಿರ್ ತಳಿಯ ಹಸುಗಳು ಸರಗೂರು ತಾಲೂಕಿಗೆ ಕಂಟಕವಾಗಿ ಪರಿಣಮಿಸಿವೆ. ಇಲ್ಲಿಗೆ ಬಂದ 20 ದಿನದಲ್ಲೇ ಗಿರ್ ತಳಿಯ ಹಸುಗಳು ಚರ್ಮಗಂಟು ರೋಗದಿಂದ ಉಸಿರು ಚೆಲ್ಲಿವೆ. ಇವು ಸಾಯುವ ಮುನ್ನ ಸ್ಥಳೀಯ ರಾಸುಗಳಿಗೂ ಸೋಂಕು ಹರಡಿವೆ. ಜೊತೆಗೆ ಮೃತಪಟ್ಟ ಗಿರ್ ಹಸುಗಳ ಅಂತ್ಯಕ್ರಿಯೆ ವೇಳೆ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಲೋಪವೆಸಗಿರುವುದು ಸೋಂಕು ಸ್ಫೋಟಗೊಳ್ಳಲು ಕಾರಣವಾಗಿದೆ.

> ಗಂಭೀರ ಸ್ಥಿತಿಯಲ್ಲಿರುವ 80 ಜಾನುವಾರುಗಳ ಜೀವ ರಕ್ಷಿಸಲು ಕ್ರಮಕೈಗೊಳ್ಳಬೇಕು. ತ್ವರಿತಗತಿಯಲ್ಲಿ ಎಲ್ಲಾ ಜಾನುವಾರುಗಳಿಗೂ ಲಸಿಕೆ ಹಾಕಬೇಕು. ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು.
> **ಎನ್.ಜಯರಾಮ್,**
> ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

> ಜಿಲ್ಲೆಯಾದ್ಯಂತ ಚರ್ಮಗಂಟು ಹಾಗೂ ಕಾಲುಬಾಯಿ ರೋಗ ತಡೆಗೆ ಜಾನುವಾರುಗಳಿಗೆ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ. ಗುಣಮುಖವಾಗಿರುವ ಜಾನುವಾರುಗಳ ಆರೋಗ್ಯದ ಮೇಲೂ ನಿಗಾ ಇಡಲಾಗಿದೆ.
> **ಡಾ. ಷಡಕ್ಷರಮೂರ್ತಿ,** ಉಪ ನಿರ್ದೇಶಕ, ಪಶುಸಂಗೋಪನಾ ಇಲಾಖೆ

ಜಿಲ್ಲೆಯಲ್ಲಿ 2,309ಕ್ಕೆ ಸೋಂಕು, 86 ಬಲಿ: ಚರ್ಮಗಂಟು ರೋಗದ ಸೋಂಕು ಇದೀಗ ಜಿಲ್ಲೆಯಾದ್ಯಂತ ಜನ–ಜಾನುವಾರುಗಳಲ್ಲಿ ಭೀತಿ ಮೂಡಿಸಿದೆ. ಚರ್ಮಗಂಟು ರೋಗ ದೇಶ ಮಾತ್ರವಲ್ಲದೆ, ವಿವಿಧ ದೇಶಗಳಲ್ಲೂ ಜಾನುವಾರುಗಳ ಜೀವ ಹಿಂಡುತ್ತಿದೆ. ಎರಡು ತಿಂಗಳ ಅವಧಿಯಲ್ಲೇ ಮೈಸೂರು ಜಿಲ್ಲೆಯಲ್ಲಿ ಗುಜರಾತ್‌ನಿಂದ ತಂದ ಗಿರ್ ತಳಿಯ ಹಸುಗಳಿಂದ ಹರಡಿದ ಚರ್ಮಗಂಟು ರೋಗ 2,309 ಜಾನುವಾರುಗಳನ್ನು ಬಾಧಿಸಿದೆ. ಅದರಲ್ಲಿ 86 ರಾಸುಗಳು ಉಸಿರು ನಿಲ್ಲಿಸಿದ್ದರೆ, ಇನ್ನು 80ಕ್ಕೂ ಹೆಚ್ಚು ಗಂಭೀರ ಸ್ಥಿತಿಯಲ್ಲಿವೆ. ಲಸಿಕೆ ಹಾಗೂ ಸೂಕ್ತ ಚಿಕಿತ್ಸೆ ನೀಡಿದ ಫಲವಾಗಿ 1393 ರಾಸುಗಳು ಗುಣಮುಖವಾಗಿವೆ.

ತಾಲೂಕುವಾರು ಅಂಕಿ ಅಂಶ: ಮೈಸೂರು ಜಿಲ್ಲೆಯ 8 ತಾಲೂಕುಗಳಲ್ಲಿ 283 ಗ್ರಾಮಗಳಲ್ಲಿ ಚರ್ಮ ಗಂಟು ರೋಗ ಪತ್ತೆಯಾಗಿದೆ. ಅದರಲ್ಲಿ ನಂಜನಗೂಡು ತಾಲೂಕಲ್ಲಿ 44 ಗ್ರಾಮದಲ್ಲಿ 220 ಜಾನುವಾರುಗಳಲ್ಲಿ ಸೋಂಕು ಪತ್ತೆಯಾಗಿದ್ದು, 54 ರಾಸುಗಳು ಗುಣಮುಖವಾಗಿದ್ದರೆ, 15 ಹಸುಗಳು ಮೃತಪಟ್ಟಿವೆ. ತಿ.ನರಸೀಪುರ ತಾಲೂಕಲ್ಲಿ 89 ಗ್ರಾಮದಲ್ಲಿ 354 ರಾಸುಗಳಲ್ಲಿ ಸೋಂಕು ಪತ್ತೆಯಾಗಿದ್ದು, ಅದರಲ್ಲಿ 125 ರಾಸುಗಳು ಗುಣಮುಖವಾಗಿದ್ದರೆ, 8 ಬಾಧೆಗೆ ಬಲಿಯಾಗಿವೆ. ಹೆಚ್.ಡಿ.ಕೋಟೆ ತಾಲೂಕಲ್ಲಿ 26 ಗ್ರಾಮಗಳಲ್ಲಿ 66 ಜಾನುವಾರುಗಳಲ್ಲಿ ಸೋಂಕು ಪತ್ತೆಯಾಗಿದ್ದು, 22 ಗುಣಮುಖವಾಗಿ 5 ಮೃತಪಟ್ಟಿವೆ. ಪಿರಿಯಾಪಟ್ಟಣ ತಾಲೂಕಲ್ಲಿ 24 ಗ್ರಾಮಗಳ 50 ಜಾನುವಾರುಗಳಲ್ಲಿ ಸೋಂಕು ಪತ್ತೆಯಾಗಿ, 17 ಗುಣಮುಖವಾಗಿದ್ದು, 1 ಹಸು ಬಲಿಯಾಗಿದೆ. ಸರಗೂರು ತಾಲೂಕಲ್ಲಿ 37 ಗ್ರಾಮದಲ್ಲಿನ 1124 ರಾಸುಗಳಲ್ಲಿ ಸೋಂಕು ಕಂಡು ಬಂದಿದ್ದು, 900 ರಾಸುಗಳು ಚೇತರಿಸಿಕೊಂಡಿದ್ದರೆ, 39 ಸೋಂಕಿಗೆ ಬಲಿಯಾಗಿವೆ. ಹುಣಸೂರು ತಾಲೂಕಲ್ಲಿ 5 ಗ್ರಾಮಗಳ 11 ರಾಸುಗಳಲ್ಲಿ ಸೋಂಕು ಪತ್ತೆಯಾಗಿತ್ತು. ಅವುಗಳಲ್ಲಿ 8 ರಾಸುಗಳು ಸಂಪೂರ್ಣವಾಗಿ ಗುಣಮುಖವಾಗಿದ್ದು, 3 ರಾಸುಗಳು ಚೇತರಿಸಿಕೊಳ್ಳುತ್ತಿವೆ. ಇಲ್ಲಿ ಯಾವುದೇ ರಾಸು ಬಲಿಯಾಗಿಲ್ಲ. ಕೆಆರ್.ನಗರ ತಾಲೂಕಲ್ಲಿ 45 ಗ್ರಾಮಗಳಲ್ಲಿ 411 ಜಾನುವಾರುಗಳಲ್ಲಿ ಚರ್ಮಗಂಟು ರೋಗ ಪತ್ತೆಯಾಗಿತ್ತು. 245 ಗುಣಮುಖಗೊಂಡಿದ್ದು, 17 ಸೋಂಕಿಗೆ ಬಲಿಯಾಗಿವೆ.

830ಕ್ಕೆ ಚಿಕಿತ್ಸೆ, 80 ರಾಸು ಗಂಭೀರ: ಜಿಲ್ಲೆಯಲ್ಲಿ ಸೋಂಕು ಪತ್ತೆಯಾದ 2309 ರಾಸುಗಳಲ್ಲಿ 1393 ರಾಸುಗಳು ಗುಣಮುಖವಾಗಿದ್ದರೆ, 86 ಮೃತಪಟ್ಟಿವೆ. ಉಳಿದ 830 ರಾಸುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅವುಗಳಲ್ಲಿ 80 ರಾಸುಗಳ ಸ್ಥಿತಿ ಚಿಂತಾಜನಕವಾಗಿದ್ದು, ಅವುಗಳ ಜೀವ ಉಳಿಸಲು ಪಶುವೈದ್ಯರ ತಂಡ ಶ್ರಮಿಸುತ್ತಿದೆ.

ಜಿಲ್ಲೆಯಲ್ಲಿ 5.15 ಲಕ್ಷ ರಾಸುಗಳು: ಮೈಸೂರು ನಗರ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆ ನಡೆಸಿದ ಸರ್ವೆಯಲ್ಲಿ 5.15 ಲಕ್ಷ ಜಾನುವಾರುಗಳನ್ನು ಗುರುತಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಚರ್ಮಗಂಟು ರೋಗ ಬಾಧೆ ತಡೆಗಟ್ಟಲು 4 ತಿಂಗಳು ಮೇಲ್ಪಟ್ಟ ಜಾನುವಾರುಗಳಿಗೆ ಮಾತ್ರ ಲಸಿಕೆ ಹಾಕಲಾಗುತ್ತಿದೆ. ಇದರಿಂದ ಜಿಲ್ಲೆಯಲ್ಲಿ ಇದುವರೆಗೂ 2.87 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಲಾಗಿದ್ದು, ಇನ್ನು 2 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಬೇಕಾಗಿದೆ. ಒಂದು ಲಕ್ಷ ಲಸಿಕೆ ದಾಸ್ತಾನು ಮಾಡಲಾಗಿದ್ದು, ಮೂರು ದಿನದಲ್ಲಿ ಇನ್ನೊಂದು ಲಕ್ಷ ಲಸಿಕೆ ಬರಲಿದೆ. ಮುಂದಿನ 10 ದಿನದಲ್ಲಿ ಎಲ್ಲಾ ಜಾನುವಾರುಗಳಿಗೂ ಚರ್ಮಗಂಟು ಸೋಂಕು ಹರಡದಂತೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಅದಕ್ಕಾಗಿ 390 ಮಂದಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪ್ರತಿ 5 ಗ್ರಾಮಗಳಿಗೆ ಒಂದು ತಂಡಕ್ಕೆ ಜವಾಬ್ದಾರಿ ನೀಡಲಾಗಿದೆ.

ಪರಿಹಾರ: ರಾಜ್ಯದಲ್ಲಿ ಚರ್ಮಗಂಟು ರೋಗಕ್ಕೆ ಜಾನುವಾರುಗಳು ಬಲಿಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕಳೆದ ಒಂದು ತಿಂಗಳಿಂದ ಸೋಂಕಿಗೆ ಬಲಿಯಾದ ಜಾನುವಾರುಗಳಿಗೆ ಪರಿಹಾರ ನೀಡಲು ನಿರ್ಧರಿಸಿದೆ. 4 ತಿಂಗಳು ಮೇಲ್ಪಟ್ಟ ಜಾನುವಾರುಗಳಿಗೆ ತಲಾ 5 ಸಾವಿರ ರೂ., ಹಾಲು ಕರೆಯುವ ಹಸುಗಳಿಗೆ 20 ಸಾವಿರ ರೂ., ಉಳುಮೆ ಎತ್ತುಗಳಿಗೆ 30 ಸಾವಿರ ರೂ. ಪರಿಹಾರ ನಿಗದಿಯಾಗಿದೆ

ಡಾ.ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನದ ಪ್ರಯುಕ್ತ

ಡಿ.6ರಂದು ಅಶೋಕಪುರಂನಲ್ಲಿ ಅಂಬೇಡ್ಕರ್ ಭಾವಚಿತ್ರದೊಂದಿಗೆ ಮೇಣದಬತ್ತಿ ದೀಪದ ಮೆರವಣಿಗೆ



ಮೈಸೂರು,ಡಿ.3(ಪಿಎಂ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಅಶೋಕಪುರಂ ಮಹಾಜನತೆ ವತಿಯಿಂದ ಡಿ.6ರಂದು ಅಂಬೇಡ್ಕರ್ ಭಾವಚಿತ್ರದೊಂದಿಗೆ ಮೇಣದಬತ್ತಿ ದೀಪದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಅಶೋಕಪುರಂ ನಿವಾಸಿಯೂ ಆದ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಷಿತ ವರ್ಗಗಳ ಉನ್ನತಿಗೆ ತಮ್ಮ ಇಡೀ ಜೀವನ ಮುಡಿಪಾಗಿಟ್ಟ ಮಹಾನ್ ರಾಷ್ಟ್ರನಾಯಕ ಡಾ.ಬಿ.ಆರ್.ಅಂಬೇಡ್ಕರ್ ಅವರು 1956ರ ಡಿ.6ರಂದು ನಮ್ಮೆಲ್ಲರನ್ನು ಅಗಲಿ ಇದೇ ಡಿ.6ಕ್ಕೆ 66 ವರ್ಷಗಳಾಗಲಿವೆ. ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನವನ್ನು ಕಳೆದ 10 ವರ್ಷಗಳಿಂದ ನಿರಂತರವಾಗಿ ಅಶೋಕಪುರಂ ಜನತೆ ಆಚರಿಸಿಕೊಂಡು ಬರುತ್ತಿದೆ. ಅಂತೆಯೇ ಈ ವರ್ಷವೂ 10 ಸಾವಿರ ಜನ ಸೇರಿ ಮೆರವಣಿಗೆ ನಡೆಸಲಿದ್ದೇವೆ ಎಂದರು.

ಅಂದು ಸಂಜೆ 6ಕ್ಕೆ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಿಂದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಮೇಣದಬತ್ತಿ ದೀಪದ ಮೆರವಣಿಗೆ ಆರಂಭಗೊಳ್ಳಲಿದೆ. ಬಳಿಕ ಅಶೋಕಪುರಂನ ಎಲ್ಲಾ ಮುಖ್ಯ ರಸ್ತೆಗಳಲ್ಲಿ ಸಾಗಿ ಅಂತಿಮವಾಗಿ ಅಂಬೇಡ್ಕರ್ ಉದ್ಯಾನವನಕ್ಕೆ ಹಿಂತಿರುಗಲಿದೆ ಎಂದು ತಿಳಿಸಿದರು.

ಅಶೋಕಪುರಂ ಮುಖಂಡ ಮತ್ತು ಲೇಖಕ ಸಿದ್ದಸ್ವಾಮಿ ಮಾತನಾಡಿ, ಅಲಂಕೃತ ಪುಷ್ಪ ರಥದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಮೆರವಣಿಗೆಗೂ ಮುನ್ನ ಅಂಬೇಡ್ಕರ್ ಅವರು ಸ್ವೀಕರಿಸಿದ ಬೌದ್ಧ ಧಮ್ಮ ದೀಕ್ಷಾ ವಿಧಿಗಳ ಬೋಧನೆ ಕಾರ್ಯಕ್ರಮ ನಡೆಯಲಿದೆ. ಮತದಾರರ ಪಟ್ಟಿಯಿಂದ ಉದ್ದೇಶಪೂರ್ವಕವಾಗಿ ಹೆಸರುಗಳನ್ನು ತೆಗೆದು ಹಾಕುತ್ತಿರುವ ಬಗ್ಗೆ ಸಾಕಷ್ಟು ವರದಿಗಳಾಗುತ್ತಿವೆ ಎಂದರು. ಪತ್ರಿಕೆ ವಿತರಕರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ, ಮುಖಂಡರಾದ ವಿಷ್ಣು ಪ್ರಸಾದ್, ಬಬಿತಾ ಗೋಷ್ಠಿಯಲ್ಲಿದ್ದರು.

> ಕೇಂದ್ರ ಸರ್ಕಾರವು ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರದ್ದುಗೊಳಿಸಿದೆ. ಇದು ಖಂಡನೀಯ. ಸಾವಿರಾರು ವರ್ಷಗಳಿಂದ ಶಿಕ್ಷಣ ವಂಚಿತವಾಗಿದ್ದ ಸಮುದಾಯಗಳಿಗೆ ಶಿಕ್ಷಣ ದೊರೆತಿರುವುದನ್ನು ಇವರಿಗೆ ಸಹಿಸಲಾಗುತ್ತಿಲ್ಲ. ಯಾವುದೇ ಕಾರಣಕ್ಕೂ ಈ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ರದ್ದುಗೊಳಿಸಬಾರದು.
> -**ಪುರುಷೋತ್ತಮ್**

ಡಿ.6ರಂದು ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ



ಮೈಸೂರು,ಡಿ.3(ಪಿಎಂ)– ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ.6ರಂದು ಶ್ರೀ ಹನುಮದ್ ವ್ರತದ ಪ್ರಯುಕ್ತ ವಿವಿಧ ಪೂಜಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠಾಧೀಶ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಅನುಗ್ರಹ ಮತ್ತು ಆದೇಶದಂತೆ ಈ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 6ಕ್ಕೆ ನಿರ್ಮಾಲ್ಯ ವಿಸರ್ಜನೆ, 7ಕ್ಕೆ ಪಂಚಾಮೃತ ಅಭಿಷೇಕ, 8ಕ್ಕೆ ಮಧು ಅಭಿಷೇಕ, 9ಕ್ಕೆ ಪವಮಾನ ಹೋಮ ಮತ್ತು ನವಗ್ರಹ ಹೋಮ ನಡೆಯಲಿವೆ. ನಂತರ ಬೆಳಗ್ಗೆ 11.30ಕ್ಕೆ ಪಲ್ಲಕ್ಕಿ ಉತ್ಸವ ಜರುಗಲಿದ್ದು, ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ ನಡೆಯಲಿದೆ ಎಂದರು.

ಮಧ್ಯಾಹ್ನ 12.30ಕ್ಕೆ 2 ಸಾವಿರ ಜನರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಸಂಜೆ 5ಕ್ಕೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅನಂತ ಕುಲಕರ್ಣಿ ಅವರಿಂದ ಗಾನಲಹರಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ಸಂಜೆ 6ಕ್ಕೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಮೈಸೂರಿನ ಶ್ರೀ ಉತ್ತರಾದಿ ಮಠದ ವ್ಯವಸ್ಥಾಪಕ ಪಂ.ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳ ಸಾಧಕರಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅನಂತ ಕುಲಕರ್ಣಿ, ವೈದ್ಯ ಡಾ.ಸಂಜೀವರಾವ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಮಾಜ ಸೇವಕ ವಿಕ್ರಂ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಗುವುದು. ಅಂದು ವಿವಿಧ ಪೂಜಾ ಕೈಂಕರ್ಯಗಳ ಸೇವೆ ಮಾಡಿಸಲು ದಾನಿಗಳು ಮೊ.ಸಂ. 96869 78861 ಅನ್ನು ಸಂಪರ್ಕಿಸಬಹುದು ಎಂದರು. ದೇವಸ್ಥಾನದ ಪ್ರಧಾನ ಅರ್ಚಕ ನಾಗಭೂಷಣ್, ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಬಿ.ವಾಸುದೇವಮೂರ್ತಿ, ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ಕಾರ್ಯದರ್ಶಿ ಎಸ್.ರವಿಕುಮಾರ್ ಗೋಷ್ಠಿಯಲ್ಲಿದ್ದರು.

ಜೆಎನ್‌ಯು ಕ್ಯಾಂಪಸ್‌ನಲ್ಲಿ ಬ್ರಾಹ್ಮಣ ಸಮುದಾಯ ಕುರಿತು ಅವಹೇಳನ ಗೋಡೆ ಬರಹ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಖಂಡಿಸಿ ಬ್ರಾಹ್ಮಣ ಸಮುದಾಯ ಪ್ರತಿಭಟನೆ



ಮೈಸೂರು,ಡಿ.3(ಪಿಎಂ)–ದೆಹಲಿಯ ಜೆಎನ್‌ಯು ವಿವಿ ಆವರಣದಲ್ಲಿ ಬ್ರಾಹ್ಮಣ ಸಮುದಾಯ ಕುರಿತಂತೆ ಬರೆದಿರುವ ಅವಹೇಳನಕಾರಿ ಗೋಡೆ ಬರಹ ಹಾಗೂ ಮೇಲ್ವರ್ಗದ ಶೇ.10ರಷ್ಟು ಮೀಸಲಾತಿ ಕುರಿತಂತೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯನವರ ಹೇಳಿಕೆ ಖಂಡಿಸಿ ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘ, ಮೈಸೂರು ಬ್ರಾಹ್ಮಣ ಸಂಘಟನೆಗಳ ಒಕ್ಕೂಟದ ಜಂಟಿ ಆಶ್ರಯದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯ ಎದುರಿನ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಜೆಎನ್‌ಯು ಆವರಣದ ಗೋಡೆಗಳ ಮೇಲೆ ಬ್ರಾಹ್ಮಣ ಸಮುದಾಯ ಕುರಿತಂತೆ ಅವಹೇಳನಕಾರಿಯಾಗಿ ಘೋಷ ವಾಕ್ಯಗಳನ್ನು ಬರೆದಿರುವ ಕಿಡಿಗೇಡಿಗಳನ್ನು ಬಂಧಿಸಿ ಕಠಿಣಕ್ರಮ ಕೈಗೊಳ್ಳಬೇಕು. 144 ಮೇಲ್ಜಾತಿಗಳಿಗೆ ನೀಡಿರುವ ಶೇ.10ರಷ್ಟು ಮೀಸಲಾತಿ ಸೌಲಭ್ಯವನ್ನು ಕೇವಲ ಬ್ರಾಹ್ಮಣ ಸಮುದಾಯಕ್ಕೆ ನೀಡಿದೆ ಎನ್ನುವಂತೆ ಹೇಳಿಕೆ ನೀಡಿರುವ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಿರುದ್ಧವೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಬ್ರಾಹ್ಮಣ ಜನಾಂಗ ಕುರಿತು ಕೆಲವರು ಪದೇ ಪದೆ ಅವಹೇಳನ ಹೇಳಿಕೆ ನೀಡುವ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗಷ್ಟೇ ಪ.ಮಲ್ಲೇಶ್, ಬ್ರಾಹ್ಮಣ ಜನಾಂಗದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿ, ರಾಜ್ಯದಲ್ಲಿ ಬ್ರಾಹ್ಮಣ ಸಮುದಾಯ ಭುಗಿಲೇಳುವಂತೆ ಮಾಡಿದ್ದರು ಎಂದು ಕಿಡಿಕಾರಿದರು.

ಈಗ ಮುಂದುವರೆದು ಬ್ರಾಹ್ಮಣ ಸಮುದಾಯ ಕೇವಲ ಶೇ.3ರಷ್ಟು ಜನಸಂಖ್ಯೆ ಹೊಂದಿದ್ದರೂ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ ಎಂದು ಡಾ.ಯತೀಂದ್ರ ಸಿದ್ಧರಾಮಯ್ಯ ತಪ್ಪಾಗಿ ಹೇಳಿಕೆ ನೀಡಿದ್ದಾರೆ. ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ 144ಕ್ಕೂ ಹೆಚ್ಚು ಮೇಲ್ಜಾತಿಗಳಿಗೆ ಶೇ.10ರಷ್ಟು ಮೀಸಲಾತಿ ಕಲ್ಪಿಸಿದ್ದು, ಇದನ್ನು ಸುಪ್ರಿಂಕೋರ್ಟ್ ಸಹ ಸಮ್ಮತಿಸಿದೆ. ಆದರೆ ಶಾಸಕ ಡಾ.ಯತೀಂದ್ರ ಸಿದ್ಧರಾಮಯ್ಯರಿಗೆ ಇದರ ಬಗ್ಗೆ ಕನಿಷ್ಠ ಜ್ಞಾನವು ಇಲ್ಲದಂತೆ ಮಾತನಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಡಾ.ಯತೀಂದ್ರ ಸಿದ್ದರಾಮಯ್ಯ ತಮ್ಮ ಹೇಳಿಕೆ ಹಿಂಪಡೆದು ಸರ್ಕಾರ ಮತ್ತು ಸುಪ್ರಿಂಕೋರ್ಟ್ ತೀರ್ಪನ್ನು ಸರಿಯಾಗಿ ಅರ್ಥೈಸಿಕೊಂಡು ಸಾರ್ವಜನಿಕರಿಗೂ ತಿಳಿಸಬೇಕು ಎಂದು ಒತ್ತಾಯಿಸಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಾಜ್ಯ ನಿರ್ದೇಶಕ ಎಂ.ಆರ್.ಬಾಲಕೃಷ್ಣ, ಶ್ರೀ ಇಳೈಆಳ್ವಾರ್ ಸ್ವಾಮೀಜಿ, ಲೇಖಕರು ಡಾ.ರಂಗನಾಥ್, ನಗರ ಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಮುಖಂಡರಾದ ಅಜಯ್‌ಶಾಸ್ತ್ರಿ, ರಾಕೇಶ್ ಭಟ್, ಮುಳ್ಳೂರು ಗುರುಪ್ರಸಾದ್, ಕಡಕೋಳ ಜಗದೀಶ್, ಜಯಸಿಂಹ, ಶ್ರೀಧರ್, ರಂಗನಾಥ್, ವಿಕಾಸ್ ಶಾಸ್ತ್ರಿ, ಸುಧೀಂದ್ರ, ಓಂಶ್ರೀನಿವಾಸ್, ಅಪೂರ್ವ ಸುರೇಶ್, ಮಿರ್ಲೆ ಪುನೀತ್, ವಾಸುದೇವ್ ಮೂರ್ತಿ, ಮಂಜುನಾಥ್, ಸುಚೇಂದ್ರ, ಪ್ರಶಾಂತ್, ವಿಘ್ನೇಶ್ವರ ಭಟ್, ಸುದರ್ಶನ್, ಶ್ರೀನಿವಾಸ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾರು ಡಿಕ್ಕಿಯಾಗಿ ತಾತ ಸಾವು; ಮೊಮ್ಮಗನಿಗೆ ಗಾಯ

ಪಿರಿಯಾಪಟ್ಟಣ, ಡಿ.3–ಕಾರು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸಾವನ್ನಪ್ಪಿ, ಬಾಲಕ ಗಾಯಗೊಂಡ ಘಟನೆ ಪಿರಿಯಾಪಟ್ಟಣ ತಾಲೂಕು ಕೀರನಹಳ್ಳಿ ಗ್ರಾಮದಲ್ಲಿ ಗುರುವಾರ ಸಂಭವಿಸಿದೆ. ಗ್ರಾಮದ ಸಿದ್ದರಾಮೇಗೌಡ (60) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಅವರ ಮೊಮ್ಮಗ ಯಶವಂತ(8) ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಿದ್ದರಾಮೇಗೌಡರು ಡಿ.1ರಂದು ಸಂಜೆ ತಮ್ಮ ಮೊಮ್ಮಗ ಯಶವಂತನೊಂದಿಗೆ ಚಿಕನ್ ಅಂಗಡಿಗೆ ಹೋಗುತ್ತಿದ್ದ ವೇಳೆ ಪಿರಿಯಾಪಟ್ಟಣ ಕಡೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಮಾರುತಿ ಸುಜುಕಿ ಕಾರು ಇವರಿಬ್ಬರಿಗೂ ಡಿಕ್ಕಿ ಹೊಡೆದಿದೆ. ಸಿದ್ದರಾಮೇಗೌಡರು ಸ್ಥಳದಲ್ಲೇ ಸಾವನ್ನಪ್ಪಿದರೆ, ಗಾಯಗೊಂಡ ಅವರ ಮೊಮ್ಮಗ ಯಶವಂತನನ್ನು ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಪಿರಿಯಾಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ

ವಿದ್ಯಾರ್ಥಿವೇತನ ರದ್ದು ಖಂಡಿಸಿ ದಸಂಸ ಪ್ರತಿಭಟನೆ



ಮೈಸೂರು,ಡಿ.3(ಪಿಎಂ)– ಕೇಂದ್ರ ಸರ್ಕಾರವು ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರದ್ದುಗೊಳಿಸಿರುವ ಕ್ರಮ ಖಂಡಿಸಿ ದಲಿತ ಸಂಘರ್ಷ ಸಮಿತಿ (ದಸಂಸ) ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ವಿದ್ಯಾರ್ಥಿವೇತನ ರದ್ದುಗೊಳಿಸಿರುವುದನ್ನು ಹಿಂಪಡೆಯಬೇಕು. ಜೊತೆಗೆ ವಿದ್ಯಾರ್ಥಿ ವೇತನ ಮೊತ್ತವನ್ನು ಮತ್ತಷ್ಟು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ಯಾವುದೇ ದೇಶ ಸದೃಢವಾಗಿ ರೂಪುಗೊಂಡು ಪ್ರಗತಿ ಸಾಧಿಸಬೇಕಾದರೆ ಶಿಕ್ಷಣ ಅತೀ ಮುಖ್ಯ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಜಾರಿಯಲ್ಲಿದ್ದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬ್ರಾಹ್ಮಣ ಮಹಿಳೆಯರೂ ಸೇರಿದಂತೆ ಶೂದ್ರ ಆದಿವಾಸಿ, ಅಸ್ಪೃಶ್ಯ ಸೇರಿದಂತೆ ಇನ್ನಿತರ ಹಿಂದುಳಿದ ವರ್ಗಗಳನ್ನು ಶಿಕ್ಷಣದಿಂದ ವಂಚಿಸಲಾಗಿತ್ತು. ನಂತರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಸಂವಿಧಾನದಲ್ಲಿ ಅಳವಡಿಸಿದ ಕಾರಣಕ್ಕೆ ಈ ವರ್ಗಗಳು ಶೈಕ್ಷಣಿಕವಾಗಿ ಮುನ್ನೆಲೆಗೆ ಬರುವಂತಾಯಿತು. ಆದರೆ ಈಗ ಕೇಂದ್ರ ಬಿಜೆಪಿ ಸರ್ಕಾರ ದಮನಿತ ವರ್ಗಗಳ ಶಿಕ್ಷಣದ ಹಕ್ಕನ್ನು ಕಸಿಯಲು ಹೊರಟಿದೆ ಎಂದು ಆರೋಪಿಸಿದರು.

ಶೈಕ್ಷಣಿಕ ಸಾಮಗ್ರಿಗಳನ್ನು ಕೊಳ್ಳಲು ಸಹಾಯವಾಗಲೆಂದು ಸರ್ಕಾರಗಳು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ವಿದ್ಯಾರ್ಥಿವೇತನ ನೀಡುತ್ತಾ ಬಂದಿವೆ. ಆದರೆ ಇದೀಗ ಕೇಂದ್ರ ಸರ್ಕಾರ 1ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನವನ್ನು ಏಕಾಏಕಿ ರದ್ದುಗೊಳಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ದುರ್ಬಲ ವರ್ಗದ ಮಕ್ಕಳು ಶಿಕ್ಷಣದಿಂದ ವಿಮುಖರಾಗಿ ಗುಲಾಮಗಿರಿಗೆ ಸಿಲುಕುವಂತೆ ಮಾಡುವ ಹುನ್ನಾರ ನಡೆಸುತ್ತಿದೆ. ಅದಕ್ಕಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಾ ಖಾಸಗಿ ಶಾಲೆಗಳಿಗೆ ಉತ್ತೇಜನ ನೀಡುತ್ತಿದೆ. ರಾಜ್ಯ ಬಿಜೆಪಿ ಸರ್ಕಾರವೂ ಪಠ್ಯ ಪುಸ್ತಕ ಪರಿಷ್ಕರಣೆ ನೆಪದಲ್ಲಿ ಪ್ರತಿಗಾಮಿ ವಿಚಾರಗಳನ್ನು ತಿರುಕುತ್ತಿದೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಶಿಕ್ಷಣ ಕೇಸರೀಕರಣಕ್ಕೆ ಮುಂದಾಗಿವೆ. ಮನುವಾದಕ್ಕೆ ಮರು ಹುಟ್ಟುಕೊಡಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿವೆ ಎಂದು ದೂರಿದರು.

ದಸಂಸ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಹಾರೋಹಳ್ಳಿ ನಟರಾಜು, ಮುಖಂಡರಾದ ಉಗ್ರನರಸಿಂಹೇಗೌಡ, ಬಿಳಿಕೆರೆ ದೇವರಾಜು, ದ್ಯಾವಪ್ಪನಾಯಕ, ಮುರುಡುಗಳ್ಳಿ ಮಹದೇವ್, ಸೋಮನಾಯಕ, ಕಂದೇಗಾಲು ಶಿವಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
4-12-2022



ದಸರಾ ವಸ್ತುಪ್ರದರ್ಶನ ಆವರಣದ 19ನೇ ಶತಮಾನದ ವೀರಾಂಜನೇಯ ದೇವಾಲಯಕ್ಕೆ ನವರೂಪ

"ಡಿಸೆಂಬರ್ 5ರಂದು, ಸೋಮವಾರ ಬೆಳಗ್ಗೆ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಮತ್ತು ಶ್ರೀ ಸಾಂಬಸದಾಶಿವ ದೇವಸ್ಥಾನದ ಜೀರ್ಣೋದ್ಧಾರದ ಅಂಗವಾಗಿ ಪುಣ್ಯಾಹ, ಗಣಪತಿ ಹೋಮ, ನವಗ್ರಹ ಹೋಮ, ಶಾಂತಿ, ಶ್ರೀ ರಾಮತಾರಕ ಹೋಮ, ಪೂರ್ಣಾಹುತಿ ಧಾರ್ಮಿಕ ವಿಧಿವಿಧಾನಗಳನ್ನು ಏರ್ಪಡಿಸಲಾಗಿದೆ.




ಮಿರ್ಲೆ ಶ್ರೀನಿವಾಸಗೌಡ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್

ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಪುರಾತನ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನವಿದೆ.

ಮೈಸೂರು ಸಾಂಸ್ಕೃತಿಕ ರಾಜಧಾನಿ ಮತ್ತು ಪಾರಂಪರಿಕ ನಗರ. ಇಲ್ಲಿ ಯಾವ ಮೂಲೆಯಲ್ಲಿ ನೋಡಿದರೂ ಇತಿಹಾಸದ ಭಾಗವೊಂದು ತೆರೆದುಕೊಳ್ಳುತ್ತದೆ. ಇತಿಹಾಸದ ಅದೆಷ್ಟೋ ವಿಷಯಗಳು ಅವಿತುಕೊಂಡಿವೆ. ಈ ಒಡಲಿನ ಆಳಕ್ಕೆ ಹೋಗಿ ಅಧ್ಯಯನ ಮಾಡಿದಾಗ ರೋಚಕವಾದ ಹೊಸ ಹೊಸ ವಿಷಯಗಳು ನಮ್ಮ ಅನುಭವಕ್ಕೆ ಬರುತ್ತವೆ. ಅಂತಹುದೇ ಒಂದು ದೇವಾಲಯ ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿದ್ದು, ಅದೆಷ್ಟೋ ಜನರಿಗೆ ಇದರ ಬಗ್ಗೆ ಅರಿವೇ ಇಲ್ಲ.

ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ಒಂದು ವೀರಾಂಜನೇಯ ಸ್ವಾಮಿ ದೇವಾಲಯವನ್ನು ವೀಣಾ ವೆಂಕಟಸುಬ್ಬಯ್ಯನವರ ಪತ್ನಿಯಾದ ವೆಂಕಮ್ಮನವರು 11-05-1840ರಲ್ಲಿ ನಿರ್ಮಿಸಿದ್ದು, ಇದು ಶಾಸನೋಕ್ತ ದೇವಾಲಯವಾಗಿದೆ. ಈ ಶಾಸನವು ಅಪ್ರಕಟಿತವಾಗಿದ್ದು, ಒಂದು ಕಾಲದಲ್ಲಿ ಜೀವಂತವಾಗಿದ್ದ ದೇವರಾಜಸಮುದ್ರ ಎಂಬ ದೊಡ್ಡಕೆರೆ ಏರಿಯ ಭಾಗದಲ್ಲಿ ಈ ದೇವಾಲಯವನ್ನು ಅಂದಿನ ಸಂಧ್ಯಾಕಾರ್ಯಗಳು, ದೇವತಾಕಾರ್ಯಗಳು, ಮತ್ತಿತರ ಅಗತ್ಯ ಹಾಗೂ ವೀಣಾ ವೆಂಕಟಸುಬ್ಬಯ್ಯ ಮತ್ತು ವೆಂಕಮ್ಮ ದಂಪತಿಗೆ ಶಾಶ್ವತವಾಗಿ ವಿಷ್ಣುಲೋಕ ಸಿದ್ಧಿಸಲಿ ಎಂಬ ಆಶಯದಿಂದ ಈ ದೇವಾಲಯ ನಿರ್ಮಿತವಾಗಿತ್ತು. ಈಗ ಈ ಭಾಗವು ಪಾಳು ಬಿದ್ದಂತೆ ಆಗಿತ್ತು.

ಹಾಲಿ ದೇವಾಲಯವು ವಸ್ತುಪ್ರದರ್ಶನ ಆವರಣದ ಒಳಗೆ ಇದ್ದು, ಈಗ ಇರುವ ಕರ್ನಾಟಕ ಸರ್ಕಾರದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಬಲಭಾಗದಲ್ಲಿ ಇದೆ. ಈ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಒಂದು ಕಬ್ಬಿಣದ ಕಮಾನು ಇದ್ದು ಅದರಲ್ಲಿ ಸಾಂಬಶಿವ ಮತ್ತು ಅಭಯಾಂಜನೇಯ ದೇವಾಲಯ ಎಂದು ಬರೆಯಲಾಗಿದೆ. ಈ ಕಮಾನಿನ ದಾರಿಯಲ್ಲಿ ಒಂದು ಐವತ್ತು ಹೆಜ್ಜೆ ಮುಂದೆ ಸಾಗಿದರೆ ನಮಗೆ ಹಲವು ಸೋಪಾನಗಳು ಸಿಗುತ್ತವೆ. ಆ ಮೆಟ್ಟಿಲುಗಳನ್ನು ಹತ್ತಿ ಮುಂದೆ ಹೋದರೆ ದೇವಾಲಯ ವಿಶಾಲವಾದ ತೆರೆದ ಪ್ರಾಂಗಣವು ಸಿಗುತ್ತದೆ. ಈ ಪ್ರಾಂಗಣದಲ್ಲಿ ಈಗ ಮೇಲ್ಛಾವಣಿಯನ್ನು ಹಾಸಿ, ನಾಲ್ಕು ಕಡೆಗಳ ಗೋಡೆಗಳಿಂದ ಒಂದು ವಿಶಾಲವಾದ ಹಾಲ್ (ಕೊಠಡಿ) ಸಿದ್ಧವಾಗಿದ್ದು, ಹಳೆಯ ಕಸಗಳನ್ನೆಲ್ಲಾ ಶುದ್ಧೀಕರಿಸಿ ಹೊಸ ರೂಪವನ್ನು ನೀಡಲಾಗಿದೆ. ಈ ಪ್ರಾಂಗಣದಲ್ಲಿ ಪ್ರಾಚೀನ ಕಾಲದ ಗಚ್ಚುಗಾರೆಯ ವೃಂದಾವನವಿದ್ದು ಅಲ್ಲಿ ತುಳಸಿಯನ್ನು ನೆಡಲಾಗಿದೆ. ಈ ಪ್ರಾಂಗಣದಿಂದ ಒಳಗೆ ಶ್ರೀ ವೀರಾಂಜನೇಯ ಸ್ವಾಮಿಯ ದೇವಾಲಯವಿದ್ದು, ಅದನ್ನು ಫಲಕದಲ್ಲಿ ಅಭಯಾಂಜನೇಯ ಎಂದು ಮೂಲವಲ್ಲದ ಬೇರೆಯ ಹೆಸರಿನಲ್ಲಿ ಕರೆಯಲಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ನವರಂಗದ ರಚನೆಗಳಿದ್ದು, ನವರಂಗದ ಮುಂದೆ, ಆಗಲೇ ವರ್ಣಿಸಿದ ಹಾಲ್‌ನಂತಹ ಪ್ರಾಂಗಣವಿದೆ. ಗರ್ಭಗೃಹದಲ್ಲಿ ಸುಮಾರು 5 ಅಡಿ ಎತ್ತರದ ವೀರ ಆಂಜನೇಯ ಸ್ವಾಮಿಯ ಪ್ರಾಚೀನ ವಿಗ್ರಹವಿದೆ. ದೇವರ ಮೂರ್ತಿಯು ಪೀಠದ ಮೇಲೆ ಕೆತ್ತಲ್ಪಟ್ಟಿದ್ದು, ಮೈಸೂರು ಅರಸರ ಶೈಲಿಯಲ್ಲಿ ಕಂಡರಿಸಲಾಗಿದೆ. ವಿಗ್ರಹದಲ್ಲಿಯೇ ಪ್ರಭಾವಳಿ ಇದ್ದು, ಪ್ರಭಾವಳಿಯ ಮಧ್ಯಭಾಗದಲ್ಲಿ ಶ್ರೀ ವೀರಾಂಜನೇಯ ಸ್ವಾಮಿಯನ್ನು ಪಡಿಮೂಡಿಸಲಾಗಿದ್ದು, ಬಲಗೈಯನ್ನು ಎತ್ತಿ ವೀರಮುದ್ರೆ (ಅಗಲಿಸಿ ಮೇಲೆ ಎತ್ತಿದ ಅಂಗೈ)ಯಲ್ಲಿದ್ದು, ಎಡಗೈ ಸೊಂಟದ ಮೇಲಿದ್ದು ಸೌಗಂಧಿಕಾ ಪುಷ್ಪವನ್ನು ಹಿಡಿದಿದ್ದಾನೆ. ಸೌಗಂಧಿಕಾ ಪುಷ್ಪದ ದಂಟಿನಲ್ಲಿ ಮೇಲ್ಭಾಗದಲ್ಲಿ ಮೂರು, ಕೆಳಭಾಗದಲ್ಲಿ ಒಂದು ತೆನೆಗಳಿರುವುದನ್ನು ಗಮನಿಸಬಹುದು. ಹನುಮಂತನು ಶಿಖಾಬದ್ಧನಾಗಿದ್ದು, ಉತ್ತರದ ಮುಖವನ್ನು ನೋಡುತ್ತಿದ್ದಾನೆ. (ಗರ್ಭಗೃಹದ ಮುಖ ಪೂರ್ವಕ್ಕಿದೆ) ಆಂಜನೇಯನ ಶರೀರದಲ್ಲಿ ಅನೇಕ ಆಭರಣಗಳನ್ನು ಧರಿಸಿದ್ದು, ಅವುಗಳಲ್ಲಿ ಕಂಠೀಹಾರ, ಪದಕಯುಕ್ತ ಮಾಲೆ, ಕೇಯೂರ, ಕಟಕ, ಕಾಂಚೀಗುಣ, ಮುಕ್ತಾದಾಮ, ವನಮಾಲಾ, ಅಂಗುಲೀಯಕ, ಪಾದಕಟಕ, ಪಾದಜಾಲಕ ಇವುಗಳಿಂದ ಅಲಂಕೃತನಾಗಿದ್ದಾನೆ.

ಹನುಮಂತನು ಬಲ ವೈಶೇಷಿಕ ಸ್ಥಾನಕ ಮುದ್ರೆಯಲ್ಲಿ ನಿಂತಿದ್ದಾನೆ. ಬಾಲವು ಮೇಲ್ಭಾಗದಲ್ಲಿ ಎತ್ತಿಕೊಂಡಿದ್ದು, ಪ್ರಭಾವಳಿಗೆ ಹೊಂದಿಕೊಂಡಿದೆ. ಬಾಲದ ತುದಿಯಲ್ಲಿ ಸ್ವಲ್ಪಮುಂದೆ ಒಂದು ಗಂಟೆಯನ್ನು ಕೆತ್ತಲಾಗಿದೆ. ಹನುಮಂತನ ಮುಖದಲ್ಲಿ ಸ್ವಲ್ಪಕೋಪ ಮತ್ತು ಪ್ರಸನ್ನತೆ ಇದ್ದು, ಹಲ್ಲುಗಳನ್ನು ತೋರಿಸಲಾಗಿದೆ. ಕಿವಿಯಲ್ಲಿ ಸುಂದರವಾದ ಕುಂಡಲಗಳನ್ನು ಧರಿಸಿದ್ದಾನೆ. ಆಂಜನೇಯನ ಪುಷ್ಪಾಲಂಕೃತ ಪ್ರಭಾವಳಿಯ ಮೇಲ್ಭಾಗದ ಮಧ್ಯದಲ್ಲಿ ಕೀರ್ತಿ ಮುಖವಿದ್ದು, ಪಾದದ ಕೆಳಗಿನ ಪೀಠದ ಮಧ್ಯಭಾಗದಲ್ಲಿ ಸುಂದರ ಶಿಲ್ಪವೊಂದನ್ನು ಕಡೆಯಲಾಗಿದೆ. ಒಟ್ಟಿನಲ್ಲಿ ಈ ಮೂರ್ತಿಯು ಸಕಲ ಲಕ್ಷಣಗಳಿಂದ ಕೂಡಿದ್ದು ಮೈಸೂರು ಶಿಲ್ಪಶೈಲಿಯ ಸುಂದರ ಉದಾಹರಣೆಯಾಗಿದೆ.

ಈ ಆಂಜನೇಯನಿರುವ ಗರ್ಭಗೃಹದಿಂದ ಆಚೆಗೆ ಬಂದರೆ ಸುಖವಾಸಿಯಲ್ಲಿ ಒಂದು ಸುಂದರವಾದ ಲಕ್ಷ್ಮೀನಾರಾಯಣರ ಮೂರ್ತಿಯಿದ್ದು, ಅದೂ ಸಹ ಮೈಸೂರು ಶಿಲ್ಪಶೈಲಿಯ ಪ್ರತಿಮಾ ಲಕ್ಷಣಗಳನ್ನು ಹೊಂದಿದೆ. ಈ ದೇವಾಲಯದಿಂದ ಹೊರಬಂದರೆ, ಈ ದೇವಾಲಯದ ಬಲಭಾಗಕ್ಕೆ ಅಂದರೆ ದಕ್ಷಿಣ ದಿಕ್ಕಿನಲ್ಲಿ ಒಂದು ಗರ್ಭಗೃಹ ಸುಖನಾಸ ಮಾತ್ರ ಹೊಂದಿರುವ ಶಿವನ ದೇವಾಲಯವಿದೆ. ಗರ್ಭಗೃಹದಲ್ಲಿ ಪೀಠಯುಕ್ತವಾದ ಲಿಂಗವಿದ್ದು, ಲಿಂಗವನ್ನು ಒಂದು ಸುಂದರ ನಂದಿಯು ತಲೆಯನ್ನು ಸ್ವಲ್ಪಮಾತ್ರ ಬಗ್ಗಿಸಿ ನೋಡುತ್ತಿದೆ. ಈ ರೀತಿಯ ಶಿಲ್ಪವನ್ನು ಇಲ್ಲಿನ ಸ್ಥಳಾವಕಾಶಕ್ಕಾಗಿ ಹೀಗೆ ಮಾಡಿರುವುದು ಅಪರೂಪದ ಉದಾಹರಣೆಯಾಗಿದೆ. ಸಾಂಬಶಿವ ಎಂದು ಕರೆಯಲಾಗುವ ಶಿವನ ಎಡ ಭಾಗದಲ್ಲಿ ಅಭಯ, ವರದ ಮುದ್ರೆಯಿಂದ ಕೂಡಿದ ಚತುರ್ಭುಜ ಪಾರ್ವತೀ ದೇವಿಯವರ ವಿಗ್ರಹವಿದೆ. ಲಿಂಗದ ಬಲಭಾಗದಲ್ಲಿ ಅತ್ಯಂತ ಸುಂದರವಾದ ಮಹಿಷಾಮರ್ದನಿಯ ಒಂದು ಅಡಿ ಎತ್ತರದ ಶಿಲ್ಪವಿದೆ. ಈ ಮೂರ್ತಿಗಳು ಚಿಕ್ಕದಾಗಿದ್ದರೂ ಸಹ ಕಲಾತ್ಮಕತೆಯ ದೃಷ್ಟಿಯಿಂದ ಅತ್ಯಂತ ಸುಂದರವಾಗಿವೆ.

ಈ ವೀರಾಂಜನೇಯ ಮತ್ತು ಶಿವನ ದೇವಾಲಯಗಳು ಎರಡೂ ಮೈಸೂರು ಅರಸರ ಕಾಲದ ನಿರ್ಮಿತಿಯ ತಂತ್ರ ಜ್ಞಾನದಿಂದ ನಿರ್ಮಾಣಗೊಂಡಿದ್ದು, ಸುಣ್ಣದ ಗಾರೆ, ಇಟ್ಟಿಗೆ, ಗಾರೆತಿಳಿ, ಮರ ಇತ್ಯಾದಿ ನೈಸರ್ಗಿಕ ವಸ್ತುಗಳನ್ನು ಬಳಸಿದ್ದಾರೆ. ಈ ಎರಡೂ ದೇವಾಲಯಗಳು ವಿಮಾನ ಗೋಪುರ ಅಥವಾ ಶಿಖರವನ್ನು ಹೊಂದಿದ್ದು ಶಿಖರದಲ್ಲಿ ಗಾರೆ ಶಿಲ್ಪಗಳು ಅತ್ಯಾಕರ್ಷಕವಾಗಿದ್ದರೂ ಈಗ ಭಿನ್ನವಾಗಿ ಉಳಿದು ಬಂದಿವೆ. ಇತ್ತೀಚೆಗೆ ಈ ಶಿಖರಗಳಿಗೆ ಬಣ್ಣವನ್ನು ಲೇಪಿಸಲಾಗಿದೆ. ಈ ಎರಡೂ ದೇವಾಲಯಗಳೂ ಪ್ರತ್ಯೇಕ ಪ್ರದಕ್ಷಿಣಾ ಪಥವನ್ನು ಹೊಂದಿವೆ. ವೀರಾಂಜನೇಯನ ದೇವಾಲಯದ ಪಕ್ಕದಲ್ಲಿ ಒಂದು ಕೊಠಡಿ ಇದ್ದು, ಪಾಕಶಾಲೆಯಾಗಿದ್ದಿರಬಹುದು. ಉಳಿದಂತೆ ಪ್ರಾಂಗಣದ ಹೊರಗೆ ಒಂದು ಕೊಠಡಿಯಿದ್ದು ಇದರ ಉಪಯೋಗ ತಿಳಿದುಬರುವುದಿಲ್ಲ.

ಈ ದೇವಾಲಯವು ಮೈಸೂರಿನ ಪ್ರಧಾನ ಆಕರ್ಷಣೆಯಾದ ಅಂಬಾವಿಲಾಸ ಅರಮನೆಯ ಮುಂಭಾಗದಲ್ಲಿ ಅನತಿ ದೂರದಲ್ಲೇ ಇದ್ದು, ಅರಮನೆಯ ಮುಂಭಾಗದ ಪ್ರಮುಖ ರಸ್ತೆಯಿಂದ ಈ ದೇವಸ್ಥಾನಕ್ಕೆ ಇಳಿದು ಬರಲು ಕೆಲವು ಮೆಟ್ಟಿಲುಗಳಿವೆ. ಇಲ್ಲಿ ಈ ಆಂಜನೇಯ ದೇವಾಲಯ ಕಟ್ಟಿದವರು ಯಾರು, ಏತಕ್ಕಾಗಿ ಕಟ್ಟಿದರು, ಯಾವಾಗ ಕಟ್ಟಿದರು, ದೇವಾಲಯದ ಮುಂದೆ ಮೆಟ್ಟಿಲುಗಳು ಇರುವುದು ಯಾವುದಕ್ಕಾಗಿ, ಈ ದೇವಾಲಯ ಕಟ್ಟಿದಾಗ ಯಾರು ಆಳುತ್ತಿದ್ದರು, ಈ ಆಂಜನೇಯ ದೇವಾಲಯದ ಹೆಸರೇನು, ಎಂಬ ಪ್ರಶ್ನೆಗಳಿಗೆ ಆಂಜನೇಯ ದೇವರ ಗರ್ಭಗೃಹದ ಮೇಲ್ಭಾಗದಲ್ಲಿನ ಗೋಡೆಯಲ್ಲಿ ಅಳವಡಿಸಿರುವ ಮೈಸೂರು ಒಡೆಯರ್‌ರವರು ಕನ್ನಡದಲ್ಲಿ ಬರೆಸಿದ ಶಾಸನದಲ್ಲಿ ತಿಳಿಯಬಹುದಾಗಿದೆ. ಈ ಆಂಜನೇಯ ಸ್ವಾಮಿಯನ್ನು ಶಾಲಿವಾಹನ ಶಕ 1762ರ ವೈಶಾಖ ಮಾಸದ ಶುಕ್ಲ ಪಕ್ಷದ 10ನೇ ತಿಥಿ ಸೋಮವಾರದಂದು ಪ್ರತಿಷ್ಠಾಪಿಸಲಾಗಿದೆ. ಇದು ಭಾರತೀಯ ಎಫಿಮರಿಸ್ ಅನ್ವಯ ಮೇ ತಿಂಗಳ 11ನೇ ತಾರೀಖು 1840ಕ್ಕೆ ಸರಿಹೊಂದುತ್ತದೆ. ಈ ಶಾಸನದ ಪ್ರಕಾರ ಅರಮನೆಯಲ್ಲಿ ಕಛೇರಿ ಭಕ್ಷಿಯವರಾಗಿದ್ದ ವೀಣೆ ವೆಂಕಟಸುಬ್ಬಯ್ಯನವರ ಪತ್ನಿ ವೆಂಕಮ್ಮನವರು ತನ್ನ ಗಂಡನಿಗೆ ಮತ್ತು ತನಗೆ ಶಾಶ್ವತ ವಿಷ್ಣುಲೋಕ ಪ್ರಾಪ್ತಿಯಾಗಲೆಂದು ಈ ಆಂಜನೇಯ ದೇವಾಲಯ, ಮೆಟ್ಟಿಲುಗಳು ಮತ್ತು ಸಂಧ್ಯಾಮಂಟಪ ಮತ್ತು ಶಿವನ ದೇವಾಲಯವನ್ನು ಕಟ್ಟಿಸಿ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಈ ವೀಣೆ ವೆಂಕಟಸುಬ್ಬಯ್ಯನವರು (ಸಾ.ಶ 1750-1838) ಮೂಲತಃ ತಮಿಳುನಾಡಿನ ತಂಜಾವೂರು ಜಿಲ್ಲೆಯ ಕಪಿಸ್ಥಲಂನವರು. ಇವರು ತಂಜಾವೂರಿನ ಶ್ರೀ ಶರಭೋಜ ಮಹಾರಾಜರ ಆಸ್ಥಾನ ವಿದ್ವಾಂಸರಾಗಿದ್ದು ಹಾಗೂ ಪ್ರಸಿದ್ಧ ವೈಣಿಕರಾಗಿದ್ದ ವೀಣೆ ಕುಪ್ಪಣ್ಣನವರ ಮಕ್ಕಳು. ಇವರು ದಿವಾನ್ ಪೂರ್ಣಯ್ಯ ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದು ಮೈಸೂರಿನ ಅರಸರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ಗೆ (ಸಾ.ಶ 1799-1868) ಸಂಗೀತ ಶಿಕ್ಷಕರಾಗಿದ್ದರು. ಮೈಸೂರು ರಾಜ್ಯದ ಪ್ರಮುಖ ಸಂಗೀತ ವಿದ್ವಾಂಸರಾಗಿಯೂ ಗುರುತಿಸಿಕೊಂಡರು. ಗುರುಪಾದ ಪೂಜೆಯ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾರಾಜರು ಇವರಿಗೆ ಮುತ್ತಿನ ಕುಚ್ಚಿನೊಂದಿಗಿದ್ದ ಸುವರ್ಣವೀಣೆಯನ್ನು ಕೊಟ್ಟು ಗೌರವಿಸಿದ್ದರಂತೆ. ವೀಣೆ ವೆಂಕಟಸುಬ್ಬಯ್ಯನವರು ರಾಜಸ್ಥಾನದಲ್ಲಿ ವೀಣೆ ಭಕ್ಷಿಯವರು ಆಗಿದ್ದರು ಎಂದು ಸಹ ತಿಳಿದು ಬರುತ್ತದೆ. ಇವರು ಅನೇಕ ಕೀರ್ತನೆಗಳನ್ನು ರಚಿಸಿದ್ದು ಸಪ್ತತಾಲೇಶ್ವರ ಎಂಬ ಕೃತಿಯನ್ನು ರೀತಿಗೌಳ ರಾಗದಲ್ಲಿ ಅಳವಡಿಸಿದ್ದು ಇದು ಸುಳಾದಿಯಾಗಿರುವುದರಿಂದ ಎಲ್ಲಾ ಏಳು ತಾಳಗಳನ್ನು ಒಳಗೊಂಡಿದೆ. ಇವರ ಸಹೋದರರಾಗಿದ್ದ ಅನಂತ ಸುಬ್ಬಯ್ಯರವರು ಸಹ ವೈಣಿಕರು ಮತ್ತು ದೊಡ್ಡ ವಿದ್ವಾಂಸರಾಗಿದ್ದರು. ಇನ್ನು ಈ ಸಂಧ್ಯಾಮಂಟಪ ಮತ್ತು ಸೋಪಾನಗಳು ವಸ್ತುಪ್ರದರ್ಶನದ ನೆಲದಿಂದ ಎತ್ತರದಲ್ಲಿದ್ದು ಒಂದು ಚಿಕ್ಕ ಗುಡ್ಡದಂತೆ ಕಾಣುತ್ತದೆ. ಆದ್ದರಿಂದ ಈ ಎತ್ತರದ ಪ್ರದೇಶದಲ್ಲಿ ಸುಮಾರು 1840ರಲ್ಲಿ ನೀರಿಗಾಗಿ ಇಳಿಯಲು ಮಾಡಿರುವ ವ್ಯವಸ್ಥೆ ಎನ್ನಬಹುದು. ಹಿಂದೆ ಇಲ್ಲಿ ದೊಡ್ಡ ದೇವರಾಜ ಸಮುದ್ರ ಎಂಬ ಕೆರೆಯಿದ್ದು, ಈ ಕೆರೆ ಇಂದು ದೊಡ್ಡಕೆರೆ ಮೈದಾನ ಎಂಬ ಪ್ರದೇಶದಲ್ಲಿತ್ತು. ಇದನ್ನು ಮೈಸೂರಿನ ಅರಸರಾಗಿದ್ದ ದೊಡ್ಡದೇವರಾಜ ಒಡೆಯರ್ (ಸಾ.ಶ 1659-1673) ಅವರು ಕಟ್ಟಿಸಿದ್ದರು. ಭಾರತೀಯ ವಾಸ್ತು ಗ್ರಂಥಗಳಿಗೆ ಅನುಗುಣವಾಗಿ ಈ ಕೆರೆಯನ್ನು ಅರಮನೆಯ ಮುಂದೆ ಪೂರ್ವ ಭಾಗಕ್ಕೆ ಕಟ್ಟಿಸಲಾಗಿತ್ತು. ಆದರೆ ಮುಂದಿನ ಕಾಲಮಾನಗಳಲ್ಲಿ ಈ ಕೆರೆಯನ್ನು ಮುಚ್ಚಲಾಯಿತು. ಈ ಪ್ರದೇಶದಲ್ಲಿ ದಸರಾ ಕೂಡ ವಸ್ತುಪ್ರದರ್ಶನ ವ್ಯವಸ್ಥೆ ಮಾಡಲಾಗಿದೆ.



ಆದ್ದರಿಂದ 1840ರಲ್ಲಿ ಶ್ರೀ ವೆಂಕಟಸುಬ್ಬಯ್ಯನವರ ಧರ್ಮ ಪತ್ನಿಯಾದ ವೆಂಕಮ್ಮನವರು ಭಕ್ತಾದಿಗಳು ಕೆರೆಗೆ ಇಳಿದು ಸ್ನಾನ, ಸಂಧ್ಯಾವಂದನೆಗೆ ಅನುಕೂಲವಾಗಲೆಂದು ಸೋಪಾನಯುಕ್ತವಾದ ಮಂಟಪವನ್ನು ಕಟ್ಟಿಸಿದರು. ಅದು ಅಲ್ಲದೆ ಹಿರಿಯರು ಹೇಳುವಂತೆ ದಸರಾ ಕಾಲದಲ್ಲಿ ಇಲ್ಲಿ ಜನ ಬಂದು ಮುಡಿ ಮಾಡಿಸಿಕೊಂಡು, ಸ್ನಾನ ಮಾಡಿ ಆಂಜನೇಯನ ದರ್ಶನ ಪಡೆದು ನವರಾತ್ರಿ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಿದ್ದರಂತೆ. ಇನ್ನು ಈ ಆಂಜನೇಯ ಮೂರ್ತಿ ವೀರಮುದ್ರೆಯಲ್ಲಿ ಇರುವುದರಿಂದ ಈ ದೇವಾಲಯದ ಹೆಸರು ವೀರ ಆಂಜನೇಯಸ್ವಾಮಿ ದೇವಾಲಯ ಎಂದು ಹೆಸರಿಸಲಾಗಿದ್ದು ಇದನ್ನು ಈಗ ಅಭಯ ಆಂಜನೇಯ ಎಂದು ಸಹ ಹೇಳಲಾಗುತ್ತಿದೆ. ಆದರೆ ಈ ದೇವಾಲಯವನ್ನು ಅಲ್ಲಿನ ಶಾಸನದಲ್ಲಿರುವಂತೆ ಶ್ರೀ ವೀರ ಆಂಜನೇಯ ಎಂದು ಕರೆಯುವುದು ಸೂಕ್ತವಾಗಿದೆ. ಯಾಕೆಂದರೆ ಪರಂಪರೆಯನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗುತ್ತದೆ ಎಂದು ಅಪ್ರಕಟಿತ ಶಾಸನವನ್ನು ಮೊದಲಿಗೆ ಅಧ್ಯಯನ ಮಾಡಿ, ವಿದ್ವಾಂಸರಾದ ಡಾ. ಶೆಲ್ವಪಿಳ್ಳೈ ಅಯ್ಯಂಗಾರ್ ಅವರು ಮಾರ್ಗದರ್ಶನ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಈಗಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಮಿರ್ಲೆ ಶ್ರೀನಿವಾಸಗೌಡರು, ಇಲ್ಲಿನ ಕಾರ್ಯ ನಿರ್ವಾಹಣಾಧಿಕಾರಿ ಕೆ.ರುದ್ರೇಶ್ ಮತ್ತು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರಾದ ಡಾ.ಸಿ.ಎನ್. ಮಂಜುಳ ಮತ್ತು ದಸರಾ ವಸ್ತುಪ್ರದರ್ಶನದ ಪ್ರಾಧಿಕಾರದ ನಿರೂಪಕ ಅಜಯ್ ಕುಮಾರ್ ಶಾಸ್ತ್ರಿ, ದೇವಾಲಯದ ಪರಂಪರೆ, ಇತಿಹಾಸ, ಧಾರ್ಮಿಕತೆಗನುಗುಣವಾಗಿ ಜೀರ್ಣೋದ್ಧಾರಕ್ಕೆ ಸಹಕರಿಸಿದ್ದಾರೆ.



ನಂ. ಶ್ರೀಕಂಠ ಕುಮಾರ್
ಮೊ: 9481067333





ವಾರಭವಿಷ್ಯ

4.12.2022 ರಿಂದ 10.12.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ಮೇಷ, ವೃಷಭ, ಮಿಥುನ, ಕುಜ-ವೃಷಭ, ಬುಧ-ಧನುಸ್ಸು, ಗುರು-ಮೀನ, ಶುಕ್ರ-ವೃಶ್ಚಿಕ, ಧನುಸ್ಸು, ಶನಿ-ಮಕರ, ರಾಹು, ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಕಷ್ಟವನ್ನು ಅನುಭವಿಸಲು ತಯಾರಾದರೆ, ಸುಖ ಬಯಸದೆಯೇ ಬರುತ್ತದೆ. ಈ ವಾರ ನಿಮ್ಮ ಜವಾಬ್ದಾರಿಗಳೂ ಹೆಚ್ಚಾಗಲಿದೆ. ಚಂದ್ರಗ್ರಹ ಸಂಚಾರ ಶುಭವಿದ್ದು, ಕತ್ತಲನು ಹೊಕ್ಕು ಬೆಳಕು ಹರಿದಂತೆ ಹರುಷದ ನಕ್ಷತ್ರ ಮಿನುಗಲಿದೆ. ನಿಮ್ಮ ರಾಶಿ ಸ್ಥಿತ ರಾಹು ಅನಿರೀಕ್ಷಿತ ಕಷ್ಟ ಕಾರ್ಪಣ್ಯಗಳಿಗೆ ದೂಡಬಹುದು. ದಾಯಾದಿಗಳಲ್ಲಿ ಕಲಹಗಳು, ಐಕ್ಯತೆಯ ಕೊರತೆಯಿಂದ ಆಸ್ತಿ ವಿಷಯಗಳು ಬಗೆಹರಿಯದು.

ಶ್ರೀ ಗಣಪತಿ ಪೂಜೆ. ಶುಭ ಸಂಖ್ಯೆ-8.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಮನಸ್ಸು ಬಯಕೆಗಳ ಆಗರ. ಆದರೆ ಅದರ ಈಡೇರಿಕೆಗೆ ಸ್ವಪ್ರಯತ್ನದ ಜೊತೆ ದೈವ ಸಹಾಯವೂ ಬೇಕು. ಈ ವಾರ ಮನೆಯಲ್ಲಿ ಮಂಗಳಮಯ ವಾತಾವರಣ ಇರುತ್ತದೆ. ಕನಸಿನಲ್ಲಿ ಕಂಡದ್ದು ನೆನಪಿನಲ್ಲಿ ನಿಜರೂಪವಾಗುವ ಸಾಧ್ಯತೆ ಇದೆ. ಉತ್ತಮ ಬಾಳ ಸಂಗಾತಿಯೂ ದೊರೆಯುವ ಸಂಭವ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಸಿಹಿ ಸುದ್ದಿ ಬರುವುದು. ವಾರಾಂತ್ಯಕ್ಕೆ ಶಾರ್ಟ್ ಟ್ರಿಪ್.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-5.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನಾಳೆಗಾಗಿ ನೀವು ಪ್ಲಾನ್ ಮಾಡದಿದ್ದರೆ ಭವಿಷ್ಯವಿಲ್ಲ. ಸಂಸಾರದ ಬಾಧ್ಯತೆಗಳು ಸರಾಗವಾಗಿ ಸಾಗಿದರೂ, ಕ್ಷುಲ್ಲಕ ವಿಷಯಗಳಿಂದ ಕುಟುಂಬದಲ್ಲಿ ಅಶಾಂತಿ ಮೂಡಲಿದೆ. ಸಾಲ ಸೋಲ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ. ವಾರದ ಕಡೆಗೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಬೆಟ್ಟದಂತೆ ಬಂದ ಕಷ್ಟ ಹತ್ತಿಯಂತೆ ಹಗುರವಾಗಲಿದೆ. ಸ್ನೇಹ ವೃಂದದಲ್ಲಿ ಹಾಗೂ ಮನೆ ಮಂದಿಯಲ್ಲಿ ಪ್ರೀತಿ ಹಂಚಿ ಬಾಳಿ. ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ-9.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ವಾರದ ಪೂರ್ವಾರ್ಧದಲ್ಲಿ ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಸಂಚಾರದಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು. ನೆನೆಗುದಿಗೆ ಬಿದ್ದಿದ್ದ ಪ್ರಮುಖ ಕೆಲಸಗಳು ಮರು ಚಾಲನೆ ಪಡೆಯುವುದು. ಇದಕ್ಕೆ ನಿಮ್ಮ ಹಿತೈಷಿಗಳ ಬೆಂಬಲವೂ ದೊರೆಯುವುದು. ದಾನ, ಧರ್ಮ ಕಾರ್ಯಾಚರಣೆಯಿಂದ ಜನ ಮನ್ನಣೆಗೆ ಭಾಜನರಾಗುವಿರಿ. ಬರಬೇಕಾದ ಹಣ ಕೈ ಸೇರಲಿದೆ. ದೀನ ಜನರಿಗೆ ಸಹಾಯ ಮಾಡಿ ಒಳಿತಾಗುತ್ತದೆ. ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಅಷ್ಟಮದಲ್ಲಿ ಗುರು ಇರುವಾಗ ಸ್ವಪ್ರತಿಷ್ಠೆ ತ್ಯಜಿಸುವುದರಿಂದ ಮನೋಕ್ಲೇಶಗಳು ದೂರವಾಗುತ್ತವೆ. 'ಸಮ ರಸವೇ ಜೀವನ' ಸಿಹಿ-ಕಹಿಯ ಮಿಶ್ರಣ. ಜೀವನದ ಸರಸ ಸಮಯ ಹಾಳಾಗದಂತೆ ವ್ಯವಹರಿಸಿ. ವಾರಾಂತ್ಯಕ್ಕೆ ಲಾಭಕ್ಕೆ ಬರುವ ಚಂದ್ರನಿಂದ ನಿರೀಕ್ಷಿತ ಧನಾಗಮ. ವಸ್ತ್ರ ವ್ಯಾಪಾರಿಗಳಿಗೆ ಉತ್ತಮ ಲಾಭ. ಕ್ಷೀರಜನ್ಯ ವಸ್ತು ವ್ಯಾಪಾರಿಗಳಿಗೂ, ದ್ವಿದಳ ಧಾನ್ಯ ವ್ಯಾಪಾರಿಗಳಿಗೂ ಲಾಭವಾಗುವುದು.


ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-7.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಗುರುಕೃಪೆಗೆ ಪಾತ್ರರಾಗಿರುವ ನಿಮಗೆ ಧನಲಾಭ, ದೇಹ ಸೌಖ್ಯ ವ್ಯವಹಾರಗಳಲ್ಲಿ ಪ್ರಗತಿಗಳು ಉಂಟಾಗಲಿದೆ. ಅಧಿಕಾರಿಗಳ ಭೇಟಿಯಿಂದ ಕಾರ್ಯಸಾಧನೆ. ನಿಮಗೆ ವಿದ್ಯೆ ಕಲಿಸಿದ ಗುರು ಒಬ್ಬರ ಸಂಪರ್ಕದಿಂದ ನಿಮ್ಮ ಭವಿಷ್ಯ ಉಜ್ವಲವಾಗುವ ಅವಕಾಶವಿದೆ. ಇದರಿಂದ ನಿಮ್ಮ ಮನೋ ವ್ಯಾಕುಲತೆ ನಿವಾರಣೆ ಆಗುವುದು. ಆನ್‌ಲೈನ್ ಕೆಲಸದ ಒತ್ತಡಗಳು ಜಾಸ್ತಿ ಆಗಬಹುದು. ವಾರದ ಕಡೆಗೆ ಮನೆ ದೇವರ ದರ್ಶನ.

ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-9.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಹಸನ್ಮುಖಿ, ಐಷಾರಾಮಿ ವಸ್ತು, ವಾಹನ ಖರೀದಿಯ ಯೋಗ. ವೈಯಕ್ತಿಕ ಕೆಲಸ ಕಾರ್ಯಗಳು ನಿಗದಿಯಂತೆ ಮುಂದುವರೆಯದೆ ಬೇಸರ. ಗುಪ್ತ ಶತ್ರುಗಳ ಕಾಟಕ್ಕೆ ನಿಮ್ಮ ರಾಶಿಯಲ್ಲಿ ಸ್ಥಿತನಿರುವ ಕೇತುವೇ ಕಾರಣ. ರಾಜಕೀಯ ರಂಗದವರಿಗೆ ಕೋರ್ಟು ಖಟ್ಲೆಗಳು ಎದುರಾಗಬಹುದು. ಮಾರಕ ಸ್ಥಾನದಲ್ಲಿ ರಾಹು ಉಪಸ್ಥಿತಿ ಅಶುಭ ಫಲ ನೀಡಲಿದೆ. ಮನೆ ದೇವರಲ್ಲಿ ಶರಣಾಗತರಾಗಿ.

ಶ್ರೀರಾಹು ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಈ ವಾರ ಪೂರ್ತಿ ಮನೋಕಾರಕ ಚಂದ್ರಗ್ರಹದ ಪ್ರಭಾವ ನಿಮ್ಮ ರಾಶಿಯ ಮೇಲಿರುತ್ತದೆ. ಮನೆಯಲ್ಲಿ ಹರ್ಷ, ಉಲ್ಲಾಸದ ವಾತಾವರಣ. ಹಿತೈಷಿಗಳ ಪ್ರೋತ್ಸಾಹದಿಂದ ನೂತನ ಯೋಜನೆಗಳನ್ನು ಆರಂಭಿಸಲು ಗುರುಗ್ರಹ ಪ್ರೇರಣೆ ನೀಡಲಿದೆ. ಸಂಬಂಧಿಕರಿಂದಲೂ ಕಾರ್ಯಾನುಕೂಲ. ಆಸ್ತಿ ವಿಭಾಗದ ಸಮಸ್ಯೆಗಳು ಸುಖಾಂತ್ಯ ಕಾಣುವುದು. ವಾರಾಂತ್ಯಕ್ಕೆ ತೀರ್ಥಕ್ಷೇತ್ರ ಸಂದರ್ಶನ, ಪುಣ್ಯನದಿ ಸ್ನಾನ.

ಶ್ರೀ ಶನಿಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಆಗುವುದನ್ನು ಬದಲಾಯಿಸಲು ಆಗದು. ಆದರೆ ಭಗವದನುಗ್ರಹದಿಂದ ಕಡಿಮೆ ಮಾಡಿಕೊಳ್ಳಬಹುದು. ವಾರದ ಪೂರ್ವಾರ್ಧದಲ್ಲಿ ಆರ್ಥಿಕ ವಿಷಯಗಳು ಕೊಂಚ ಸುಧಾರಣೆಯಾದಂತೆ ಹರುಷವೆನಿಸುವುದು. ಫರ್ನಿಚರ್ ವ್ಯಾಪಾರಿಗಳಿಗೆ ಉತ್ತಮ ಆರ್ಡರ್‌ಗಳು ದೊರೆಯುವುದು. ರಾಜಕೀಯದವರು ಜನ ವಿರೋಧಕ್ಕೆ ಗುರಿಯಾಗುವರು. ಪಂಚಮ ರಾಹುವಿನಿಂದ ಶರೀರದಲ್ಲಿ ವಿಕಾರತೆಗಳು ಉಂಟಾಗುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-2.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಜನ್ಮ ಶನಿ ಇದ್ದಾಗ್ಯೂ ಇತರ ಗ್ರಹಗಳ ಶುಭ ಸಂಚಾರದಿಂದ ವೈಯಕ್ತಿಕ ಸಮಸ್ಯೆಗಳು ಬಗೆಹರಿದು ಮಾನವಿಕ ಉಲ್ಲಾಸ. ಹೊಸ ಪ್ರಮುಖ ಯೋಜನೆಗಳನ್ನು ಸ್ವಲ್ಪ ಸಮಯ ಮುಂದೂಡಿ. ನಿಮ್ಮ ಕ್ರಿಯಾಶಕ್ತಿ ಸದ ಸದ್ವಿಚಾರಗಳಲ್ಲಿ ವಿನಿಯೋಗವಾಗಲಿ, ಸಮಾಜಘಾತುಕರ ಸಂಗ ನಿಮಗೆ ಮುಳುವಾಗಬಹುದು. ಎಲೆಕ್ಟ್ರಿಕಲ್ ಯಂತ್ರಗಳೊಡನೆ ಕೆಲಸ ಮಾಡುವಾಗ ಜಾಗೃತರಾಗಿರಿ. ಮಹಿಳಾ ಮಣಿಯರು ಮಾಂಗಲ್ಯ ಸರ ಜೋಪಾನ ಮಾಡಿಕೊಳ್ಳಿ. ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-3.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭ ಆಶಾದಾಯಕವಾಗಿರುತ್ತದೆ. ಮಿತ್ರ ಲಾಭವಾಗಿ, ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ಘಟಿಸಲಿದೆ. ಜವಳಿ ಹಾಗೂ ಸುವರ್ಣ, ರಜತ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಹಲವರಿಗೆ ಆಸ್ಪತ್ರೆಯಿಂದ ಬಿಡುಗಡೆ ದೊರೆಯುವುದು. ವ್ಯಯಸ್ಥ ಶನಿದೇವನಿಂದ ದೀರ್ಘ ಪ್ರಯಾಣ ಸಮಯದಲ್ಲಿ ತೊಂದರೆಗಳು ಉಂಟಾಗಬಹುದು. ಸಂಯಮದಿಂದ ವಾಹನ ಚಲಿಸಿದರೆ ನಿಮಗೂ, ಮನೆಯವರಿಗೂ ಕ್ಷೇಮ. ಶ್ರೀ ಲಿಂಗಕ್ಕೆ ಬಿಲ್ವ ಸಮರ್ಪಣೆ. ಶುಭ ಸಂಖ್ಯೆ-1.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸಪ್ತಾಹದ ಆದಿಗೆ ಕೈ ಹಾಕಿದ ಕೆಲಸ ಕಾರ್ಯಗಳು ಸುಲಲಿತವಾಗಿ ಸಾಗುವುದು. 'ಶ್ರದ್ಧಾವಾನ್ ಲಭತೇ ಫಲಂ' ಎಂಬಂತೆ ನಿಮಗೆ ದೊರಕಬೇಕಾದ್ದು ದೊರೆಯುವುದು. ಕುಜ ಗ್ರಹ ನಿಮ್ಮ ಪ್ರಯತ್ನಗಳಿಗೆ ಧೈರ್ಯ ತುಂಬಲಿದ್ದಾನೆ. ವಾರ ಮಧ್ಯೆ ಮನೆಗೆ ಅತಿಥಿ-ಅಭ್ಯಾಗತರ ಆಗಮನ. ಅವರ ಆತಿಥ್ಯಕ್ಕೆ ಧಾರಾಳ ಹಣ ವ್ಯಯ. ನಿಮ್ಮ ವಾಗ್ದಾನವನ್ನು ನಿಭಾಯಿಸುಲ್ಲಿ ವಿಫಲರಾಗುವಿರಿ. ವಿನಾಕಾರಣ ವಾಹನದಲ್ಲಿ ಸುತ್ತಾಡಬೇಡಿ. ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ-5.

ಹುಣಸೂರಿನಲ್ಲಿ ಬೆಳ್ಳಂಬೆಳಗ್ಗೆ ಮಿಂಚಿನ ಕಾರ್ಯಾಚರಣೆ

ಅನಧಿಕೃತ ಬಾಡಿಗೆದಾರರ ತೆರವುಗೊಳಿಸಿ ಮಳಿಗೆಗಳ ವಶಕ್ಕೆ ಪಡೆದ ನಗರಸಭೆ

ಹುಣಸೂರು,ಡಿ.3–ಶನಿವಾರ ಬೆಳ್ಳಂಬೆಳಗ್ಗೆ ಮಿಂಚಿನ ಕಾರ್ಯಾಚರಣೆ ನಡೆಸಿದ ಹುಣಸೂರು ನಗರಸಭೆ ಅಧಿಕಾರಿಗಳು ನಗರಸಭೆಗೆ ಸೇರಿದ ಮಳಿಗೆಗಳನ್ನು ಆಕ್ರಮಿಸಿಕೊಂಡು ಅನಧಿಕೃತವಾಗಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ 75 ಮಳಿಗೆಗಳನ್ನು ಖಾಲಿ ಮಾಡಿಸಿ ತಮ್ಮ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಇಂದು ಬೆಳಗ್ಗೆ 5 ಗಂಟೆ ಸುಮಾರಿನಲ್ಲಿ ನಗರಸಭೆ ಆಯುಕ್ತೆ ಮಾನಸ ನೇತೃತ್ವದಲ್ಲಿ ನಗರಸಭಾ ಕಚೇರಿ ಮುಂದೆ ಜಿಲ್ಲಾಧಿಕಾರಿ ಕಚೇರಿ ಕಾರ್ಯ ನಿರ್ವಾಹಕ ಅಭಿಯಂತರ ನರಸು ಕಲಂತ್ರೆ, ಸಹಾಯಕ ಕಾರ್ಯಪಾಲಕ ಅಭಿಯಂತರ ಸೋಮನಾಥಕುಮಾರ್, ನೋಡಲ್ ಇಂಜಿನಿಯರ್ ಶಂಕರ್, ನಗರಸಭೆಯ ಪರಿಸರ ಅಭಿಯಂತರೆ ರೂಪ, ಕಂದಾಯಾಧಿಕಾರಿ ಪಂಪಶ್ರೀ, ಕಂದಾಯ ನಿರೀಕ್ಷಕ ಸಿದ್ದರಾಜು, ಸಹಾಯಕ ಅಭಿಯಂತರ ಲೋಕೇಶ್, ಆರೋಗ್ಯ ನಿರೀಕ್ಷಕರಾದ ಸತೀಶ್, ಶಶಿ, ಕಚೇರಿ ವ್ಯವಸ್ಥಾಪಕ ಶ್ರೀನಿವಾಸ್, ಸಿಬ್ಬಂದಿಗಳಾದ ಚಂದ್ರು, ಮಧು, ಅರುಣ್, ಸುಭಾಷ್, ಮಹದೇವ, ಕೃಷ್ಣೇಗೌಡ ಹಾಗೂ ನಗರಸಭೆಯ ಎಲ್ಲಾ ಪೌರಕಾರ್ಮಿಕರು ಹಾಗೂ ಪೊಲೀಸ್, ಆರೋಗ್ಯ, ಚೆಸ್ಕಾಂ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ, ಅಗ್ನಿಶಾಮಕ ದಳ, ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ಜಮಾಯಿಸಿದ್ದರು. ಅಲ್ಲದೇ ಕೆಎಸ್‌ಆರ್‌ಪಿಯ ಒಂದು ತುಕಡಿ, ಒಂದು ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ವಾಹನ ಸನ್ನದ್ಧವಾಗಿತ್ತು.

ಮುಂಜಾನೆ ವಾಯುವಿಹಾರಕ್ಕೆ ತೆರಳಿದ್ದ ಸಾರ್ವಜನಿಕರು ನಗರಸಭೆ ಮುಂದೆ ಜಮಾಯಿಸಿದ್ದ ಅಧಿಕಾರಿಗಳು ಹಾಗೂ ಅಗ್ನಿಶಾಮಕ ವಾಹನ ಮತ್ತು ಆಂಬುಲೆನ್ಸ್ ನೋಡಿ ಏನೋ ಆಗಿದೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಏನಾಗಿದೆ ಎಂಬ ಕುತೂಹಲವು ಅವರನ್ನು ಕಾಡುತ್ತಿತ್ತು. ನೋಡ ನೋಡುತ್ತಿದ್ದಂತೆಯೇ ನಗರಸಭಾ ಆಯುಕ್ತೆ ಮಾನಸ ನೇತೃತ್ವದ ತಂಡ ಹುಣಸೂರಿನ ಸಂತೆಮಾಳದ 71 ಮಳಿಗೆ, ಅಕ್ಷಯ್ ಭಂಡಾರ್ ಹಾಗೂ ಕೋಟೆ ಸರ್ಕಲ್ ಬಳಿ ತಲಾ 2 ಮಳಿಗೆಗಳನ್ನು ಖಾಲಿ ಮಾಡಿಸಲು ಹೊರಟೆಬಿಟ್ಟಿತು.



ವಿಷಯ ತಿಳಿಯುತ್ತಿದ್ದಂತೆಯೇ ಕೆಲವು ಮಳಿಗೆದಾರರು ಆಗಮಿಸಿ ಕೆಲ ಕಾಗದ ಪತ್ರ ತೋರಿಸಿ ತಾವು ಅಧಿಕೃತವಾಗಿಯೇ ಇದ್ದೇವೆ ಎಂದು ಹೇಳಲು ಮುಂದಾದರಾದರೂ ಮಾನಸ ಅವರು ಮುನ್ನೆಚ್ಚರಿಕಾ ಕ್ರಮವಾಗಿ ತಮ್ಮೊಂದಿಗೆ ಕಾನೂನು ಸಲಹೆಗಾರರನ್ನು ಕರೆದೊಯ್ದಿದ್ದರಿಂದ ಅವರು ಮಳಿಗೆದಾರರು ತೋರಿಸಿದ ದಾಖಲೆ ಪತ್ರಗಳಿಗೆ ಕಾನೂನಿನಡಿ ಯಾವುದೇ ಕಿಮ್ಮತ್ತಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಕೆಲ ಅಂಗಡಿದಾರರು ತಾವೇ ಬೀಗ ತೆರೆದು ಖಾಲಿ ಮಾಡಲು ಅನುವು ಮಾಡಿಕೊಟ್ಟರೇ ಕೆಲ ಮಳಿಗೆಗಳ ಬೀಗವನ್ನು ನಗರಸಭೆ ಸಿಬ್ಬಂದಿ ಮುರಿದು ಒಳಗಿದ್ದ ಸಾಮಾನು ಸರಂಜಾಮುಗಳನ್ನು ಹೊರಗಿಟ್ಟು ಅಂಗಡಿಗಳಿಗೆ ಬೀಗ ಮುದ್ರೆ ಹಾಕಿದರು. ಈ ನಡುವೆ ಕೆಲವರು 1 ವಾರ ಕಾಲಾವಕಾಶ ನೀಡಬೇಕೆಂದು ಮನವಿ ಮಾಡಿದರಾದರೂ ಅದನ್ನು ನಯವಾಗಿ ತಿರಸ್ಕರಿಸಿದ ಮಾನಸ, ಈ ಹಿಂದೆಯೇ ನಿಮಗೆ ಸಾಕಷ್ಟು ಕಾಲಾವಕಾಶ ನೀಡಲಾಗಿತ್ತು. ಆದರೆ ನೀವು ಹುಷಾರಾಗಲಿಲ್ಲ. ಈಗ ಡಿಸಿ ಕಟ್ಟುನಿಟ್ಟಿನ ಆದೇಶದ ಮೇರೆಗೆ ಅವರ ಕಚೇರಿಯ ಅಧಿಕಾರಿಗಳ ತಂಡವೇ ಆಗಮಿಸಿದ್ದು, ಅವರ ಸಮ್ಮುಖದಲ್ಲೇ ನಾವು ಕಾರ್ಯಾಚರಣೆ ನಡೆಸುತ್ತಿದ್ದೇವೆ. ಹೀಗಾಗಿ ಅಂಗಡಿಗಳನ್ನು ಖಾಲಿ ಮಾಡಿ ಸಹಕರಿಸುವಂತೆ ಕೋರಿದರು.

> “ಜನಪ್ರತಿನಿಧಿಗಳ ಸಹಕಾರದಿಂದ ಈ ಕಾರ್ಯಾಚರಣೆ ಯಶಸ್ವಿಯಾಗಿದೆ. ನಗರಸಭೆ ಅಧಿಕಾರಿ ಸಿಬ್ಬಂದಿ, ಪೌರಕಾರ್ಮಿಕರು, ಸ್ವಚ್ಛತೆ ಮತ್ತು ನೀರು ಸರಬರಾಜು ವಿಭಾಗದ ನೌಕರರು ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಕಾರ್ಯಾಚರಣೆಗೆ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಕೂಡ ಆಗಮಿಸಿದ್ದರು. ಆರೋಗ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ಸಹಕಾರವೂ ಪಡೆಯಲಾಗಿತ್ತು. ಪೊಲೀಸ್ ಹಾಗೂ ಅಗ್ನಿಶಾಮಕ ದಳ ಕೂಡ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು. ಈಗಾಗಲೇ ಬಿಡ್‌ನಲ್ಲಿ ಯಶಸ್ವಿಯಾಗಿರುವ ಹಕ್ಕುದಾರರಿಗೆ ಡಿ.5ರಂದು ಠೇವಣಿ ಪಡೆದು, ಕರಾರು ಮಾಡಿಕೊಂಡು ಮಳಿಗೆಗಳನ್ನು ಸ್ವಾಧೀನಕ್ಕೆ ನೀಡಲಾಗುವುದು.
> **–ಮಾನಸ, ನಗರಸಭಾ ಆಯುಕ್ತೆ.**

ಒಟ್ಟಾರೆ ಕಳೆದ 9 ತಿಂಗಳಿಂದ ಅನಧಿಕೃತವಾಗಿ ಅಂಗಡಿಗಳನ್ನು ಆಕ್ರಮಿಸಿಕೊಂಡಿದ್ದವರನ್ನು ಮಿಂಚಿನ ಕಾರ್ಯಾಚರಣೆ ನಡೆಸಿ ನಗರಸಭೆ ಆಯುಕ್ತೆ ಮಾನಸ ಖಾಲಿ ಮಾಡಿಸಿ, ಅಂಗಡಿಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯಲಿಲ್ಲ. ಅಂತಹ ಘಟನೆಗಳಿಗೆ ಆಸ್ಪದವಾಗದಂತೆ ಆಯುಕ್ತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರು.

ಹಿನ್ನೆಲೆ: ನಗರಸಭೆಗೆ ಸೇರಿದ ಅಂಗಡಿ ಮಳಿಗೆಗಳ ಗುತ್ತಿಗೆ ಅವಧಿ ಮುಗಿದಿದ್ದರಿಂದ 103 ಮಳಿಗೆಗಳ ಪೈಕಿ 100 ಮಳಿಗೆಗಳನ್ನು ನಗರಸಭೆ ಕಳೆದ ಫೆ.22ರಂದು ಹರಾಜು ಹಾಕಿತ್ತು. ಎಲ್ಲಾ ಮಳಿಗೆಗಳನ್ನು ವ್ಯಾಪಾರಸ್ಥರು ಬಿಡ್ ಕೂಗಿ ಯಶಸ್ವಿಯಾಗಿದ್ದರಾದರೂ, 100 ಮಳಿಗೆಗಳ ಪೈಕಿ 12 ಮಳಿಗೆದಾರರು ಹರಾಜಿನಲ್ಲಿ ಅನ್ಯಾಯವಾಗಿದೆ ಎಂದು ಹೈಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತಂದು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. 13 ಮಂದಿ ಕಾನೂನುಬದ್ಧವಾಗಿ ಮಳಿಗೆ ಪಡೆದು ವ್ಯಾಪಾರ ವಹಿವಾಟಿನಲ್ಲಿ ತೊಡಗಿಸಿಕೊಂಡರೇ, ಉಳಿದ 75 ಮಳಿಗೆಗಳಲ್ಲಿ ಈ ಹಿಂದೆ ಇದ್ದ ವ್ಯಾಪಾರಸ್ಥರು ಅದನ್ನು ಖಾಲಿ ಮಾಡದೇ, ನಗರಸಭೆಗೆ ಬಾಡಿಗೆಯನ್ನೂ ಕಟ್ಟದೇ ಅನಧಿಕೃತವಾಗಿ ವ್ಯಾಪಾರ ನಡೆಸುತ್ತಿದ್ದರು. ಈ ಸಂಬಂಧ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಹಲವು ಬಾರಿ ಈ ಮಳಿಗೆದಾರರಿಗೆ ನೋಟಿಸ್ ನೀಡಿದರೂ ಕೂಡ ವ್ಯಾಪಾರಸ್ಥರು ಅದನ್ನು ಕೇರ್ ಮಾಡಲೇ ಇಲ್ಲ. ನಗರಸಭೆಯ ಹಿಂದಿನ ಅಧಿಕಾರಿಗಳು ಕೂಡ ಈ ಮಳಿಗೆಗಳನ್ನು ಖಾಲಿ ಮಾಡಿಸುವ ಪ್ರಯತ್ನವನ್ನೇ ಮಾಡಿರಲಿಲ್ಲ.

ಸುಮಾರು 1 ತಿಂಗಳ ಹಿಂದೆ ಹುಣಸೂರು ನಗರಸಭೆಗೆ ಆಯುಕ್ತರಾಗಿ ಬಂದ ಮಾನಸ ಅವರು ಅಂಗಡಿ ಮಳಿಗೆದಾರರನ್ನು ಕರೆಸಿ ಕೆಲ ಸುತ್ತುಗಳ ಮಾತುಕತೆ ನಡೆಸಿ ಮಳಿಗೆಗಳನ್ನು ಖಾಲಿ ಮಾಡುವಂತೆ ಮನವಿ ಮಾಡಿಕೊಂಡಿದ್ದರಾದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿಂದೆ ಪೊಲೀಸ್ ಇಲಾಖೆಯಲ್ಲಿದ್ದ ಮಾನಸ ಅವರು ಆ ಇಲಾಖೆಯ ಅನುಭವವನ್ನೂ ಬಳಸಿಕೊಂಡು ವ್ಯವಸ್ಥಿತವಾಗಿ ಯೋಜನೆ ರೂಪಿಸಿ ಇಂದು ಬೆಳಗ್ಗೆ ಮಿಂಚಿನ ಕಾರ್ಯಾಚರಣೆ ನಡೆಸುವ ಮೂಲಕ ಎಲ್ಲಾ ಮಳಿಗೆಗಳನ್ನು ನಗರಸಭೆ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಕಾಂತಾರ (ಕ): ಮ.1.35ಕ್ಕೆ, ಹಿಟ್: ದಿ ಸೆಕೆಂಡ್ ಕೇಸ್ (ತೆ): ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ತಿಮ್ಮಯ್ಯ & ತಿಮ್ಮಯ್ಯ (ಕ): ಬೆ.10.20ಕ್ಕೆ, ರಾ.10.10ಕ್ಕೆ, ಗಟ್ಟಿ ಕುಸ್ತಿ (ತ): ಮ.1.15ಕ್ಕೆ, ಡಿಎಸ್‌ಪಿ (ತ): ಸಂ.4.10ಕ್ಕೆ, ಗೋಲ್ಡ್ (ಮ): ರಾ.7ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.10ಕ್ಕೆ, ರಾ.7.05ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1.05ಕ್ಕೆ, ಧರಣಿ ಮಂಡಲ ಮಧ್ಯದೊಳಗೆ (ಕ): ಸಂ.4.05ಕ್ಕೆ, ದಿ ಟೀಚರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಗಂಧದ ಗುಡಿ (ಕ): ಬೆ.11.10ಕ್ಕೆ, ಏನ್ ಆಕ್ಷನ್ ಹೀರೊ (ಹಿಂ): ಮ.1.20ಕ್ಕೆ, ರಾ.7.20ಕ್ಕೆ, ರಾ.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಭೇದಿಯಾ (3ಡಿ)(ಹಿಂ): ಬೆ.9.50ಕ್ಕೆ, ಮ.1ಕ್ಕೆ, ಮ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ತ್ರಿಬಲ್ ರೈಡಿಂಗ್ (ಕ): ಬೆ.9.55ಕ್ಕೆ, ಕಾಂತಾರ (ಕ): ಮ.1.05ಕ್ಕೆ, ರಾ.7.15ಕ್ಕೆ, ಇಟ್ಲು ಮರೆದುಮಿಲ್ಲಿ ಪ್ರಜಾನೀಕಂ (ತೆ): ಸಂ.4.10ಕ್ಕೆ, ದೃಶ್ಯಂ–2 (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ರೇಮೊ (ಕ): ಬೆ.10.30ಕ್ಕೆ, ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.4.50ಕ್ಕೆ, ಕಾಂತಾರ (ಕ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.35ಕ್ಕೆ, ದೃಶ್ಯಂ–2 (ಹಿಂ): ಮ.1.40ಕ್ಕೆ, ತ್ರಿಬಲ್ ರೈಡಿಂಗ್ (ಕ): ಸಂ.4.35ಕ್ಕೆ, ರಾ.10.10ಕ್ಕೆ, ಸ್ಟ್ರೇಂಜ್ ವರ್ಲ್ಡ್ (3ಡಿ)(ಹಿಂ): ರಾ.7.45ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಿಎಸ್‌ಪಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೋನ್ ಭೂತ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೆಡ್‌ಬುಷ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಹಿಟ್ ದಿ 2 ಕೇಸ್ (ತೆ)	4 ಪ್ರದರ್ಶನಗಳು
ಸಂಗಂ	
ಧರಣಿಮಂಡಲ ಮಧ್ಯದೊಳಗೆ (ಕ) ಗೋಲ್ಡ್ (ಮ)	2 ಪ್ರದರ್ಶನಗಳು
ಲಿಡೋ	
ಟ್ರಿಪಲ್ ರೈಡಿಂಗ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಗಟ್ಟಿಕುಸ್ತಿ (ತ)	4 ಪ್ರದರ್ಶನಗಳು

ಎಲ್‌ಐಸಿ ಅಸ್ಥಿರಗೊಳಿಸುವ ಯತ್ನ: ಆರೋಪ



ನಂಜನಗೂಡು, ಡಿ.3– ವಿಮಾ ಕ್ಷೇತ್ರಕ್ಕೆ ವಿದೇಶಿ ಬಂಡವಾಳ ತರುವ ಮೂಲಕ ದೇಶದ ಜನರ ವಿಶ್ವಾಸಾರ್ಹವಾದ ಜೀವವಿಮಾ ನಿಗಮ ಅಸ್ಥಿರಗೊಳಿಸುವ ಪ್ರಯತ್ನ ನಡೆದಿದೆ ಎಂದು ಅಖಿಲ ಭಾರತ ಜೀವವಿಮಾ ಪ್ರತಿನಿಧಿಗಳ ಸಂಘಟನೆಯ ದಕ್ಷಿಣ ಮಧ್ಯವಲಯ ಸಮಿತಿ ಅಧ್ಯಕ್ಷ ಎಲ್.ಮಂಜುನಾಥ್ ಆರೋಪಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಶನಿವಾರ ನಡೆದ ಜೀವ ವಿಮಾ ಪ್ರತಿನಿಧಿಗಳ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು. ದೇಶಾದ್ಯಂತ 28 ಕೋಟಿ ಪಾಲಿಸಿದಾರರು, 43 ಲಕ್ಷ ಕೋಟಿ ವಹಿವಾಟಿನೊಂದಿಗೆ, 13 ಲಕ್ಷ ಸಕ್ರಿಯ ಪ್ರತಿನಿಧಿಗಳನ್ನು ಹೊಂದಿದ ಸಂಸ್ಥೆಯನ್ನು ಉದಾರೀಕರಣ ನೀತಿಯಂತೆ ಅಸ್ಥಿರಗೊಳಿಸಲು 23 ಹೊಸ ಖಾಸಗಿ ಕಂಪನಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಯಾರೂ ಕೂಡ ದೇಶದ ವಿಮಾ ಕ್ಷೇತ್ರದಲ್ಲಿ ಯಶಸ್ವಿಯಾಗಿಲ್ಲ, ಭಾರತೀಯ ಜೀವವಿಮಾ ನಿಗಮ ಈಗಲೂ ಸಹ ಮೊದಲ ಸ್ಥಾನದಲ್ಲಿರುವುದು ನಮ್ಮ ಸಂಸ್ಥೆ ವಿಶ್ವಾಸಾರ್ಹತೆ ಸೂಚಿಸುತ್ತದೆ ಎಂದರು.

ಸ್ಥಳೀಯ ಶಾಖೆ ಹಿರಿಯ ಶಾಖಾಧಿಕಾರಿ ಎಸ್.ಗುರುರಾಜರಾವ್ ಮಾತನಾಡಿ, ಭಾರತೀಯ ಜೀವವಿಮಾ ನಿಗಮವನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ನಿಗಮದ ಷೇರುಗಳು ಮೌಲ್ಯ ಕಳೆದುಕೊಳ್ಳುತ್ತಿವೆ ಎಂದು ಅಪಪ್ರಚಾರ ನಡೆಸಲಾಗುತ್ತಿದೆ. ಜೀವ ವಿಮಾ ಪ್ರತಿನಿಧಿಗಳು ಜನರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಿ, ವೃತ್ತಿಗೆ ಸಂಬಂಧಿಸಿದ ಹೊಸ ವಿಚಾರ ತಿಳಿದುಕೊಂಡು, ಖಾಸಗಿ ಕಂಪನಿಗಳ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ನಿಗಮದ ಹಿರಿಯ ವಿಭಾಗಾಧಿಕಾರಿ ಜಿ.ಸತ್ಯನಾರಾಯಣ, ನಾಗೇಶ್ವರರಾವ್, ಶ್ರೀಕಾಂತ್, ಜಿ.ಆರ್.ನರಸಿಂಹನ್, ಸಿದ್ದಲಿಂಗ ಒಡೆಯರ್, ಬಿ.ಸಿ.ಗುರುಪಾದಸ್ವಾಮಿ, ಪ್ರದೀಪ್, ಅರವಿಂದ ಕುಮಾರ್, ಶ್ರೀಧರ ರಾವ್, ತಾಲೂಕು ಸಂಘಟನೆ ಅಧ್ಯಕ್ಷ ಎನ್.ರವಿ, ಎಂ.ಪಿ.ಪ್ರಕಾಶ್, ಮಹದೇವಪ್ಪ, ಪಿ.ಚಂದ್ರ, ಬಸವರಾಜಪ್ಪ, ಬಿಳುಗಲಿ ನಾಗೇಂದ್ರ, ಬಿ.ಎಲ್.ನಾಗೇಂದ್ರ, ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ನರಭಕ್ಷಕ ಚಿರತೆ ಸೆರೆಗೆ ಅಗತ್ಯ ಸಿದ್ಧತೆ

ಡಿಸಿಎಫ್ ಕಮಲಾ ಕರಿಕಾಳನ್

> **ಕೆಲವರು ಅನಗತ್ಯವಾಗಿ ಕರೆ ಮಾಡಿ ಮಿಸ್‌ಗೈಡ್ ಮಾಡುತ್ತಿರುವ ಬಗ್ಗೆ ದೂರುಗಳಿವೆ. ಸಾರ್ವಜನಿಕರು ದಯಮಾಡಿ ಅನಗತ್ಯವಾಗಿ ಕರೆ ಮಾಡದೇ ಅಧಿಕೃತವಾಗಿ ಮಾಹಿತಿ ಇದ್ದಲ್ಲಿ ನೀಡಿ. –ಕಮಲಾ ಕರಿಕಾಳನ್, ಡಿಸಿಎಫ್.**

> **ತಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವುದರಿಂದ ತಾಲೂಕಿನ ಸಾರ್ವಜನಿಕರು, ತಮ್ಮ ದಿನನಿತ್ಯ ಚಟುವಟಿಕೆಗಳನ್ನು ಬೆಳಗ್ಗೆ 8ರಿಂದ ಸಂಜೆ 5.30ರೊಳಗೆ ಮಾತ್ರ ನಿರ್ವಹಿಸಬೇಕು ಹಾಗೂ ಅನವಶ್ಯಕವಾಗಿ ರಾತ್ರಿ ಹೊರಗಡೆ ಓಡಾಡುವುದನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ಗ್ರಾಮಸ್ಥರು ಚಿರತೆ ಕಂಡಲ್ಲಿ ಅರಣ್ಯ ಟೋಲ್ ಫ್ರೀ ದೂ:1926 ಅನ್ನು ಸಂಪರ್ಕಿಸಿ.**
> **–ಯಮುನಾ, ಉಪವಲಯ ಅರಣ್ಯ ಅಧಿಕಾರಿ, ತಿ.ನರಸೀಪುರ.**



ತಿ.ನರಸೀಪುರ, ಡಿ.3– ನರಭಕ್ಷಕ ಚಿರತೆ ಸೆರೆ ಹಿಡಿಯಲು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ನಿಗದಿತ ಪ್ರದೇಶಗಳಲ್ಲಿ ಬೋನುಗಳನ್ನು ಇಟ್ಟು ಹದ್ದಿನಕಣ್ಣಿಟ್ಟು ಕಾಯಲಾಗುತ್ತಿದೆ ಎಂದು ಡಿಸಿಎಫ್ ಕಮಲಾ ಕರಿಕಾಳನ್ ತಿಳಿಸಿದರು.

ತಾಲೂಕಿನಲ್ಲಿ ಚಿರತೆ ಆತಂಕ ಹಿನ್ನೆಲೆಯಲ್ಲಿ ಶುಕ್ರವಾರದಿಂದ ಆರಂಭಗೊಂಡ ಚಿರತೆ ಕಾರ್ಯಾಚರಣೆ ಮೇಲ್ವಿಚಾರಣೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿರತೆ ಸೆರೆಗೆ 13 ನಿಯೋಜಿತ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. 120 ಮಂದಿ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಮೈಸೂರು ಮತ್ತು ಬಂಡೀಪುರದಿಂದ ತಂಡಗಳು ಬಂದಿದೆ. ಪ್ರತಿ ತಂಡದಲ್ಲಿ ಒಬ್ಬ ಶೂಟರ್ ಇದ್ದು, ಅವರಿಗೆ ಅಗತ್ಯ ಪರಿಕರಗಳನ್ನು ನೀಡಲಾಗಿದೆ. ಕಳೆದ ರಾತ್ರಿಯಿಂದಲೇ ನಿರಂತರವಾಗಿ ಗಮನವಿಟ್ಟು ಕಾರ್ಯಪಡೆ ಕಾರ್ಯ ನಿರ್ವಹಿಸುತ್ತಿದೆ. ಈಗಾಗಲೇ 20 ಕ್ಯಾಮೆರಾಗಳನ್ನು ಚಿರತೆ ಸಂಚಾರ ಗ್ರಾಮಗಳಲ್ಲಿ ಅಳವಡಿಸಲು ಕ್ರಮ ಕೈಗೊಂಡಿದ್ದೇವೆ. ವೈದ್ಯರ ತಂಡ ಕೂಡ ಕಾರ್ಯನಿರ್ವಹಿಸುತ್ತಿದೆ ಎಂದರು.

ಪ್ರಸ್ತುತ ಕೂಂಬಿಂಗ್ ಕಾರ್ಯಾಚರಣೆ ಪ್ರಗತಿಯಲ್ಲಿದೆ. ಪ್ರಮುಖವಾಗಿ ಉಕ್ಕಲಗೆರೆ ಮಲ್ಲಿಕಾರ್ಜುನಸ್ವಾಮಿ ಹಾಗೂ ಒಡ್ಗಲ್ ರಂಗನಾಥಸ್ವಾಮಿ ಬೆಟ್ಟದ ಬಳಿ ವಿಶೇಷವಾಗಿ ಹುಡುಕಾಟ ನಡೆಸಲಾಗುತ್ತಿದೆ. ಚಿರತೆ ಕಣ್ಣಿಗೆ ಬೀಳಬೇಕಿದೆ. ಅಲ್ಲಿ ಹೋಯಿತು, ಇಲ್ಲಿ ಹೋಯಿತು ಎಂಬ ಮಾಹಿತಿ ಸಿಕ್ಕ ಕೂಡಲೇ ಎಚ್ಚರಿಕೆ ವಹಿಸುತ್ತಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಮುಗಿಯದ ಜನರ ಆತಂಕ: ತಾಲೂಕಿನಾದ್ಯಂತ ಅಲ್ಲಲ್ಲಿ ಚಿರತೆ ಕಂಡು ಬರುತ್ತಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಜನರು ಭಯಭೀತರಾಗಿದ್ದು, ಆತಂಕದಲ್ಲಿ ಬದುಕುವಂತಾಗಿದೆ. ಸಂಜೆ ವೇಳೆ ಗ್ರಾಮೀಣ ಜನರು ಹೊರಬರದಂತಾಗಿದೆ. ರೈತರು ಜಮೀನುಗಳಿಗೆ ತೆರಳಲು ಭಯಪಡುವಂತಾಗಿದೆ. ಬೆಳೆದಿರುವ ಕಬ್ಬು ಕಟಾವು ಮಾಡಲು ಅನುಮತಿ ನೀಡದಿರುವುದು ಕೂಡ ಚಿರತೆ ಹಾವಳಿ ಹೆಚ್ಚಾಗಲು ಕಾರಣವಾಗಿದೆ ಎಂಬುದು ಸಾರ್ವಜನಿಕ ಅಭಿಪ್ರಾಯ.



ಮೂಗೂರಿನ ಕೆಪಿಎಸ್ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಉಚಿತವಾಗಿ ಶೂ ವಿತರಿಸಲಾಯಿತು. ಈ ವೇಳೆ ಶಾಲೆ ಉಪಾಧ್ಯಕ್ಷ ಸಿದ್ಧರಾಜು, ಸಮಿತಿ ಅಧ್ಯಕ್ಷ ಮಹಾದೇವಸ್ವಾಮಿ, ಸಾವಿತ್ರಮ್ಮ, ಮುಖ್ಯ ಶಿಕ್ಷಕ ಹನುಮಂತಪ್ಪ ತಳವಾರ, ಕೇಶವ್, ವನಜ, ವೀಣಾ, ಆನಂದ್, ರಮೇಶ್, ನಿರ್ಮಲಾ, ಮಹದೇವ, ರಂಜಿತಾ, ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

ವಸತಿ ಯೋಜನೆ ಆರಂಭಕ್ಕೆ ಒತ್ತಾಯ



ತಿ.ನರಸೀಪುರ, ಡಿ.3– ಬಿಜೆಪಿ ಸರ್ಕಾರ ರದ್ದುಪಡಿಸಿರುವ ವಸತಿ ಯೋಜನೆ ಆರಂಭಿಸಬೇಕು ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ಒತ್ತಾಯಿಸಿದರು.

ಪುರಸಭೆಯ ವರುಣಾ ಕ್ಷೇತ್ರ ವ್ಯಾಪ್ತಿಯ ಭೈರಾಪುರ 3ನೇ ವಾರ್ಡ್‌ನಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಸಾಮಾಜಿಕ ಭದ್ರತಾ ಯೋಜನೆಯಡಿ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ ಹಲವು ಅರ್ಹ ಫಲಾನುಭವಿಗಳಿಗೆ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಗ್ರಾಮೀಣ ಜನರಿಗೆ ನೀಡುತ್ತಿದ್ದ ವಸತಿ ಯೋಜನೆಗಳನ್ನು ರದ್ದುಪಡಿಸಿದ್ದು, ಗ್ರಾಮೀಣ ಪ್ರದೇಶಗಳಿಗೆ ವಸತಿ ಯೋಜನೆಯಡಿ ಮನೆಗಳು ಅವಶ್ಯಕತೆಯಿದ್ದು, ತಕ್ಷಣ ಸರ್ಕಾರ ವಸತಿ ಯೋಜನೆಗಳನ್ನು ಪುನರ್ ಆರಂಭಿಸಬೇಕು ಎಂದು ಹೇಳಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಮಾಡಿದ್ದಾರೆ. ಭೈರಾಪುರಕ್ಕೆ ಹತ್ತು ಹಲವು ಯೋಜನೆಗಳೊಂದಿಗೆ ಕೋಟ್ಯಾಂತರ ರೂ. ಬಿಡುಗಡೆ ಮಾಡಿರುವ ಸಿದ್ದರಾಮಯ್ಯನವರಿಗೆ ನಮ್ಮ ಗ್ರಾಮ ಚಿರಋಣಿ. ಹಾಗಾಗಿ ಸಿದ್ದರಾಮಯ್ಯನವರನ್ನು ವರುಣಾದಿಂದಲೇ ಸ್ಪರ್ಧಿಸುವಂತೆ ಮನವೊಲಿಸಲು ಸರ್ವ ಜನಾಂಗದ ನಿಯೋಗ ತೆರಳಬೇಕು ಎಂದರು. ಈ ವೇಳೆ ಪುರಸಭೆ ಉಪಾಧ್ಯಕ್ಷೆ ನಾಗರತ್ನ, ಮಾಜಿ ಅಧ್ಯಕ್ಷ ಸೋಮಣ್ಣ, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಸಯ್ಯದ್ ಅಹಮದ್, ಮಾಜಿ ಉಪಾಧ್ಯಕ್ಷೆ ಪ್ರೇಮ, ಪುರಸಭೆ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ತುಂಬಲ ಪ್ರಕಾಶ್, ಬಾದಾಮಿ ಮಂಜು, ಬೇಬಿ ಹೇಮಂತ್, ಶ್ರೀಕಂಠ, ರಾಘವೇಂದ್ರ, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಅಮ್ಜಾದ್‌ಖಾನ್, ದಿವಾಕರ್, ಡಾ.ಪ್ರದೀಪ್ ಚೆನ್ನಪ್ಪ, ತಹಸೀಲ್ದಾರ್ ಸಿ.ಜಿ.ಗೀತಾ, ಕಂದಾಯ ನಿರೀಕ್ಷಕ ಸರ್ವೇಶ್, ದಿವಾಕರ್ ಇತರರಿದ್ದರು.

ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನೆ



ಹುಣಸೂರು,ಡಿ.3–ತಾಲೂಕಿನ ದಲ್ಲಾಳು ಗ್ರಾಮದಲ್ಲಿ 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸಮುದಾಯ ಭವನವನ್ನು ಸಮುದಾಯದ ಕಾರ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಜೊತೆಗೆ ಮಹಿಳಾ ಸಂಘಗಳ ಸಭೆ, ಸಮಾರಂಭಗಳಿಗೆ ನೀಡುವಂತೆ ಮನವಿ ಮಾಡಿದರು.

ಅಂಬೇಡ್ಕರ್ ಭವನದಲ್ಲಿ ಗ್ರಂಥಾಲಯ ಸ್ಥಾಪಿಸಿ ದಿನಪತ್ರಿಕೆ ಹಾಕಿಸಿಕೊಳ್ಳಿ. ಅದರ ಖರ್ಚು ವೆಚ್ಚವನ್ನು ನಾನೇ ಭರಿಸುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಚಿಕ್ಕಬೀಚನಹಳ್ಳಿ ಗ್ರಾಪಂ ಅಧ್ಯಕ್ಷೆ ಮಮತಾ, ಉಪಾಧ್ಯಕ್ಷೆ ದೀಪು, ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ್, ಮುಖಂಡರಾದ ಸೋಮಶೇಖರ್, ಕುಮಾರ್, ಬಾಬು, ನಾಗರಾಜಯ್ಯ, ಬೆಟ್ಟಯ್ಯ, ಸಣ್ಣಸ್ವಾಮಿ, ಚಲುವರಾಜ್, ಕಣ್ಣಪ್ಪ, ಸಿದ್ದೇಗೌಡ, ನಟರಾಜ್, ನಾಗೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೋಹನ್ ಕುಮಾರ್, ಪಿಡಿಒ ಛಾಯಾದೇವಿ, ವಿಜಯ್ ಇದ್ದರು.

ಬೈಕ್‌ಗೆ ಟಾಟಾ ಏಸ್ ಡಿಕ್ಕಿ: ಇಬ್ಬರಿಗೆ ಗಾಯ

ಬೆಟ್ಟದಪುರ, ಡಿ.3– ಬೈಕ್‌ಗೆ ಟಾಟಾ ಏಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಹರದೂರು ಕೆರೆ ಬಳಿ ನಡೆದಿದೆ. ಪಿರಿಯಾಪಟ್ಟಣ ತಾಲೂಕಿನ ಅನಿವಾಳು ಗ್ರಾಮದ ಪಿಯುಸಿ ವಿದ್ಯಾರ್ಥಿನಿ ರಕ್ಷಿತ ಹಾಗೂ ಗಣೇಶ್ ಗಾಯಗೊಂಡವರು. ಇರಿಬ್ಬರಿಗೂ ಬೆಟ್ಟದಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಾಹನ ತಪಾಸಣೆ: 2.43 ಲಕ್ಷ ದಂಡ ವಸೂಲಿ

ಮೈಸೂರು,ಡಿ.3(ಎಂಕೆ)–ಸಂಚಾರ ನಿಯಮಗಳ ಜಾರಿ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವಿಶೇಷ ಜಂಟಿ ತಪಾಸಣಾ ಕಾರ್ಯಾಚರಣೆ ಮುಂದುವರೆಸಿರುವ ಮೈಸೂರು ನಗರ ಪೊಲೀಸರು, ಶನಿವಾರ 2.43 ಲಕ್ಷ ರೂ. ದಂಡ ವಸೂಲಿ ಮಾಡಿದ್ದಾರೆ. ಸಂಜೆ 6ರಿಂದ ರಾತ್ರಿ 9 ರವರೆಗೆ ಪ್ರತ್ಯೇಕ ಸ್ಥಳಗಳಲ್ಲಿ ತಪಾಸಣಾ ಕಾರ್ಯಾಚರಣೆಗಿಳಿದ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರು ಗೂಡ್ಸ್ ವಾಹನಗಳು, ಕಾರು, ಮಿನಿ ವ್ಯಾನ್, ತ್ರಿಬಲ್ ರೈಡಿಂಗ್ ಸೇರಿದಂತೆ ಅನುಮಾನಾಸ್ಪದವಾಗಿ ಕಂಡುಬರುವ ವಾಹನಗಳನ್ನು ನಿಲ್ಲಿಸಿ, ತಪಾಸಣೆ ನಡೆಸಿದರು.

2298 ವಾಹನಗಳನ್ನು ತಪಾಸಣೆ ನಡೆಸಿರುವ ಪೊಲೀಸರು, 460 ಪ್ರಕರಣ ದಾಖಲಿಸಿ 22 ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ 2.43 ಲಕ್ಷ ರೂ. ದಂಡ ವಸೂಲಿ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ವಿಶೇಷ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ರಾತ್ರಿ ವೇಳೆ ಸಂಚಾರ ನಿಯಮ ಉಲ್ಲಂಘನೆಯಾಗಿದ್ದರೆ ಅಂತಹ ವಾಹನಗಳನ್ನು ವಶಕ್ಕೆ ಪಡೆಯಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಎಚ್ಚರಿಸಿದ್ದಾರೆ.

ಅನ್ಯಾಯಕ್ಕೊಳಗಾದ ಸಮುದಾಯಗಳಿಗೆ ಮೀಸಲಾತಿ ಅವಶ್ಯಕ

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ

ಹೆಚ್.ಡಿ.ಕೋಟೆ,ಡಿ.3–ಸಾಮಾಜಿಕವಾಗಿ ಅನ್ಯಾಯಕ್ಕೊಳಗಾದ ಸಮುದಾಯಗಳಿಗೆ ಮೀಸಲಾತಿ ಅವಶ್ಯಕ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ತಿಳಿಸಿದರು.

ತಾಲೂಕಿನ ಕೋಳಗಾಲ ಬಳಿಯ ಬಸಾಪುರ ಗ್ರಾಮದಲ್ಲಿ ವಿಶ್ವಕರ್ಮ ಸಮುದಾಯದಿಂದ ಆಯೋಜಿಸಿದ್ದ ಹೋಬಳಿ ಮಟ್ಟದ ಎಸ್‌ಟಿ ಮೀಸಲಾತಿ ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು.

ವಿಶ್ವಕರ್ಮ ಸಮುದಾಯ ಹಿಂದುಳಿದ ವರ್ಗದ ಮೀಸಲಾತಿ ಪಟ್ಟಿಯಲ್ಲಿದ್ದು, ಇದರಲ್ಲಿ 102 ಜಾತಿಗಳಿವೆ. ಕೆಲವು ಬಲಿಷ್ಠ ಸಮುದಾಯಗಳ ನಡುವೆ ನಮಗೆ ಸಿಗಬೇಕಾದ ಮೀಸಲಾತಿ ಸಿಗುತ್ತಿಲ್ಲ. ಸಮುದಾಯ 5 ಕುಲ ಕಸಬುಗಳನ್ನು ಮಾಡುತ್ತಿದ್ದು, ಜನರ ಜೀವನ ಕಷ್ಟಕರವಾಗಿದೆ. ಹಾಗಾಗಿ ಸಮುದಾಯ ಶಿಕ್ಷಣ ಹಾಗೂ ಉದ್ಯೋಗದಿಂದ ವಂಚಿತರಾಗಿದ್ದು, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ ಎಂದರು.



ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಸಮಾಜದಲ್ಲಿ ಅವಕಾಶಗಳಿಂದ ವಂಚಿತರಾದವರಿಗೆ ಮೀಸಲಾತಿ ಮೂಲಕ ಎಲ್ಲರಂತೆ ಸಮಾನವಾಗಿ ಬದುಕಲು ಅವಕಾಶ ಕಲ್ಪಿಸುವುದನ್ನು ಅಡಕ ಮಾಡಿದ್ದಾರೆ. 1977ರಲ್ಲಿ ಹಾವನೂರು ಅವರ ವರದಿಯಂತೆ ನಮ್ಮ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲಾಯಿತು. ಆದರೆ ನಮ್ಮ ಕುಲಕಸುಬು ಹಾಗೂ ಸಮುದಾಯದ ಸ್ಥಿತಿಗತಿ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕಾಗಿತ್ತು. ನಮಗೆ ರಾಜಕೀಯ ಪ್ರಜ್ಞೆ ಹಾಗೂ ಹೋರಾಟದ ಶಕ್ತಿ ಇಲ್ಲದ ಕಾರಣ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ ಎಂದರು.

ಕುಲಕಸಬು ಮಾಡುವ ಸಮುದಾಯಗಳಿಗೆ ಮೀಸಲಾತಿ ದೊರಕದಿದ್ದರೆ ಅವರ ಸಂಸ್ಕೃತಿ ನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಈಗಾಗಲೇ ಎಸ್‌ಟಿ ಮೀಸಲಾತಿಗಾಗಿ ಸರ್ಕಾರವನ್ನು ಒತ್ತಾಯಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಮಾಜದ ಕುಲಶಾಸ್ತ್ರ ಅಧ್ಯಯನ ನಡೆಯಲಿದೆ. ಸಮುದಾಯದವರು ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಈಗಲಾದರೂ ಎಚ್ಚೆತ್ತು ಮೀಸಲಾತಿ ಪಡೆಯಲು ಸಂಘಟಿತ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ರಾಜ್ಯಾದ್ಯಂತ ಹೋಬಳಿ ಮಟ್ಟದಲ್ಲಿ ಎಸ್‌ಟಿ ಮೀಸಲಾತಿ ಜಾಗೃತಿ ಸಭೆಗಳನ್ನು ನಡೆಸುವ ಮೂಲಕ ಸಮುದಾಯದ ಜನರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಮರಗೆಲಸ ಕಾರ್ಮಿಕರ ಸಂಘದ ತಾಲೂಕು ಅಧ್ಯಕ್ಷ ಪ್ರಮೋದ್, ವಿಶ್ವಕರ್ಮ ರಾಜ್ಯ ಯುವ ಸೇನಾ ಅಧ್ಯಕ್ಷ ಶ್ರೀನಿವಾಸ್, ಸಿದ್ದಪ್ಪಾಜಿ, ವೆಂಕಟೇಶ್, ನರಸಿಂಹಮೂರ್ತಿ, ಚನ್ನಚಾರ್, ಸೋಮಚಾರ್, ಎಲ್‌ಐಸಿ ರಾಜು, ಕೃಷ್ಣಚಾರ್, ಸೋಮಣ್ಣ ಇದ್ದರು.

> “ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ಅವರು ನಮ್ಮ ಸಮುದಾಯದ ಏಳಿಗೆ ಹಾಗೂ ಎಸ್‌ಟಿ ಮೀಸಲಾತಿ ನೀಡುವ ವಿಚಾರವಾಗಿ ರಾಜ್ಯಾದ್ಯಂತ ಹೋರಾಡಲು ಸಿದ್ಧವಾಗಿದ್ದು, ಸಮುದಾಯಕ್ಕೆ ಮೀಸಲಾತಿಯಿಂದ ದೊರೆಯುವ ಅನುಕೂಲಗಳ ಬಗ್ಗೆ ಸಮುದಾಯಕ್ಕೆ ಮನದಟ್ಟು ಮಾಡಿಕೊಡಲು ಹೋಬಳಿ ಮಟ್ಟದಲ್ಲಿ ಸಭೆ ನಡೆಸಿಕೊಂಡು ಬರುತ್ತಿದ್ದಾರೆ. ವಿಶ್ವಕರ್ಮ ಸಮುದಾಯದವರು ಸಂಪೂರ್ಣ ಬೆಂಬಲ ಸೂಚಿಸಬೇಕು.
> **–ವೆಂಕಟೇಶ್, ವಿಶ್ವಕರ್ಮ ಸಮಾಜದ ತಾಲೂಕು ಮಾಜಿ ಅಧ್ಯಕ್ಷ.**

ಹೆಚ್.ಆರ್.ಸಭಾಪತಿ ಮೊದಲಿಯರ್ ನಿಧನ



ಹುಣಸೂರು, ಡಿ.3– ಪುರಸಭೆ ಮಾಜಿ ಅಧ್ಯಕ್ಷ ದಿ.ಹೆಚ್.ಆರ್.ಅಣ್ಣಾಮಲೈ ಮೊದಲಿಯರ್ ಸಹೋದರ ಶತಾಯುಷಿ ಹೆಚ್.ಆರ್.ಸಭಾಪತಿ ಮೊದಲಿಯರ್ (102) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಶಿವಸ್ವಾಮಿ



ತಿ.ನರಸೀಪುರ, ಡಿ.3– ತಾಲೂಕಿನ ಬೆಳಕನಹಳ್ಳಿ ಗ್ರಾಮದ ನಿವೃತ್ತ ರೇಷ್ಮೆ ಇಲಾಖೆ ಅಧಿಕಾರಿ ಬಿ.ಶಿವಸ್ವಾಮಿ (72) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ಬೆನಕನಹಳ್ಳಿಯಲ್ಲಿ ಭಾನುವಾರ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ.

ಮತಾಂತರಗೊಂಡರೆ ಜಾತಿಯಾಧಾರಿತ ಮೀಸಲಾತಿ ಇಲ್ಲ

ಮದ್ರಾಸ್ ಹೈಕೋರ್ಟ್ ಮಹತ್ವದ ತೀರ್ಪು

ಚೆನ್ನೈ, ಡಿ.3– ಮತಾಂತರದೊಂದಿಗೆ ಜಾತಿ ಮುಂದುವರಿಯುವುದಿಲ್ಲ ಎಂದು ಹೇಳುವ ಮೂಲಕ ಇಸ್ಲಾಂಗೆ ಮತಾಂತರಗೊಂಡ ಹಿಂದೂ ಯುವಕನ ಹಿಂದುಳಿದ ಕೋಟಾ ಹಕ್ಕನ್ನು ಮದ್ರಾಸ್ ಹೈಕೋರ್ಟ್ ತಿರಸ್ಕರಿಸಿದೆ.

ಯಾವುದೇ ವ್ಯಕ್ತಿ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರಗೊಂಡ ಬಳಿಕ ತನ್ನ ಹಿಂದಿನ ಧರ್ಮದಲ್ಲಿನ ಜಾತಿಯಾಧಾರಿತವಾದ ಮೀಸಲಾತಿ ಸವಲತ್ತು ಪಡೆಯಲಾಗದು ಎಂದು ಮದ್ರಾಸ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಮತಾಂತರಗೊಂಡ ಬಳಿಕ ಆ ವ್ಯಕ್ತಿಯು ಹುಟ್ಟಿನಿಂದ ಬಂದಿದ್ದ ಜಾತಿ ಅಥವಾ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡಿದ್ದ ವ್ಯಕ್ತಿಯು, ಹುಟ್ಟಿನಿಂದ ಬಂದಿದ್ದ ಸಮುದಾಯದ ಅಡಿ ಮೀಸಲಾತಿ ಸೌಲಭ್ಯ ಕಲ್ಪಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಿ ಆರ್ ಸ್ವಾಮಿನಾಥನ್ ಅವರ ನೇತೃತ್ವದ ಏಕಸದಸ್ಯ ಪೀಠವು ವಜಾ ಮಾಡಿದೆ.

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಎಂ.ಎನ್.ನಾಗರತ್ನರವರು
ನಿಧನ : 04-12-2021
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ಇಂತಿ ದುಃಖತಪ್ತರು:
ಶ್ರೀ ಬಸವರಾಜು ಎಂ.ಎಸ್. ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು



ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಎ.ವಿ. ವೀರರಾಜೇ ಅರಸ್ ರವರ ಕುಟುಂಬದ ಸದಸ್ಯರಾದ [1] ಶ್ರೀಮತಿ ಸುವರ್ಣ ಚಂದ್ರು, [2] ಶ್ರೀಮತಿ ವಿದ್ಯಾ ಎ.ವಿ. ಮತ್ತು [3] ಶ್ರೀ ಜಗತ್ಪಾಲ್ ಎನ್. ಅರಸ್ ಎಂ. ಎಸ್. ಉರುಫ್ ಅಭಿ ರವರುಗಳು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ಕೈಗಾರಿಕಾ ಬಡಾವಣೆ, 3ನೇ ಹಂತದಲ್ಲಿರುವ ನಿವೇಶನ ಸಂಖ್ಯೆ 12/ಎ-4 ರ ವಿಸ್ತೀರ್ಣ ಪೂರ್ವ-ಪಶ್ಚಿಮ 60.960122 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣ: 30.480061 ಮೀಟರ್‌ಗಳು, ಒಟ್ಟು ವಿಸ್ತೀರ್ಣ: 1858.06 ಚದರ ಮೀಟರ್‌ಗಳು. ಮೈಸೂರು ಮಹಾನಗರ ಪಾಲಿಕೆ ಖಾತಾ ನಮೂನೆ-2 ರ ರಂತೆ ಸ್ವತ್ತಿನ ಸಂಖ್ಯೆ 11-3-1-223 ಮತ್ತು ಪಿಐಡಿ ನಂ. 24719. ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ಸಂಖ್ಯೆ 12/ಎ-2, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಖಾಸಗಿ ಸ್ವತ್ತು ಮತ್ತು ದಕ್ಷಿಣಕ್ಕೆ : ನಿವೇಶನ ಸಂಖ್ಯೆ 12/ಎ-4 ರ ಉಳಿಕೆ ಸ್ವತ್ತು.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು,
ಎಸ್.ಎಲ್.ಡಿ. ಲಾ ಫರ್ಮ್
ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಪ್ರಮಾಣ ಪತ್ರ

ಮೈಸೂರು ಸಿಟಿ, ಬೋಗಾದಿ, ಬೈಪಾಸ್ ರೆಸ್ಟೋರೆಂಟ್ ಹತ್ತಿರ, ಬೋಗಾದಿ ರಿಂಗ್ ರಸ್ತೆ, ಮನೆ ನಂ. 69/3 ರಲ್ಲಿ ವಾಸವಾಗಿರುವ ಶ್ರೀಮತಿ ವಿಜಯಲಕ್ಷ್ಮಿ (Vijayalakshmi) ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್ ನಂ. 5222 3729 9484, ಪಾನ್ ಕಾರ್ಡ್ ಮತ್ತು ಇತರೆ ದಾಖಲಾತಿಗಳಲ್ಲಿ ನನ್ನ ಹೆಸರು ವಿಜಯಲಕ್ಷ್ಮಿ (Vijayalakshmi) ಎಂದು ನಮೂದಾಗಿದ್ದು, ನನ್ನ ಪಾಸ್‌ಪೋರ್ಟ್ ಸಂಖ್ಯೆ J9337174 ರಲ್ಲಿ ನನ್ನ ಹೆಸರು ವಿಜಯಲಕ್ಷ್ಮಿ ಪೃಥ್ವಿರಾಜ್ (Vijayalakshmi Pruthviraj) ಎಂದು ನಮೂದಾಗಿದ್ದು, ಈ ಎರಡು ಹೆಸರುಗಳು ನನ್ನದೇ ಆಗಿರುತ್ತದೆ. ಪಾಸ್‌ಪೋರ್ಟ್‌ನಲ್ಲಿ ವಿಜಯಲಕ್ಷ್ಮಿ ಎಂದು ಬದಲಾವಣೆ ಮಾಡಿಕೊಡಬೇಕಾಗಿ ನೋಟರಿ ರಮಾದೇವಿ. ಎಂ. ರವರ ಮುಂದೆ ದಿನಾಂಕ 3-12-2022ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/- ವಿಜಯಲಕ್ಷ್ಮಿ

ಹೆಸರು ಬದಲಾವಣೆ

ರವಿಕುಮಾರ್, #14/ಎ, ಕಾಂಟೂರ್ ರಸ್ತೆ, ಆಲನಹಳ್ಳಿ ಲೇಔಟ್, ಮೈಸೂರು, ಪ್ರಮಾಣೀಕರಿಸುವುದೇನೆಂದರೆ, ನನ್ನ ಮಗಳ ಹೆಸರು ಆಧಾರ್ ಕಾರ್ಡ್‌ನಲ್ಲಿ ಸ್ಮಿತಿ ರವಿಕುಮಾರ್ ಎಂದು ನಮೂದಾಗಿದೆ. ಆದರೆ ನನ್ನ ಮಗಳ ಪಾಸ್‌ಪೋರ್ಟ್‌ನಲ್ಲಿ ಮೈಸೂರು ರವಿಕುಮಾರ್ ಸ್ಮಿತಿ ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ನನ್ನ ಮಗಳ ಪಾಸ್ ಪೋರ್ಟ್‌ನಲ್ಲಿ ಸ್ಮಿತಿ ರವಿಕುಮಾರ್ ಎಂದು ತಿದ್ದುಪಡಿ ಮಾಡಿಕೊಡಬೇಕೆಂದು ನೋಟರಿ ಜಿ.ಬಿ. ಚಂದ್ರ ರವರ ಎದುರು ದಿನಾಂಕ 1-12-2022ರಂದು ಪ್ರಮಾಣೀಕರಿಸುತ್ತೇನೆ.

ಸಹಿ/- ರವಿಕುಮಾರ್

ಸ್ಥಾಪನೆ: 1928 ದೂರವಾಣಿ : 0821-2422973

ಕುಂಚಿಟಿಗರ ಸಂಘ (ರಿ.)

(ಧರ್ಮಪಾರಾಯಿಣಿ ಶ್ರೀಮತಿ ಆಲಮ್ಮನವರ ಛತ್ರ) ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲ, ಮೈಸೂರು – 570001.

ಪ್ರಕಟಣೆ

ಕುಂಚಿಟಿಗರ ಸಂಘ (ರಿ) ಮೈಸೂರು ಇದರ ಚುನಾವಣಾ ದಿನಾಂಕದಿಂದ ಮುಂದಿನ 3 ವರ್ಷಗಳ ಅವಧಿಗೆ ಕಾರ್ಯಕಾರಿ ಪರಿಷತ್ ಸದಸ್ಯರ ಚುನಾವಣೆಯನ್ನು ದಿನಾಂಕ: 22.01.2023 ರಂದು ಭಾನುವಾರ ಸಂಘದ ಆವರಣದಲ್ಲಿ ನಡೆಸಲು ದಿನಾಂಕ: 27.11.2022 ರಂದು ನಡೆದ ಕಾರ್ಯಕಾರಿ ಪರಿಷತ್ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಸಂಬಂಧ ಕರಡು ಮತದಾರರ ಪಟ್ಟಿಯನ್ನು ಸಂಘದ ಸೂಚನಾ ಫಲಕ ಹಾಗೂ ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಸದರಿ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಕೈ ಬಿಟ್ಟಿದರೆ, ಹೆಸರು ಮತ್ತು ವಿಳಾಸ ಬದಲಾವಣೆಯಾಗಿದ್ದರೆ ಅಥವಾ ಯಾವುದೇ ವ್ಯತ್ಯಾಸಗಳಿದ್ದಲ್ಲಿ ದಿನಾಂಕ: 25.12.2022 ರ ಸಂಜೆ 5.00 ಗಂಟೆಯೊಳಗೆ ಸಂಘಕ್ಕೆ ಕಛೇರಿ ವೇಳೆಯಲ್ಲಿ ಬಂದು ದಾಖಲೆಗಳನ್ನು ಸಲ್ಲಿಸಿ ಸರಿಪಡಿಸಿಕೊಳ್ಳಲು ಕೋರಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸ್ಥಳ: ಮೈಸೂರು ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ದಿನಾಂಕ: 03.12.2022 ಸಹಿ/- ಅಧ್ಯಕ್ಷರು (ಎಂ.ಪಿ.ನಾಗರಾಜು)

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ) ಮೈಸೂರು

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು
ದೂರವಾಣಿ ಸಂಖ್ಯೆ: 0821-2441988, ಇ-ಮೇಲ್: dhomysore@gmail.com, rchomysore@gmail.com

ಸಂಖ್ಯೆ: ಎನ್.ಹೆಚ್.ಎಂ/ಜಿ.ಆ.ಸೊ/ಮೈ/22/2022-23 ದಿನಾಂಕ: 03.12.2022

ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಖಾಲಿ ಇರುವ ಜಿಲ್ಲಾ ಲೆಕ್ಕಪತ್ರ ವ್ಯವಸ್ಥಾಪಕರು – 01, ಇ-ಪ್ರೋಗ್ರಾಮರ್–01, ಆಪ್ತ ಸಮಾಲೋಚಕರು–01, ಶುಶ್ರೂಷಣಾಧಿಕಾರಿಗಳು–05, ವೈದ್ಯಾಧಿಕಾರಿಗಳು (HDU/ICU)–01, ವೈದ್ಯಾಧಿಕಾರಿಗಳು (RNTCP)–01, Tuberculosis Health Visitor (TBHV)–01, Senior Treatment Supervisor (STS) – 01, ನೇತ್ರ ಸಹಾಯಕರು (Optometrist)–01, Consultant Medicine (NPPC)–01, ವೈದ್ಯಾಧಿಕಾರಿಗಳು (ಎನ್.ಪಿ.ಸಿ.ಡಿ.ಸಿ.ಎಸ್.) –12 ಹುದ್ದೆಗಳಿಗೆ ದಿನಾಂಕ: 13.12.2022 ರೊಳಗೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಸೂಚನೆ: (1) ಈ ನೇಮಕಾತಿಯು ಎನ್.ಹೆಚ್.ಎಂ. ಮಾರ್ಗಸೂಚಿಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. (2) ನೇಮಕಾತಿಯು ತಾತ್ಕಾಲಿಕವಾಗಿದ್ದು, ಮಾರ್ಚ್ 31, 2023ರವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. (3) ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ವಾಸಿಸುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. (4) ಈ ಆಯ್ಕೆಯು ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಮೈಸೂರು ರವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. (5) ಜಿಲ್ಲಾ ಲೆಕ್ಕಪತ್ರ ವ್ಯವಸ್ಥಾಪಕರ ಹುದ್ದೆಯ ಮೊಕದ್ದಮೆಯು ನ್ಯಾಯಾಲಯದಲ್ಲಿ ಇರುವುದರಿಂದ ಆಯ್ಕೆಯಾಗುವ ಅಭ್ಯರ್ಥಿಯು ನ್ಯಾಯಾಲಯದ ಅಂತಿಮ ತೀರ್ಮಾನಕ್ಕೆ ಬದ್ಧರಾಗಿರಬೇಕು. (6) ಆಸಕ್ತರು https://mysore.nic.in ವೆಬ್‌ಸೈಟ್‌ನಲ್ಲಿ ಇರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಲಗತ್ತಿಸಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮೈಸೂರು ಇಲ್ಲಿ ಸಂಪರ್ಕಿಸುವುದು.

ಸಹಿ/- ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/732/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ: ಕರಾಸಾ/ಚಾನವಿ/ಸಂ/ವಾ/1700/2022-23 ದಿನಾಂಕ: 02.12.2022

ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ : 05/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ. ನರಸೀಪುರ, ಗುಂಡ್ಲುಪೇಟೆ, ಸುತ್ತೂರು, ಹನೂರು, ತೆರಕಣಾಂಬಿ, ನಂಜನಗೂಡು ನೂತನ ಮತ್ತು ಹಳೆ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಗೆ ಮಳಿಗೆ ನಡೆಸಲು ಹಾಗೂ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ-ಟೆಂಡರ್/ಸಂಧಾನ ಪ್ರಕಟಣೆ ಸಂ. 05/2022-23 ದಿನಾಂಕ: 02.12.2022 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿವೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ-ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ-ಟೆಂಡರ್ ಮತ್ತು ಮ್ಯಾನುಯಲ್ ಟೆಂಡರ್ ಹಾಗೂ ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1) ಮ್ಯಾನ್ಯುಯಲ್ ಟೆಂಡರ್ & ಸಂಧಾನ ಅರ್ಜಿ ಪಡೆಯಲು ಕಡೆಯ ದಿನಾಂಕ: 15.12.2022, ಸಮಯ: ಕಛೇರಿ ಅವಧಿ. 2) ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸ್ವೀಕರಿಸಲು ಕಡೆಯ ದಿನಾಂಕ: 15.12.2022, ಸಮಯ: ಕಛೇರಿ ಅವಧಿ. 3) ಮ್ಯಾನ್ಯುಯಲ್ ಟೆಂಡರ್ ಮತ್ತು ಸಂಧಾನ ಸಭೆಯ ದಿನಾಂಕ: 16.12.2022, ಸಮಯ: ಮಧ್ಯಾಹ್ನ 12.30 ಗಂಟೆಗೆ.

1) ಇ-ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ, ಡಿ.ಡಿ ಸಲ್ಲಿಸಲು ಕಡೆಯ ದಿನಾಂಕ: 20.12.2022, ಸಮಯ: ಕಛೇರಿ ಅವಧಿ. 2) ಇ-ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 20.12.2022, ಸಮಯ: ಕಛೇರಿ ಅವಧಿ. 3) ಸಂಧಾನ ಸಭೆಯ ದಿನಾಂಕ: 22.12.2022, ಸಮಯ: ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ), ಇವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂ: 7760990302, 9037760911).

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ಬೆಂ.ನಗರ/3380/ಆಕಾರ್/2022-23 ಕರಾರಸಾ ನಿಗಮ, ಚಾಮರಾಜನಗರ ವಿಭಾಗ

VIDYA PRACHARA SANGHA®
VIJAYA COLLEGE OF EDUCATION
PANDAVAPURA - 571434
(Recognised by NCTE and Karnataka State Govt)
Phone-9945846111. Email: vijayacollegevce@gmail.com
Website: www.vijayacofeduppura.org

Recruitment Notification

Sl. No	Post	Qualification	No.of Vacancy
1	Principal	a) M.Ed., and M.A/M.Sc/M.Com b) Ph.D in education/pedagogy subjects. c) Minimum 8 years of teaching experience in B.Ed College	1
2	Assistant Professors in Perspectives in Education.	M.A in Social Science and M.Ed., along with NET/K-SET/Ph.D.(History/Economics/Political Science/ Sociology/Psychology/Philosophy).	4
3	Assistant Professors in pedagogy subjects.	M.A/M.Sc/M.Com and M.Ed., along with NET/K-SET/Ph.D. (Kannada, English, Commerce, Social Science, Physics, Chemistry, Biology, Mathematics) **Each Subjects-1 Post.**	8
4	Physical Education Director	M.P.Ed., NET/K-SET/Ph.D.	1
5	Fine Arts	MFA.	1
6	Performing Arts	Post-Graduation in Music/Dance/Theatre Arts.	1

Applications are invited for qualified candidates for B.Ed College for the year 2022-23

Note:
1) Qualification and eligibility as per NCTE/Mysore University Regulation/Norms.
2) For Principal/Assistant Professor Post minimum 55% in M.Ed and M.A/M.Sc/M.Com compulsory.
3) Send applications Bio-data along with Xerox copies of all marks card and 1 passport size photo within 15 days from the notification last date submission of application to Secretary Vidya Prachara Sangha®, Krishnanagara, Pandavapura Town, Mandya District-571434.

Sd/- Sri. C.S. Puttaraju, President
Vidya Prachara Sangha®, Pandavapura.

Sd/- Sri, K.V. Basavaraju B.E., MBA
Hon. Secretary
Vidya Prachara Sangha®, Pandavapura.